ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 1 ಸೋಮವಾರ 2022

ಸಂಪುಟ: 43 | ಸಂಚಿಕೆ: 107 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774,
ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಹಸು ಮೇಯಿಸುತ್ತಿದ್ದ ರೈತರ ಮೇಲೆ ಹುಲಿ ದಾಳಿ: ಓರ್ವ ಸಾವು

● ಅದೃಷ್ಟವಶಾತ್ ಇಬ್ಬರು ಪಾರು ● ನಂಜನಗೂಡು ತಾಲೂಕು ಒಡೆಯನಪುರದಲ್ಲಿ ಘಟನೆ

ನಂಜನಗೂಡು,ಜು.31(ಎಂಟಿವೈ)– ಹೊಲದಲ್ಲಿ ಹಸು ಮೇಯಿಸುತ್ತಿದ್ದ ವ್ಯಕ್ತಿಗಳಿಬ್ಬರ ಮೇಲೆ ಹುಲಿ ದಾಳಿ ನಡೆಸಿದ್ದು, ಓರ್ವ ಸ್ಥಳದಲ್ಲೇ ಸಾವನ್ನಪ್ಪಿ ಮತ್ತಿಬ್ಬರು ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡಂಚಿನ ಗ್ರಾಮವಾದ ನಂಜನಗೂಡು ತಾಲೂಕಿನ ಒಡೆಯನಪುರದ ಬಳಿ ಹುಲಿ ದಾಳಿ ನಡೆದಿದ್ದು, ಗ್ರಾಮದ ನಿವಾಸಿ ಪುಟ್ಟಸ್ವಾಮಿಗೌಡ(45) ಎಂಬುವರು ಹುಲಿ ದಾಳಿಗೆ ಬಲಿಯಾಗಿದ್ದಾರೆ. ಪುಟ್ಟಸ್ವಾಮಿಗೌಡ ಅವರನ್ನು ಕೊಂದು ಹಾಕಿದ



ಪುಟ್ಟಸ್ವಾಮಿಗೌಡ

ಹುಲಿ, ಸಮೀಪದಲ್ಲೇ ಮೇಯುತ್ತಿದ್ದ ಪುಟ್ಟಸ್ವಾಮಿಗೌಡರ ಹಸುವಿನ ಮೇಲೆ ದಾಳಿ ನಡೆಸಿ ಕೊಂದು ಮಾಂಸ ಭಕ್ಷಿಸಿದೆ. ಹುಲಿ ದಾಳಿ ವೇಳೆ ಗ್ರಾಮದ ಮತ್ತಿಬ್ಬರು ಸ್ಥಳದಲ್ಲೇ ಇದ್ದು, ಕೂದಲೆಳೆ ಅಂತರದಲ್ಲಿ ಪಾರಾಗಿದ್ದಾರೆ. ಬಂಡೀಪುರ ಕಾಡಂಚಿನ ಗ್ರಾಮವಾದ ಒಡೆಯನಪುರ ಅರಣ್ಯದ ಅಂಚಿನಲ್ಲಿರುವ ಜಮೀನಿನಲ್ಲಿ ಹಸು ಮೇಯಿಸುತ್ತಿದ್ದಾಗ ಹುಲಿ ದಾಳಿ ನಡೆದಿದೆ. ಅರಣ್ಯದ ಗಡಿಯಿಂದ ಕೇವಲ 50 ಮೀಟರ್ ಅಂತರದಲ್ಲೇ ದಾಳಿ ನಡೆದಿದ್ದು, ಗ್ರಾಮಸ್ಥರು ಹಾಗೂ ದನಗಾಹಿಗಳು ಆತಂತಕಕ್ಕೆ ▶ 8ನೇ ಪುಟಕ್ಕೆ

“ಹುಲಿ ದಾಳಿಯನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಜನರನ್ನು ರಕ್ಷಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಕ್ಕೆ ಸೂಚಿಸಲಾಗಿದೆ. ದನ ಮೇಯಿಸುತ್ತಿದ್ದ ವೇಳೆ ವ್ಯಕ್ತಿಯೊಬ್ಬರು ಹುಲಿ ದಾಳಿಗೆ ಬಲಿಯಾಗಿದ್ದಾರೆ. ಮೃತರ ಕುಟುಂಬಕ್ಕೆ ಪರಿಹಾರ ನೀಡುತ್ತೇವೆ. ಘಟನೆ ನಡೆದ ಸ್ಥಳದಿಂದ ಅರಣ್ಯದ ಗಡಿ 20–30 ಮೀಟರ್‌ನಷ್ಟು ಅಂತರವಿದೆ. ಸೋಮವಾರ(ಆ.1)ದಿಂದ ಸಾಕಾನೆಗಳ ಸಹಕಾರದಿಂದ ಕಾರ್ಯಾಚರಣೆ ಆರಂಭಿಸುತ್ತೇವೆ. ಯಾವ ಕಾರಣಕ್ಕೆ ಹುಲಿ ದಾಳಿ ನಡೆಸಿದೆ ಎಂಬುದು ಕಾರ್ಯಾಚರಣೆ ವೇಳೆ ತಿಳಿಯಲಿದೆ.
– ಡಾ.ಪಿ.ರಮೇಶ್‌ಕುಮಾರ್, ನಿರ್ದೇಶಕ, ಬಂಡೀಪುರ ಹುಲಿ ಯೋಜನೆ



ಏಕಾಏಕಿ ಹುಲಿ ದಾಳಿ ಮಾಡಿತು

“ಹಸು ಮೇಯಿಸುತ್ತಿದ್ದ ವೇಳೆ ಹೊಲದಲ್ಲೇ ಅಡಗಿ ಕುಳಿತಿದ್ದ ಹುಲಿ ಏಕಾಏಕಿ ದಾಳಿ ಮಾಡಿತು. ಪುಟ್ಟಸ್ವಾಮಿಗೌಡ, ನಾಗರಾಜೇಗೌಡ ಮತ್ತು ನಾನು ಹಸು ಮೇಯಿಸುತ್ತಿದ್ದೆವು. ಈ ವೇಳೆ ಪುಟ್ಟಸ್ವಾಮಿಗೌಡ ಮೇಲೆ ಹುಲಿ ಏಕಾಏಕಿ ದಾಳಿ ನಡೆಸಿತು. ಇದರಿಂದ ಭಯದಿಂದ ನಾವು ಓಡಿಹೋದೆವು. ಆದರೂ ನಮ್ಮತ್ತ ಹುಲಿ ಬರಲು ಯತ್ನಿಸಿತು. ಆಗ ಅಲ್ಲಿದ್ದ ಹಸುವಿನ ಮೇಲೆ ದಾಳಿ ನಡೆಸಿ ಹಸುವನ್ನೂ ಕೊಂದು ಹಾಕಿತು. ನಾವು ಪ್ರಾಣ ಭಯದಿಂದ ಓಡಿಹೋಗಿ ಸ್ವಲ್ಪಅಂತರದಲ್ಲಿ ಪಾರಾದೆವು. –ಸುನೀಲ್‌ಕುಮಾರ್, ಪ್ರತ್ಯಕ್ಷದರ್ಶಿ

ಸಾಮಾಜಿಕ ಮಾಧ್ಯಮ ಖಾತೆಯ ಪ್ರೊಫೈಲ್ ಚಿತ್ರವಾಗಿ



ತಿರಂಗ ಬಳಸಿ

‘ಮನ್ ಕಿ ಬಾತ್’ನಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮನವಿ

ನವದೆಹಲಿ: ಆಗಸ್ಟ್ 2 ಮತ್ತು 15ರ ನಡುವಿನ ಅವಧಿಯಲ್ಲಿ ದೇಶದ ನಾಗರಿಕರು ತಮ್ಮ ಸಾಮಾಜಿಕ ಮಾಧ್ಯಮಗಳ ಖಾತೆಗಳ ಪ್ರೊಫೈಲ್ ಚಿತ್ರವಾಗಿ ‘ತಿರಂಗ’ವನ್ನು ಬಳಸುವಂತೆ ಪ್ರಧಾನಿ ನರೇಂದ್ರ ಮೋದಿ ತಮ್ಮ ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ಮನವಿ ಮಾಡಿದ್ದಾರೆ.

ಮಾಸಿಕ ರೇಡಿಯೊ ಕಾರ್ಯಕ್ರಮ ‘ಮನ್ ಕಿ ಬಾತ್’ನಲ್ಲಿ ಭಾನುವಾರ ಮಾತನಾಡಿದ ಪ್ರಧಾನಿ ಮೋದಿ, ಸ್ವಾತಂತ್ರ್ಯೋತ್ಸವದ ಅಮೃತಮಹೋತ್ಸವವು ಸಾಮೂಹಿಕ ಆಂದೋಲನವಾಗಿ ಬದಲಾಗುತ್ತಿದೆ. ಆಗಸ್ಟ್ 2 ಮತ್ತು 15ರ ನಡುವಿನ ಅವಧಿಯಲ್ಲಿ ದೇಶದ ನಾಗರಿಕರು ತಮ್ಮ ಸಾಮಾಜಿಕ ಮಾಧ್ಯಮಗಳ ಖಾತೆಗಳ ಪ್ರೊಫೈಲ್ ಚಿತ್ರವಾಗಿ ‘ತಿರಂಗ’ವನ್ನು ಬಳಸುವಂತೆ ಅವರು ಒತ್ತಾಯಿಸಿದ್ದಾರೆ. ಅಂತೆಯೇ ಭಾರತೀಯ ಸ್ವಾತಂತ್ರ್ಯ ಚಳವಳಿಗೆ ಸಂಬಂಧಿಸಿದ ರೈಲ್ವೆ ನಿಲ್ದಾಣಗಳಿಗೆ ಭೇಟಿ ನೀಡಿ ಎಂದು ಕರೆ ಕೊಟ್ಟರು.

‘ಆಜಾದಿ ಕಿ ರೈಲ್‌ಗಡಿ ಔರ್ ರೈಲು ನಿಲ್ದಾಣ’ ಎಂಬ ಉಪಕ್ರಮದ ಮೂಲಕ, ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯ ರೈಲ್ವೆಯ ಪಾತ್ರವನ್ನು ಜನರಿಗೆ ತಿಳಿಸುವುದು ಉದ್ದೇಶವಾಗಿದೆ. ಸ್ವಾತಂತ್ರ್ಯ ಚಳವಳಿಯ ಇತಿಹಾಸದೊಂದಿಗೆ ಸಂಬಂಧ ಹೊಂದಿರುವ ಇಂತಹ ಅನೇಕ ರೈಲು ನಿಲ್ದಾಣಗಳು ದೇಶದಲ್ಲಿವೆ. ಈ ರೈಲು ನಿಲ್ದಾಣಗಳ ಬಗ್ಗೆ ತಿಳಿದರೆ ನೀವೂ ಆಶ್ಚರ್ಯಪಡುತ್ತೀರಿ. ಆ 75 ನಿಲ್ದಾಣಗಳನ್ನು ವಿಶೇಷವಾಗಿ ಅಲಂಕರಿಸಲಾಗಿದೆ ಮತ್ತು ಭಾರತದ ಸ್ವಾತಂತ್ರ್ಯದ 75ನೇ ವರ್ಷದ ಆಚರಣೆ ಭಾಗವಾಗಿ ಅಂತಹ ಸ್ಥಳಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಹತ್ತಿರದ ಶಾಲೆಗಳ ಶಿಕ್ಷಕರು ಅಂತಹ ಕೇಂದ್ರಗಳಿಗೆ ಭೇಟಿ ನೀಡಿ ಘಟನೆಗಳನ್ನು ವಿವರಿಸಲು ಮತ್ತು ವಿದ್ಯಾರ್ಥಿಗಳಿಗೆ ಪ್ರಸ್ತುತತೆ ವಿವರಿಸಬೇಕು. ನಿಮ್ಮ ಸ್ಥಳದ ಸಮೀಪವಿರುವ ಅಂತಹ ಐತಿಹಾಸಿಕ ನಿಲ್ದಾಣಗಳಿಗೆ ಭೇಟಿ ನೀಡಲು ನೀವು ಸಮಯವನ್ನು ಕಂಡುಕೊಳ್ಳಬೇಕು, ▶ 8ನೇ ಪುಟಕ್ಕೆ

ಅಮೃತ ಭಾರತಿಗೆ ಕನ್ನಡದಾರತಿಗೆ ಶ್ಲಾಘನೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಜುಲೈ 31ರಂದು ಮನ್ ಕಿ ಬಾತ್ ನಲ್ಲಿ ಕರ್ನಾಟಕದ ಬಗ್ಗೆ ವಿಶೇಷವಾಗಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ರಾಜ್ಯ ಸರ್ಕಾರದ ವತಿಯಿಂದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಆಯೋಜಿಸಿದ್ದ ಅಮೃತ ಭಾರತಿಗೆ ಕನ್ನಡದಾರತಿ ಕಾರ್ಯಕ್ರಮವನ್ನು ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ. ಪ್ರಧಾನಿ ಅವರ ಈ ಶ್ಲಾಘನೆ ನಮ್ಮ ಉತ್ಸಾಹವನ್ನು ಹೆಚ್ಚಿಸಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೋಷಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದಾರೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ ಅಂಗವಾಗಿ ರಾಜ್ಯದ 75 ಕಡೆಗಳಲ್ಲಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿ ಕರ್ನಾಟಕದ ಮಹಾನ್ ಸ್ವಾತಂತ್ರ್ಯ ಹೋರಾಟಗಾರರನ್ನು ನೆನಪಿಸಿರುವುದು ಮಾತ್ರವಲ್ಲದೆ ಸ್ಥಳೀಯ ಸಂಸ್ಕೃತಿ, ಕಲೆ, ಸಾಹಿತ್ಯಕ್ಕೂ ಒತ್ತು ನೀಡಿರುವುದು ಪ್ರಶಂಸನೀಯ ಎಂದು ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯನ್ನು ಪ್ರಧಾನಿ ಮೋದಿ ಶ್ಲಾಘಿಸಿದ್ದಾರೆ. ಜೇನು ಸಾಕಣೆಯಲ್ಲಿ ಜೇನು ಸಾಕಣೆ ಕರಾವಳಿ, ಮಲೆನಾಡು, ಉತ್ತರ ಕನ್ನಡ ಭಾಗದ ಹಲವು ▶ 8ನೇ ಪುಟಕ್ಕೆ

ಮಂಕಿಪಾಕ್ಸ್ ಪತ್ತೆಗೆ
ಒಳಚರಂಡಿ ಕಣ್ಗಾವಲು

ಕರ್ನಾಟಕ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಶಿಫಾರಸ್ಸು

ಬೆಂಗಳೂರು: ದೇಶದಲ್ಲಿ ಮಂಕಿಪಾಕ್ಸ್ ಪ್ರಕರಣಗಳ ಸಂಖ್ಯೆ ಕ್ರಮೇಣ ಏರಿಕೆಯಾಗುತ್ತಿರುವ ಬೆನ್ನಲ್ಲೇ ಒಳಚರಂಡಿ ಕಣ್ಗಾವಲು ತಕ್ಷಣ ಪ್ರಾರಂಭಿಸುವಂತೆ ಆರೋಗ್ಯ ಇಲಾಖೆಗೆ ಕರ್ನಾಟಕ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಶಿಫಾರಸ್ಸು ಮಾಡಿದೆ.



ಭಾರತದಲ್ಲಿ ನಾಲ್ಕು ಮಂಕಿಪಾಕ್ಸ್ ಪ್ರಕರಣಗಳು ಮತ್ತು ಬೆಂಗಳೂರಿನಲ್ಲಿ ಎರಡು ಶಂಕಿತ ಪ್ರಕರಣಗಳು ದೃಢಪಟ್ಟ ಬೆನ್ನಲ್ಲೇ ಕರ್ನಾಟಕ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಮತ್ತೊಮ್ಮೆ ಸಭೆ ನಡೆಸಿದ್ದು, ಮಂಗನ ಕಾಯಿಲೆ ವೈರಸ್ ಡಿಎನ್‌ಎ ಪತ್ತೆಗೆ ಅಮೆರಿಕದಲ್ಲಿ ಮಾಡಿದಂತೆ ಒಳಚರಂಡಿ ಕಣ್ಗಾವಲು ತಕ್ಷಣ ಪ್ರಾರಂಭಿಸುವಂತೆ, ದಿನನಿತ್ಯದ ತ್ಯಾಜ್ಯನೀರು ಪರೀಕ್ಷೆ ಮಾಡುವಂತೆ ಆರೋಗ್ಯ ಇಲಾಖೆಗೆ ಶಿಫಾರಸು ಮಾಡಿದೆ. TAC ಅಭಿಪ್ರಾಯಪಟ್ಟಿರುವಂತೆ ಒಂದು ಪ್ರಕರಣವನ್ನು ಸಹ ಏಕಾಏಕಿ ಎಂದು ಪರಿಗಣಿಸಲಾಗುವುದು. ಕೇಂದ್ರ ಸರ್ಕಾರದ ಮಾರ್ಗಸೂಚಿಗಳ ಪ್ರಕಾರ ಕ್ಷಿಪ್ರ ಪ್ರತಿಕ್ರಿಯೆ ತಂಡಗಳಿಂದ ವಿವರವಾದ ತನಿಖೆಯನ್ನು ಮಾಡಲಾಗುವುದು ಎಂದು ಹೇಳಿದೆ. ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಿಂದ (ಮಾದರಿಗಳನ್ನು ಪರೀಕ್ಷಿಸುವ ಮೂಲಕ ಒಳಚರಂಡಿ ▶ 6ನೇ ಪುಟಕ್ಕೆ

ಕೇರಳದಲ್ಲಿ ಮಂಕಿಪಾಕ್ಸ್ ಶಂಕಿತ ಸಾವು

ತಿರುವನಂತಪುರ: ಕೇರಳದ ತ್ರಿಶ್ಯೂರ್ ಜಿಲ್ಲೆಯಲ್ಲಿ ಮಂಕಿಪಾಕ್ಸ್‌ನ ಶಂಕಿತ ರೋಗಿಯೊಬ್ಬರು ಶನಿವಾರ ಮೃತಪಟ್ಟಿದ್ದಾರೆ. ತ್ರಿಶ್ಯೂರ್ ಜಿಲ್ಲೆಯ ಚಾವಕ್ಕಾಡ್‌ನ 22 ವರ್ಷದ ಯುವಕರೊಬ್ಬರಿಗೆ ಸಂಯುಕ್ತ ಅರಬ್ ಸಂಸ್ಥಾನದಲ್ಲಿರುವಾಗ (ಯುಎಇ) ಸೋಂಕು ತಗುಲಿತ್ತು. ಈ ವಿಷಯವನ್ನು ಮುಚ್ಚಿಟ್ಟು ಅವರು ಊರಿಗೆ ಮರಳಿದ್ದರು ಎಂದು ಅಲ್ಲಿನ ಆರೋಗ್ಯ ಸಚಿವೆ ವೀಣಾ ಜಾರ್ಜ್ ತಿಳಿಸಿದ್ದಾರೆ. ಜುಲೈ 21ರಂದು ಊರಿಗೆ ತಲುಪಿದ್ದ ಯುವಕನನ್ನು ಜು.27ರಂದು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ ಮಂಕಿಪಾಕ್ಸ್ ಪತ್ತೆಯಾಗಿ ಮಾದರಿಯನ್ನು ಪುಣೆಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ವೈರಾಲಜಿಗೆ (ಎನ್‌ಐವಿ) ಕಳುಹಿಸಲಾಗಿತ್ತು. ಪರೀಕ್ಷೆಯ ವರದಿಯು ಇನ್ನೂ ಬಂದಿಲ್ಲ.

2 ವಾರಗಳ ಸಂಸತ್ ಕಲಾಪ ವ್ಯರ್ಥ
32 ಮಸೂದೆಗಳು ಬಾಕಿ

ನವದೆಹಲಿ: ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ತೀವ್ರ ಗದ್ದಲ ಉಂಟಾಗಿದ್ದು ಎರಡು ವಾರಗಳ ಕಾಲವೂ ಸಂಸತ್ ಕಲಾಪಗಳು ವ್ಯರ್ಥವಾಗಿವೆ. ಈ ಅಧಿವೇಶನದ ಅವಧಿಯಲ್ಲಿ ಕೇಂದ್ರ ಸರ್ಕಾರ 32 ಮಸೂದೆಗಳನ್ನು ಅಂಗೀಕರಿಸುವ ತಯಾರಿಯಲ್ಲಿತ್ತು. ಆದರೆ ಈಗ ಅಧಿವೇಶನ ಪ್ರಾರಂಭವಾಗಿ ಎರಡು ವಾರಗಳೇ ಕಳೆದರೂ 32 ಮಸೂದೆಗಳು ಅಂಗೀಕಾರವಾಗದೇ ಬಾಕಿ ಉಳಿದಿದೆ. ಜಿಎಸ್‌ಟಿ, ಬೆಲೆ ಏರಿಕೆ ಹಾಗೂ ಹಣದುಬ್ಬರದ ವಿಷಯವಾಗಿ ಪ್ರತಿಪಕ್ಷಗಳು ಸಂಸತ್ ಕಲಾಪದಲ್ಲಿ ಪ್ರತಿಭಟನೆ ನಡೆಸುತ್ತಿದ್ದು, ಗದ್ದಲ ಉಂಟಾದ ಪರಿಣಾಮ ಕಲಾಪ ವ್ಯರ್ಥವಾಗುತ್ತಿದೆ. ಮುಂಗಾರು ಅಧಿವೇಶನದಲ್ಲಿ ಲೋಕಸಭೆ ಈವರೆಗೂ ಅಂದಾಜು 16 ಗಂಟೆಗಳು ಕೆಲಸ ಮಾಡಿದ್ದರೆ, ▶ 6ನೇ ಪುಟಕ್ಕೆ



ಭಟ್ಕಳದಲ್ಲಿ ISIS ಉಗ್ರ ಸಂಘಟನೆ ಬೆಂಬಲಿಗರನ್ನು ವಶಕ್ಕೆ ಪಡೆದ NIA

ಭಟ್ಕಳ: ರಾಜ್ಯದಲ್ಲಿ ಭಯೋತ್ಪಾದಕರು, ಭಯೋತ್ಪಾದಕರ ಬೆಂಬಲಿಗರ ಬಂಧನ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್– ಸಿರಿಯಾ (ISIS) ಭಯೋತ್ಪಾದಕ ಸಂಘಟನೆಯನ್ನು ಬೆಂಬಲಿಸುತ್ತಿದ್ದ ಇಬ್ಬರನ್ನು ಭಟ್ಕಳದಲ್ಲಿ ಎನ್‌ಐಎ ವಶಕ್ಕೆ ಪಡೆದಿದೆ. ಐಎಸ್‌ಐಎಸ್ ಉಗ್ರ ಸಂಘಟನೆಯೊಂದಿಗೆ ಸಂಪರ್ಕ ಹೊಂದಿದ್ದ ಆರೋಪದಡಿ 30 ವರ್ಷದ ಅಬ್ದುಲ್ ಮುಕ್ತದೀರ್ ಹಾಗೂ ಆತನ ಸಹೋದರನನ್ನು ಎನ್‌ಐಎ ವಶಕ್ಕೆ ಪಡೆದಿದೆ. ಸಾಮಾಜಿಕ ಜಾಲತಾಣದಲ್ಲಿ ಐಎಸ್‌ಐಎಸ್ ಉಗ್ರ ಸಂಘಟನೆ ಪರ ಲೈಕ್, ಕಾಮೆಂಟ್ ಮಾಡುತ್ತಿದ್ದ ವ್ಯಕ್ತಿ ಉಗ್ರ ಸಂಘಟನೆಯನ್ನು ಬೆಂಬಲಿಸುತ್ತಿದ್ದ. ಅಷ್ಟೇ ಅಲ್ಲದೇ ಐಸಿಸ್ ಬರಹಗಳನ್ನು ಭಾಷಾಂತರ ಮಾಡುತ್ತಿದ್ದ ಎಂಬ ಶಂಕೆಯ ಆಧಾರದಲ್ಲಿ ಇಬ್ಬರನ್ನೂ ಬಂಧಿಸಲಾಗಿದೆ. ಅಧಿಕಾರಿಗಳು ಬಂಧಿತನನ್ನು ಗೌಪ್ಯ ಸ್ಥಳಕ್ಕೆ ಕರೆದೊಯ್ದು ವಿಚಾರಣೆ ನಡೆಸುತ್ತಿದ್ದಾರೆ ಎನ್ನಲಾಗಿದೆ. ಬೆಳಗ್ಗೆ 4 ಗಂಟೆ ವೇಳೆಗೆ ಕಾರ್ಯಾಚರಣೆ ನಡೆಸಿ, ಅಬ್ದುಲ್ ಮುಕ್ತದೀರ್‌ನನ್ನು ಆತನ ನಿವಾಸದಲ್ಲಿ ವಶಕ್ಕೆ ಪಡೆಯಲಾಗಿತ್ತು. ಇದಕ್ಕೂ ಮುನ್ನ ಬೆಂಗಳೂರು ಹಾಗೂ ದೆಹಲಿ ಎನ್‌ಐಎ ಅಧಿಕಾರಿಗಳು ಕೆಲದಿನಗಳ ಕಾಲ ಆತನ ಚಲನವಲನಗಳನ್ನು ಗಮನಿಸುತ್ತಿದ್ದರು ಎನ್ನಲಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸರಣಿ ಹತ್ಯೆ ಪ್ರತಿಧ್ವನಿ

ಮೈಸೂರಲ್ಲಿ ಹೈಅಲರ್ಟ್

● ನಗರ ಸಂಪರ್ಕಿಸುವ ರಸ್ತೆಗಳಲ್ಲಿ ನಾಕಾಬಂದಿ ● ಕಟ್ಟುನಿಟ್ಟಿನ ವಾಹನ ತಪಾಸಣೆ ● ಹೆಚ್ಚುವರಿ ಸಿಬ್ಬಂದಿಗಳ ನಿಯೋಜನೆ



ವಿಶೇಷ ತಪಾಸಣಾ ಅಭಿಯಾನವನ್ನು ಡಿಸಿಪಿ ಪ್ರದೀಪ್ ಗುಂಟಿ ಪರಿಶೀಲಿಸುತ್ತಿರುವುದು.

ಮೈಸೂರು,ಜು.31(ಎಂಟಿವೈ)– ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತಲೆದೋರಿರುವ ಕೋಮು ದಳ್ಳುರಿಯಿಂದಾಗಿ ಮೈಸೂರು ಪೊಲೀಸರು ಹೈಅಲರ್ಟ್ ಆಗಿದ್ದು, ಮುಂದಿನ 10 ದಿನಗಳವರೆಗೆ ದಿನದ 24 ಗಂಟೆಯೂ ಹೊರಗಿನಿಂದ ಮೈಸೂರಿಗೆ ಬರುವವರ ಮೇಲೆ ಹದ್ದಿನ ಕಣ್ಣಿಟ್ಟು ತಪಾಸಣೆ ನಡೆಸುವ ವಿಶೇಷ ಅಭಿಯಾನ ಆರಂಭಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಕೆಲವು ದಿನಗಳಿಂದ ಆಗುತ್ತಿರುವ ಸರಣಿ ಹತ್ಯೆ ಪ್ರಕರಣದಿಂದ ಅಲ್ಲಿನ ಕಾನೂನು ಸುವ್ಯವಸ್ಥೆ ಹದಗೆಟ್ಟಿದ್ದು, ರಾತ್ರಿ ಕರ್ಫ್ಯೂ ಜಾರಿಗೊಳಿಸಲಾಗಿದೆ. ಅಲ್ಲದೆ, ಮದ್ಯ ಮಾರಾಟದ ಸಮಯದಲ್ಲಿ ಮಾರ್ಪಾಡು ಮಾಡಲು ಮುಂದಾಗಿರುವ ಹಿನ್ನೆಲೆಯಲ್ಲಿ ಇದೀಗ ಮೈಸೂರು ಪೊಲೀಸರು ಬೇರೆ ಭಾಗದಿಂದ ಮೈಸೂರಿಗೆ ಬರುವವರನ್ನು ಸೂಕ್ಷ್ಮವಾಗಿ ಪರಿಶೀಲಿಸಲು ಮುಂದಾಗಿದ್ದಾರೆ. ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ನೀಡಿರುವ ಆದೇಶದ ಮೇರೆಗೆ ಮೈಸೂರಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ರಸ್ತೆಗಳಲ್ಲೂ ನಾಕಾಬಂದಿ ಹಾಕಲಾಗಿದ್ದು, ವಾಹನ ತಪಾಸಣೆ ಚುರುಕುಗೊಳಿಸಲಾಗಿದೆ. ಅದರಲ್ಲೂ ಪ್ರಮುಖವಾಗಿ ಮಂಗಳೂರು, ಕೊಡಗು, ಕೇರಳದಿಂದ ಮೈಸೂರಿಗೆ ಬರುವ ವಾಹನಗಳ ಮೇಲೆ ಹದ್ದಿನ ಕಣ್ಣಿಟ್ಟಿದ್ದು, ವಾಹನ ಸವಾರರು ಹಾಗೂ ಪ್ರಯಾಣಿಕರ ಪೂರ್ವಪರ ಹಾಗೂ ಮೈಸೂರಿಗೆ ಬರುತ್ತಿರುವ ಉದ್ದೇಶದ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಇದರೊಂದಿಗೆ ವಾಹನಗಳಲ್ಲಿ ಏನಾದರು ವಸ್ತುಗಳನ್ನು ಅಕ್ರಮವಾಗಿ ಸಾಗಿಸುತ್ತಿರುವ ಬಗ್ಗೆಯೂ ತಪಾಸಣೆ ಮಾಡಲಾಗುತ್ತಿದೆ. ಮೈಸೂರು ಪೊಲೀಸರ ಈ ವಿಶೇಷ ಅಭಿಯಾನಕ್ಕೆ ವ್ಯಾಪಕ ಮೆಚ್ಚುಗೆ ವ್ಯಕ್ತವಾಗಿದ್ದು, ಮೈಸೂರಲ್ಲಿ ಶಾಂತಿ ವಾತಾವರಣ ▶ 8ನೇ ಪುಟಕ್ಕೆ

“ಪ್ರತಿದಿನ ರಾತ್ರಿ 9ರಿಂದ ಮುಂಜಾನೆ 5.30ರವರೆಗೂ ತಪಾಸಣೆ ಚುರುಕುಗೊಳಿಸಲಾಗಿದೆ. ಉಳಿದಂತೆ ಹಗಲಿನ ವೇಳೆಯೂ ತಪಾಸಣೆ ಮುಂದುವರೆಯಲಿದೆ. ವಾಹನಗಳಲ್ಲಿ ಬರುವವರು ಮೈಸೂರಿಗೆ ಯಾವ ಉದ್ದೇಶಕ್ಕೆ ಬರುತ್ತಿದ್ದಾರೆ. ಎಲ್ಲಿ ಹಾಗೂ ಎಷ್ಟು ದಿನ ವಾಸ್ತವ್ಯ ಹೂಡುತ್ತಾರೆ ಎಂಬ ಮಾಹಿತಿ ಕಲೆ ಹಾಕಲಾಗುತ್ತಿದೆ. ವಾಹನಗಳಲ್ಲಿ ಆಯುಧ, ಶಸ್ತ್ರಾಸ್ತ್ರ ಸೇರಿದಂತೆ ಕೃತ್ಯಕ್ಕೆ ಬಳಸಬಹುದಾದ ಯಾವುದಾದರೂ ಆಕ್ಷೇಪಾರ್ಹ ವಸ್ತುಗಳಿವೆಯೇ ಎನ್ನುವುದನ್ನು ಪರಿಶೀಲಿಸಲಾಗುತ್ತಿದೆ. ಎಲ್ಲಾ ಚೆಕ್ ಪೋಸ್ಟ್‌ಗಳಲ್ಲಿ ಎಲ್ಲಾ ವಾಹನ ಸಂಖ್ಯೆಗಳು, ಪ್ರಯಾಣಿಕರ ಹೆಸರು ಮತ್ತು ಮೊಬೈಲ್ ನಂಬರ್ ಸಂಗ್ರಹಿಸಲಾಗುತ್ತಿದೆ. ವಸತಿ ಗೃಹಗಳ ಮಾಲೀಕರು ಹಾಗೂ ವ್ಯವಸ್ಥಾಪಕರಿಗೆ ಕೊಠಡಿ ಪಡೆದುಕೊಳ್ಳುವವರ ವಿವರ ಹಾಗೂ ದಾಖಲಾತಿ ಸಂಗ್ರಹಿಸುವಂತೆ ಆದೇಶಿಸಲಾಗಿದೆ. –ಡಾ.ಚಂದ್ರಗುಪ್ತ

ರಾಜಕೀಯ ಹಿತಾಸಕ್ತಿಯ ಭಾವನಾತ್ಮಕ ವಿಚಾರದ ಬಗ್ಗೆ ಯುವಕರು ಎಚ್ಚರದಿಂದಿರಬೇಕು

ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ


ಬಿ.ಸುಬ್ರಹ್ಮಣ್ಯ

ಮೈಸೂರು, ಜು.31– ರಾಜಕೀಯ ಹಿತಾಸಕ್ತಿಯ ಭಾವನಾತ್ಮಕ ವಿಚಾರಗಳ ಬಗ್ಗೆ ಯುವಕರು ಎಚ್ಚರದಿಂದಿರಬೇಕು ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ಅಮಾಯಕ ಯುವಕರ ಸರಣಿ ಹತ್ಯೆ ಹೆಚ್ಚಿ ಆತಂಕ ಹುಟ್ಟಿಸಿದೆ. ಕಾನೂನು–ಸುವ್ಯವಸ್ಥೆ ಬಗ್ಗೆ ಇಲ್ಲದ ಪರಿಣಾಮ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ. ಬಿಜೆಪಿ ಸರ್ಕಾರದ ಬಂಡವಾಳ ಬಯಲಾಗಿದ್ದು, ಆ ಪಕ್ಷದ ಕಾರ್ಯಕರ್ತರೇ ತಿರುಗಿ ಬಿದ್ದಿದ್ದಾರೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಎರಡು ವಾರದಲ್ಲಿ ಮೂವರ ಹತ್ಯೆಯಾಗಿದ್ದು, ಬಿಜೆಪಿ ನಾಯಕರು ಮಾತ್ರ ಕಠಿಣ ಕ್ರಮದ ಸಿದ್ಧ ಪ್ರತಿಕ್ರಿಯೆ ನೀಡುತ್ತಿದ್ದಾರೆ.

ರಾಜಸ್ಥಾನದ ಉದಯಪುರದಲ್ಲಿ ಟೈಲರ್ ಕನ್ನಯ್ಯ ಲಾಲ್ ಹತ್ಯೆಯಾದಾಗ ರಾಜ್ಯದಲ್ಲಿನ ಬಿಜೆಪಿ ನಾಯಕರು ಬೊಬ್ಬೆ ಹೊಡೆದರು. ಆದರೆ ಅಲ್ಲಿನ ಕಾಂಗ್ರೆಸ್ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ನೇತೃತ್ವದ ಸರ್ಕಾರ, ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಆರೋಪಿಗಳನ್ನು ಬಂಧಿಸಿ, ಕನ್ನಯ್ಯ ಲಾಲ್ ಕುಟುಂಬಕ್ಕೆ 50 ಲಕ್ಷ ಪರಿಹಾರದ ಜೊತೆಗೆ ಇಬ್ಬರು ಪುತ್ರರಿಗೂ ಸರ್ಕಾರಿ ಉದ್ಯೋಗ ನೀಡಿತು. ಆದರೆ ಕರ್ನಾಟಕ ಬಿಜೆಪಿ ಸರ್ಕಾರ ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಯುತ್ತಿದೆ, ಆರೋಪಿಗಳನ್ನು ಬಿಡುವ ಮಾತೇ ಇಲ್ಲ ಎಂದು ಹೇಳುವುದನ್ನೇ ಬಾಯಿಪಾಠ ಮಾಡಿಕೊಂಡಿದೆ. ಇಂದಿನ ಯುವಕರೇ ದೇಶದ ಭವಿಷ್ಯ ನಿರ್ಧರಿಸುವವರು ಅನಾಹುತ ಆದಾಗ ಯಾರೂ ಬರುವುದಿಲ್ಲ. ಯುವಕರು ಜಾಗೃತರಾಗಿ ಎಲ್ಲಾ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿ ಮುಂದುವರೆಯಬೇಕು ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮೈಸೂರು ತಾಲೂಕು ವೀರ ಮಡಿವಾಳರ ಮಹಿಳಾ ಘಟಕಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ



ಮೈಸೂರು,ಜು.31(ಎಂಟಿವೈ)– ಮಡಿವಾಳ ಜನಾಂಗದ ಮಹಿಳೆಯರನ್ನು ಸಂಘಟಿಸುವ ನಿಟ್ಟಿನಲ್ಲಿ ಮೈಸೂರು ತಾಲೂಕು ವೀರ ಮಡಿವಾಳರ ಸಂಘದ ಮಹಿಳಾ ಘಟಕಕ್ಕೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ವಸಂತಕುಮಾರಿ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಹಿಂದುಳಿದ ಸಮುದಾಯಗಳಲ್ಲಿ ಒಂದಾಗಿರುವ ಮಡಿವಾಳ ಸಮುದಾಯವು ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿದೆ. ಅದರಲ್ಲೂ ಸಮುದಾಯ ಮಹಿಳೆಯರ ಶಿಕ್ಷಣ ಸೇರಿದಂತೆ ಇನ್ನಿತರ ಕ್ಷೇತ್ರಗಳಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಈ ನಿಟ್ಟಿನಲ್ಲಿ ಮೈಸೂರು ಜಿಲ್ಲೆಯಲ್ಲಿ ಸಮುದಾಯ ಮಹಿಳೆಯರ ಶ್ರೇಯೋಭಿವೃದ್ಧಿಗಾಗಿ ಮಹಿಳಾ ಸಂಘಟನೆಯನ್ನು ಬಲಪಡಿಸಲು ಮುಂದಾಗಿದ್ದು, ನೂತನ ಪದಾಧಿಕಾರಿಗಳನ್ನು ನಿಯೋಜಿಸಲಾಗಿದೆ ಎಂದರು. ಮೈಸೂರು ತಾಲೂಕು ಮಡಿವಾಳ ಮಹಿಳಾ ಸಂಘದ ಅಧ್ಯಕ್ಷೆಯಾಗಿ ಸವಿತಾ, ಉಪಾಧ್ಯಕ್ಷರಾಗಿ ರಾಜಮ್ಮ, ಕಾರ್ಯದರ್ಶಿಯಾಗಿ ನೇತ್ರಾ, ಖಜಾಂಚಿಯಾಗಿ ಪುಷ್ಪ, ಸಹ ಕಾರ್ಯದರ್ಶಿಯಾಗಿ ಪ್ರೇಮ, ನಿರ್ದೇಶಕರಾಗಿ ಸುಮತಿ, ಸುರೇಖಾ, ಸರಸ್ವತಿ, ರೇಖಾ ಆಯ್ಕೆ ಮಾಡಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ತಾಲೂಕು ಸಂಘದ ಅಧ್ಯಕ್ಷ ಜಯರಾಮ್, ರಾಜಮ್ಮ, ಪುಷ್ಪ, ಮಾಧುರಾಜ್ ಇನ್ನಿತರರಿದ್ದರು.

ನಿಗಮ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ಮನವಿ



ಮೈಸೂರು,ಜು.31(ಎಂಟಿವೈ)– ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾ ನಗರ ಪ್ರಧಾನ ಕಾರ್ಯದರ್ಶಿ ಎಂ.ನರಸಿಂಹಮೂರ್ತಿ ಅವರನ್ನು ಯಾವುದಾದರೂ ನಿಗಮ ಮಂಡಳಿಗೆ ಅಧ್ಯಕ್ಷರಾಗಿ ನೇಮಿಸುವಂತೆ ಕರ್ನಾಟಕ ದಲಿತ ವೇದಿಕೆ ವಿಭಾಗೀಯ ಅಧ್ಯಕ್ಷ ನಾಗನಹಳ್ಳಿ ಎಂ.ರೇವಣ್ಣ ಒತ್ತಾಯಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯಲ್ಲಿ ಪರಿಶಿಷ್ಟ ಜಾತಿ ಮೋರ್ಚಾದ ನಗರ ಪ್ರಧಾನ ಕಾರ್ಯದರ್ಶಿಯಾಗಿ ಉತ್ತಮ ಸೇವೆ ಸಲ್ಲಿಸುತ್ತಿರುವ ಎಂ.ನರಸಿಂಹಮೂರ್ತಿ ಅವರು ಪಕ್ಷದ ಸಂಘಟನೆಗೂ ಶ್ರಮಿಸುತ್ತಿದ್ದಾರೆ. ಪರಿಶಿಷ್ಟ ಸಮುದಾಯದ ನೊಂದ ಜನರಿಗೆ ಸ್ಪಂದಿಸುತ್ತಿದ್ದಾರೆ. ಆದ್ದರಿಂದ ಇವರಿಗೆ ಯಾವುದಾದರೊಂದು ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಿದಲ್ಲಿ ಪಕ್ಷ ಸಂಘಟನೆಗೆ ಇನ್ನಷ್ಟು ಸಹಕಾರಿಯಾಗಲಿದೆ. ಈ ನಿಟ್ಟಿನಲ್ಲಿ ಸರ್ಕಾರ ನಿಗಮ ಮಂಡಳಿಗೆ ನರಸಿಂಹಮೂರ್ತಿ ಅವರ ಹೆಸರು ಪರಿಗಣಿಸುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಹಿನಕಲ್ ಸೋಮಣ್ಣ, ಧನಂಜಯ ಇದ್ದರು.

ಸಮಾಜ ಕಲ್ಯಾಣ ಇಲಾಖೆ ಡಿಡಿಗೆ ನಿವೃತ್ತ ಅಧಿಕಾರಿ ಅಶ್ಲೀಲ ಪದ ಬಳಕೆ ಪತ್ರ

ಮೈಸೂರು, ಜು. 31–ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿಗೆ ಅದೇ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕ ಅಶ್ಲೀಲ ಹಾಗೂ ಅವಾಚ್ಯ ಪದಗಳನ್ನು ಬಳಸಿ ಪತ್ರ ಬರೆದಿದ್ದಾರೆ. ಮೈಸೂರಿನ ಹಂಚ್ಯಾ ಸಾತಗಳ್ಳಿ ನಿವಾಸಿ ಸಮಾಜ ಕಲ್ಯಾಣ ಇಲಾಖೆಯ ನಿವೃತ್ತ ಸಹಾಯಕ ನಿರ್ದೇಶಕ ಸಿದ್ದರಾಜು(65) ಆರೋಪಕ್ಕೆ ಗುರಿಯಾದವನಾಗಿದ್ದು, ಈತ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕಿ ಶ್ರೀಮತಿ ಮಾಲತಿ(42) ಅವರಿಗೆ 'ಎಚ್ಚರಿಕೆ ನೋಟಿಸ್' ಎಂಬ ಹೆಸರಿನಲ್ಲಿ ಅವಾಚ್ಯ ಹಾಗೂ ಅಶ್ಲೀಲ ಪದಗಳನ್ನು ಬಳಸಿ ಪತ್ರ ಬರೆದಿದ್ದಾನೆ. ಈ ಸಂಬಂಧ ಜಯಲಕ್ಷ್ಮೀಪುರಂ ಠಾಣೆ ಪೊಲೀಸರು ಆತನ ವಿರುದ್ಧ ಭಾರತೀಯ ದಂಡ ಸಂಹಿತೆ 354(ಎ), 509, 504ರಡಿ ಪ್ರಕರಣ ದಾಖಲಿಸಿಕೊಂಡು, ತನಿಖೆ ನಡೆಸುತ್ತಿದ್ದಾರೆ.

ಪ್ರಸಾದ ಸರದಿ ಸಾಲಲ್ಲಿ ನಿಂತಿದ್ದ ಮಹಿಳೆ ಸರ ಕಳವು

ನಂಜನಗೂಡು, ಜು. 31– ನಂಜನಗೂಡು ಶ್ರೀಕಂಠೇಶ್ವರ ದಾಸೋಹ ಭವನದಲ್ಲಿ ಸಾಲಿನಲ್ಲಿ ನಿಂತಿದ್ದ ಗೃಹಿಣಿಯೋರ್ವರ ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾಗಿರುವುದು ವರದಿಯಾಗಿದೆ. ಮೈಸೂರಿನ ವಿಜಯನಗರ 4ನೇ ಹಂತದ ನಿವಾಸಿ ಶಿವಲಿಂಗಮ್ಮ(58) ಮಾಂಗಲ್ಯ ಸರ ಕಳೆದುಕೊಂಡವರಾಗಿದ್ದು, ಇವರು ತಮ್ಮ ಪಕ್ಕದ ಮನೆಯ ಮಹಿಳೆಯರ ಜೊತೆ ಜುಲೈ 28ರಂದು ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನಕ್ಕೆ ತೆರಳಿದ್ದಾರೆ. ದೇವರ ದರ್ಶನ ಮುಗಿದ ನಂತರ ಮಧ್ಯಾಹ್ನ 1.45ರ ಸುಮಾರಿನಲ್ಲಿ ಪ್ರಸಾದ ಸ್ವೀಕರಿಸಲು ದಾಸೋಹ ಭವನದ ಬಳಿ ಸಾಲಿನಲ್ಲಿ ನಿಂತಿದ್ದಾಗ, ಅವರಿಗೆ ಅರಿವಿಲ್ಲದಂತೆ ಸರ ಎಗರಿಸಲಾಗಿದೆ. ಇವರ ಜೊತೆ ದೇವಸ್ಥಾನಕ್ಕೆ ಹೋಗಿದ್ದ ಮಹಿಳೆ ಶಿವಲಿಂಗಮ್ಮ ಕತ್ತಿನಲ್ಲಿ ಸರ ಇಲ್ಲದೇ ಇರುವುದನ್ನು ಗಮನಿಸಿದಾಗಲೇ ಸರ ಕಸಿದಿರುವುದು ಅವರ ಗಮನಕ್ಕೆ ಬಂದಿದೆ. ನಂಜನಗೂಡು ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು, ಜು.31– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ವೀರಶೈವ ಲಿಂಗಾಯತ ಮಠಾಧಿಪತಿಗಳ ಗೋಷ್ಠಿ ವತಿಯಿಂದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಸೇರಿದ ಪ್ರತಿಭಾವಂತ ವೀರಶೈವ, ಲಿಂಗಾಯತ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಪುರಸ್ಕರಿಸಲಾಗುವುದು. ಈ ಸಂಬಂಧ ರಾಜ್ಯ ಹಾಗೂ ಕೇಂದ್ರೀಯ ಪಠ್ಯಕ್ರಮದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳನ್ನು ಗಳಿಸಿ ತೇರ್ಗಡೆ ಹೊಂದಿರುವ ವೀರಶೈವ ಲಿಂಗಾಯತ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಭರ್ತಿ ಮಾಡಿದ ಅರ್ಜಿಗಳನ್ನು ಆ.20ರೊಳಗೆ ಕಳುಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.9449030588 ಸಂಪರ್ಕಿಸಬಹುದು.

ವೀರಶೈವ ಲಿಂಗಾಯತ ವಧು–ವರರ ಸಮಾವೇಶ

ಮೈಸೂರು,ಜು.31–ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ ವತಿಯಿಂದ ಗನ್‌ಹೌಸ್ ಹತ್ತಿರವಿರುವ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಆ.11ರಂದು ಮಧ್ಯಾಹ್ನ 2ರಿಂದ 6ರವರೆಗೆ ವೀರಶೈವ ಲಿಂಗಾಯಿತ ವಧು–ವರರ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯ ಸುತ್ತಮುತ್ತಲಿನ ವೀರಶೈವ ಲಿಂಗಾಯಿತ ಬಂಧುಗಳು ಸಮಾವೇಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕೋರಲಾಗಿದ್ದು, ಆ.10ರೊಳಗೆ ನೋಂದಣಿ ಮಾಡಿಕೊಳ್ಳಬೇಕು. ಮಾಹಿತಿಗೆ ಮೊ.9686205346, 9972703737 ಸಂಪರ್ಕಿಸಿ.

ನಿಧನ



ಎಂ.ಎಸ್.ರಮೇಶ್

ಮೈಸೂರು, ಜು.31– ಮೈಸೂರಿನ ಕೆ.ಜಿ.ಕೊಪ್ಪಲು ರೈಲ್ವೆ ಗೇಟ್ ರಸ್ತೆ ನಿವಾಸಿ, ಪುರೋಹಿತರಾದ ಎಂ.ಎಸ್.ರಮೇಶ್ (62) ಶುಕ್ರವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಿತು.

ಯಂತ್ರ ನಿರ್ಮಿತ, ಖಾದಿಯೇತರ ಬಟ್ಟೆಯಲ್ಲಿ ತಯಾರಿಸಿದ ಬಾವುಟಕ್ಕೂ ಅವಕಾಶ ಕಲ್ಪಿಸಿರುವುದಕ್ಕೆ ವಿರೋಧ

ನಾಗರಿಕ ಸಮಿತಿ ಧ್ವಜ ಸತ್ಯಾಗ್ರಹ ಪ್ರಯುಕ್ತ ಪಾದಯಾತ್ರೆ

ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಖಾದಿ, ಕೈ ಉತ್ಪನ್ನದ ರಾಷ್ಟ್ರಧ್ವಜ ಬಳಸುವಂತೆ ಅರಿವು

ಮೈಸೂರು,ಜು.31(ಪಿಎಂ)– ರಾಷ್ಟ್ರಧ್ವಜ ಸಂಹಿತೆಗೆ ತಿದ್ದುಪಡಿ ತರುವ ಮೂಲಕ ಯಂತ್ರ ನಿರ್ಮಿತ ಮತ್ತು ಖಾದಿಯೇತರ ಬಟ್ಟೆಯಲ್ಲಿ ತಯಾರಿಸಿದ ಬಾವುಟಕ್ಕೂ ಅವಕಾಶ ಕಲ್ಪಿಸಿರುವುದನ್ನು ವಿರೋಧಿಸಿ ನಾಗರೀಕ ಸಮಿತಿ ವತಿಯಿಂದ ಧ್ವಜ ಸತ್ಯಾಗ್ರಹ ಹಮ್ಮಿಕೊಂಡಿದ್ದು, ಇದರ ಭಾಗವಾಗಿ ಭಾನುವಾರ ಪಾದಯಾತ್ರೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಖಾದಿ ಮತ್ತು ಕೈ ಉತ್ಪನ್ನದ ರಾಷ್ಟ್ರಧ್ವಜ ಮಾತ್ರವೇ ಬಳಸುವಂತೆ ಅರಿವು ಮೂಡಿಸಲಾಯಿತು.

ಮೈಸೂರಿನ ಗಾಂಧಿಚೌಕದಲ್ಲಿ ಸಮಾವೇಶಗೊಂಡ ಸಮಿತಿ ಹಾಗೂ ವಿವಿಧ ಸಂಘಟನೆಗಳ ಮುಖಂಡರು, ಕಾರ್ಯಕರ್ತರು, 'ಖಾದಿ ಬಾವುಟ ಹಾರಿಸಿ ಹರ್ ಘರ್ ತಿರಂಗ ಆಚರಿಸಿ' ಎಂಬ ಘೋಷಣೆ ಮೂಲಕ ಪಾದಯಾತ್ರೆ ಆರಂಭಿಸಿದರು. ಚಿಕ್ಕಗಡಿಯಾರ, ಸಯ್ಯಾಜಿರಾವ್ ರಸ್ತೆ, ದೇವರಾಜ ಅರಸು ರಸ್ತೆ ಹಾಗೂ ನಾರಾಯಣಶಾಸ್ತ್ರಿ ರಸ್ತೆ ಮೂಲಕ ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕ ಉದ್ಯಾನವನದಲ್ಲಿ ಪಾದಯಾತ್ರೆಯು ಮುಕ್ತಾಯಗೊಂಡಿತು.

ಬಳಿಕ ಇಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಕೈಮಗ್ಗ ಮತ್ತು ಕೈಯಿಂದ ನೇಯ್ದ ಖಾದಿ ಬಾವುಟ ಮಾತ್ರವೇ ಬಳಸಬೇಕೆಂಬ ಬಗ್ಗೆ ಜಾಗೃತಿ ಮೂಡಿಸಲಾಯಿತು. ಅಲ್ಲದೆ, ಖಾದಿ ಬಾವುಟ, ಕೈಮಗ್ಗ ಹಾಗೂ ಗ್ರಾಮೀಣ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟವೂ ನಡೆಯಿತು.

ಇದೇ ವೇಳೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ನಾಗರಿಕ ಸಮಿತಿ ಸಂಚಾಲಕ ಪ್ರೊ.ಕಾಳಚನ್ನೇಗೌಡ, ಇಂದು ನಾವಿಲ್ಲಿ ಆಚರಿಸುತ್ತಿರುವ ಧ್ವಜ ಸತ್ಯಾಗ್ರಹವು ನಾಡಿನಾದ್ಯಂತ ನಡೆಯಬೇಕು ಎಂಬುದು ನಮ್ಮ ಆಶಯ. ನಮ್ಮ ಧ್ವಜ ಖಾದಿಯದ್ದೇ ಆಗಿರಬೇಕೆಂಬ ನಿಯಮ ಭಾರತ ಸರ್ಕಾರದ್ದಾಗಿತ್ತು. ಸ್ವಾತಂತ್ರ್ಯ ಪೂರ್ವದಲ್ಲೂ ಇದೇ ಇತ್ತು. ಜೊತೆಗೆ ಕೈಮಗ್ಗದಿಂದ ಮಾಡಿರಬೇಕೆಂಬ ನಿಯಮವಿತ್ತು. ಇತ್ತೀಚಿಗೆ ಸರ್ಕಾರ 'ಹರ್ ಘರ್ ತಿರಂಗ್' ಹೆಸರಿನಲ್ಲಿ ಮನೆ ಮನೆ ಮೇಲೆ ಬಾವುಟ ಹಾರಿಸಬೇಕೆಂದು ಖಾದಿಯೇತರ ಬಟ್ಟೆಯ ಧ್ವಜವಾದರೂ ಸರಿ ಎಂದು ಹೇಳಿದ್ದು, ಇದು ಸರಿಯಲ್ಲ. ಏಕೆಂದರೆ, ನಮ್ಮ ದೇಶದ ಮೂಲ ಗುಡಿ ಕೈಗಾರಿಕೆಯಾಗಿದೆ ಎಂದು ಹೇಳಿದರು.

ಈಗ ಮಿಲ್ ಬಟ್ಟೆ ಉಪಯೋಗಿಸಬಹುದು ಎಂದಿರುವ ಕಾರಣ ಕೈಮಗ್ಗದ ಖಾದಿಗೆ ಹಿನ್ನಡೆಯಾಗಲಿದೆ. ಖಾದಿಯದ್ದೇ ಧ್ವಜ ಇರಬೇಕೆಂಬುದು ನಮ್ಮ ಒತ್ತಾಯ. ಆದರೆ ಸರ್ಕಾರ ಖಾದಿಯೇತರ ಬಟ್ಟೆಯ ಧ್ವಜಕ್ಕೂ ಅವಕಾಶ ನೀಡಿದೆ. ಖಾದಿ ಬೆಲೆ ಹೆಚ್ಚಿರುವ ಹಿನ್ನೆಲೆ ಯಲ್ಲಿ ಸಹಜವಾಗಿಯೇ ಜನ ಮಿಲ್ ಮೇಡ್ ಕಡೆ ಹೋಗುತ್ತಾರೆ. ಜೊತೆಗೆ ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳಿಗೆ ಅನುಕೂಲ ಮಾಡಿಕೊಟ್ಟಂತೆ ಆಗಲಿದೆ ಎಂದರು.

ಮಾಧ್ಯಮದವರೊಂದಿಗೆ ಮಾತನಾಡಿದ ಹಿರಿಯ ರಂಗಕರ್ಮಿ ಪ್ರಸನ್ನ, ನಮ್ಮ ಸರ್ಕಾರ ರಾಷ್ಟ್ರ ಧ್ವಜದಿಂದ ಖಾದಿ ಕಿತ್ತು ಹಾಕಿ ಸಿಂಥೆಟಿಕ್ ಬಟ್ಟೆ, ವಿದೇಶದಿಂದ ಆಮದಾದ ಬಟ್ಟೆಯನ್ನು ರಾಷ್ಟ್ರ ಧ್ವಜದಲ್ಲಿ ತೊಡಗಿಸಿದ್ದು, ಇದು ತಪ್ಪು. 'ಹರ್ ಘರ್ ತಿರಂಗ್' ಎನ್ನುವುದು 1946ರ ಸ್ವಾತಂತ್ರ್ಯ ಚಳುವಳಿಯ ಕೂಗು. ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಎನ್ನುವುದರ ಅಂದಿನ ಸಾಂಕೇತವಾದ 'ಹರ್ ಘರ್ ತಿರಂಗ್' ಘೋಷಣೆಯನ್ನು ಈ ಸರ್ಕಾರ ವಿದೇಶಿ ಬಟ್ಟೆಯಲ್ಲಿ ತಯಾರಾದ ಬಾವುಟ ಹಾರಿಸಲು ಬಳಸುತ್ತಿದೆ. ಇದು ನಾಚಿಕೆಗೇಡು. ಆದಷ್ಟು ಬೇಗ ಸರ್ಕಾರ ಇದನ್ನು ತಿದ್ದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಈಗಾಗಲೇ ದೇಶದ ಬಹುಪಾಲು ಯುವ ಜನರು ವಿದೇಶಿ ಸಂಗೀತ ಕಡೆಗೆ ಒಲವು ಹೊಂದಿದ್ದಾರೆ. ಅಲ್ಲದೆ, ಮಾತೃ ಭಾಷೆ ಮರೆಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರವೇ ವಿದೇಶಿ ವಸ್ತ್ರದ ಬಾವುಟ ತಂದರೆ ಅದಕ್ಕಿಂತ ನಾಚಿಕೆಗೇಡಿನ ಸಂಗತಿ ಇನ್ನೊಂದಿಲ್ಲ ಎಂದು ಪ್ರಸನ್ನ ಕಿಡಿಕಾರಿದರು.

ಗ್ರಾಮೀಣ ಪ್ರದೇಶದ ಕೋಟ್ಯಂತರ ಹೆಣ್ಣು ಮಕ್ಕಳು ನೂಲು ಸುತ್ತುವ ಕೆಲಸವಿಲ್ಲದೆ, ವಲಸೆ ಹೋಗಿ ಕೆಲಸ ಹುಡುಕುವ ಪರಿಸ್ಥಿತಿ ಬಂದಿದೆ. ಬಡವರು ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಇದನ್ನು ತಪ್ಪಿಸಬೇಕೆಂದರೆ ಖಾದಿ ಮತ್ತು ಕೈಉತ್ಪನ್ನಗಳಿಂದ ಮಾತ್ರ ಸಾಧ್ಯ. ಆತ್ತ ನಮ್ಮ ಸರ್ಕಾರ ಗಮನಹರಿಸಬೇಕು ಎಂದು ಆಗ್ರಹಿಸಿದರು.

ಬಳಿಕ ಮೈಸೂರು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಅಧ್ಯಕ್ಷ ವೈ.ಸಿ.ರೇವಣ್ಣ ಮಾತನಾಡಿ, ಮನೆ ಮನೆ ಮೇಲೆ ಬಾವುಟ ಹಾರಿಸಬೇಕೆಂದು ಸರ್ಕಾರ ಹೇಳಿದ್ದು, ಇದರ ಜೊತೆಗೆ ಖಾದಿಯೇತರ ಬಟ್ಟೆಯ ಧ್ವಜಕ್ಕೂ ಅವಕಾಶ ನೀಡಿದೆ. ಇದು ಗಾಂಧಿಗೆ ಅಪಮಾನ ಮಾಡಿದಂತೆ. ಈ ವಿಚಾರದಲ್ಲಿ ಬಂಡವಾಳಶಾಹಿಗಳಿಗೆ ಸರ್ಕಾರ ತಲೆ ಬಾಗಿದಂತಿದೆ. ಇದನ್ನು ನೋಡಿದರೆ ರಾಜ್ಯ ಸರ್ಕಾರದ ವಿರುದ್ಧವೂ ಕೇಳಿ ಬರುವ 40 ಪರ್ಸೆಂಟ್ ಆರೋಪ ನಿಜವಿರಬಹುದು ಎನ್ನಿಸುತ್ತದೆ ಎಂದು ಕಿಡಿಕಾರಿದರು.

ನಂತರ ನಡೆದ ಅಧಿವೇಶನದಲ್ಲಿ ಮೈಸೂರಿನಲ್ಲಿ ಧ್ವಜ ಸತ್ಯಾಗ್ರಹ ಚಳವಳಿ ಮುಂದುವರೆಸಲು ತೀರ್ಮಾನಿಸಲಾಯಿತು. ಜೊತೆಗೆ ರಾಜ್ಯದ ವಿವಿಧ ಭಾಗಗಳಿಗೂ ಚಳವಳಿ ವಿಸ್ತರಿಸಲು ನಿರ್ಧಾರ ಕೈಗೊಳ್ಳಲಾಯಿತಲ್ಲದೆ, ಎಲ್ಲಾ ರಾಜಕೀಯ ಪಕ್ಷಗಳು ಹಾಗೂ ಸಂಘ ಸಂಸ್ಥೆಗಳು ತಮ್ಮ ಕಚೇರಿ ಮೇಲೆ ಖಾದಿ ಧ್ವಜವನ್ನೇ ಹಾರಿಸುವಂತೆ ಅರಿವು ಮೂಡಿಸಲು ತೀರ್ಮಾನಿಸಲಾಯಿತು.

ಹಿರಿಯ ರಂಗಕರ್ಮಿ ಪ್ರಸನ್ನ, ಸಮಿತಿ ಸಂಚಾಲಕ ಪ್ರೊ.ಕಾಳಚನ್ನೇಗೌಡ, ಖಜಾಂಚಿ ಲೀಲಾ ವೆಂಕಟೇಶ್, ಮುಖಂಡರಾದ ಬಸವರಾಜು, ಬಿ.ರಾಜಕಿಶೋರ್ ಒಂದು ದಿನದ ಸಾಂಕೇತಿಕ ಉಪವಾಸ ಸತ್ಯಾಗ್ರಹ ನಡೆಸಿದರು. ಚಾಮರಾಜನಗರದ ಧೀನಬಂಧು ಸಂಸ್ಥೆಯ ಪ್ರೊ.ಜಿ.ಎಸ್. ಜಯದೇವ, ಮುಖಂಡರಾದ ಜಿ.ಪಿ.ಬಸವರಾಜು, ಓಂಕಾರ್, ಉಗ್ರನರಸಿಂಹೇಗೌಡ, ಚಂದ್ರಶೇಖರ್ ಮೇಟಿ, ಸ.ರ.ಸುದರ್ಶನ, ಚಾಮರಾನಗರ ಜಿಲ್ಲೆ ಮುಖಂಡರಾದ ಹುಚ್ಚೇಗೌಡ, ವೆಂಕಟರಾಜು ಮತ್ತಿತರರಿದ್ದರು.


ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕ ಉದ್ಯಾನವನದಲ್ಲಿ ಧ್ವಜ ಸತ್ಯಾಗ್ರಹ ನಡೆಸಲಾಯಿತು.

ಮನೆ ಮನೆ ಮೇಲೆ ಬಾವುಟ ಹಾರಿಸುವಲ್ಲಿ ಉತ್ಪಾದನೆ ದೃಷ್ಟಿ ಇದ್ದರೆ ಅದು ಸರಿಯಲ್ಲ

ಮೈಸೂರು: ಮನೆ ಮನೆ ಮೇಲೆ ಬಾವುಟ ಹಾರಿಸುವಲ್ಲಿ ಉತ್ಪಾದನೆ ದೃಷ್ಟಿ ಹೊಂದಿದ್ದರೆ ಅದು ಸರಿಯಲ್ಲ. ಯಾವ ತತ್ವ ಮತ್ತು ಸಂಕೇತಕ್ಕಾಗಿ ಖಾದಿ ಬಟ್ಟೆ ಬಾವುಟವನ್ನು ನಾವು ಬಳಸುತ್ತಿದ್ದೇವೆ ಎಂಬ ಬಗ್ಗೆ ಸರ್ಕಾರಕ್ಕೆ ಪ್ರಜ್ಞೆ ಇದ್ದಂತಿಲ್ಲ ಎಂದು ಚಾಮರಾಜನಗರದ ಧೀನಬಂಧು ಸಂಸ್ಥೆಯ ಪ್ರೊ.ಜಿ.ಎಸ್.ಜಯದೇವ ಬೇಸರ ವ್ಯಕ್ತಪಡಿಸಿದರು. ಖಾದಿಯು ಶೋಷಣೆ ಮುಕ್ತ ಸಮಾಜದ ಸಂಕೇತ. ಜೊತೆಗೆ ಸರಳ ಜೀವನ, ಸ್ವಾಲಂಬನೆ ಹಾಗೂ ಒಂದು ಅದ್ಭುತ ಚರಿತ್ರೆಯ ಸಂಕೇತವದು. ಹಾಗಾಗಿ ಇಂತಹ ಒಂದು ಅಮೂಲ್ಯವಾದ ಸಂಕೇತ ಮುಖ್ಯವಾಗಬೇಕು. ಖಾದಿಯೇತರ ಬಾವುಟಕ್ಕೂ ಅವಕಾಶ ನೀಡಿರುವುದು ಈ ಎಲ್ಲದನ್ನೂ ಒಂದೇ ಬಾರಿಗೆ ಕಿತ್ತು ಬೀಸಾಡಿದಂತೆ ಆಗಲಿದೆ ಎಂದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಜು.31–ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ. 85ಕ್ಕಿಂತ ಹೆಚ್ಚು ಅಂಕ ಪಡೆದಿರುವ ಕಣಿಯರ ಸಮಾಜದ ವಿದ್ಯಾರ್ಥಿಗಳಿಂದ ಪ್ರತಿಭಾ ಪುರಸ್ಕಾರ ನೀಡಲು ಬೆಂಗಳೂರಿನ ಕಣಿಯರ ಸಮಾಜ ಅರ್ಜಿ ಆಹ್ವಾನಿಸಿದೆ. ವಿದ್ಯಾರ್ಥಿಗಳು ಸ್ವವಿವರ, ಅಂಕ ಪಟ್ಟಿಯ ನಕಲು, ಆಧಾರ್ ಕಾರ್ಡ್, ಇತ್ತೀಚಿನ 2 ಭಾವ ಚಿತ್ರಗಳೊಂದಿಗೆ ಆ.7ರೊಳಗೆ ನಂ. 74/2, 10ನೇ ಅಡ್ಡ ರಸ್ತೆ, 2ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18 ಈ ವಿಳಾಸಕ್ಕೆ ಅರ್ಜಿ ಸಲ್ಲಿಸಲು ಕೋರಲಾಗಿದೆ. ಮಾಹಿತಿಗೆ ಮೊ.: 9341169166 ಸಂಪರ್ಕಿಸಿ.



ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಕೆ.ಹರೀಶ್‌ಗೌಡರ ಜನ್ಮದಿನದ ಪ್ರಯುಕ್ತ ಕುಂಬಾರಕೊಪ್ಪಲಿನಲ್ಲಿ ಕೆ.ಸಿ.ಮಹೇಶ್‌ಗೌಡರು ಏರ್ಪಡಿಸಿದ್ದ ವಿವಿಧ ಸಾಮಾ ಜಿಕ ಸೇವಾ ಕಾರ್ಯಕ್ರಮವನ್ನು ವರುಣಾ ಕ್ಷೇತ್ರದ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು, ಪಾಲಿಕೆ ಸದಸ್ಯರಾದ ಪೈ.ಶ್ರೀನಿವಾಸ್, ಜೆ.ಗೋಪಿ, ಮುಖಂಡರಾದ ಡೆಲ್ಲಿ ರವಿ, ರಾಜೇಂದ್ರ, ಗ್ರಾಮದ ಯಜಮಾನರು ಹಾಗೂ ಯುವ ಸ್ನೇಹಿತರು ಉಪಸ್ಥಿತರಿದ್ದರು.

ಮಹಾರಾಣಿ ಪಿಯು ಕಾಲೇಜು ವಿದ್ಯಾರ್ಥಿನಿಯರಿಗೆ ಪುರಸ್ಕಾರ



ಮೈಸೂರು,ಜು.31(ಎಸ್‌ಪಿಎನ್)–2021–22ನೇ ಸಾಲಿನ ಪಿಯು ಪರೀಕ್ಷೆಯಲ್ಲಿ ಅಧಿಕ ಅಂಕ ಗಳಿಸಿದ ಮೈಸೂರು ಮಹಾರಾಣಿ ಪಿಯು ಕಾಲೇಜಿನ ಪ್ರತಿಭಾವಂತ ವಿದ್ಯಾರ್ಥಿನಿಯರಿಗೆ ಶಾಸಕ ಎಲ್.ನಾಗೇಂದ್ರ, ಪ್ರತಿಭಾ ಪುರಸ್ಕಾರ ನೀಡಿ, ಗೌರವಿಸಿದರು.

ಮಹಾರಾಣಿ ಪಿಯು ಕಾಲೇಜು ಆವರಣದಲ್ಲಿ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರಿ ಮಹಾರಾಣಿ ಪಿಯು ಕಾಲೇಜಿನ ವಾಣಿಜ್ಯ, ವಿಜ್ಞಾನ ಹಾಗೂ ಕಲಾ ವಿಭಾಗದಲ್ಲಿ 700ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದು, ಇದರಲ್ಲಿ 400ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಪ್ರಥಮ ದರ್ಜೆ, 93 ವಿದ್ಯಾರ್ಥಿನಿಯರು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುವುದು ಸಂತೋಷ ಸಂಗತಿ ಎಂದರು.

ಪ್ರಸ್ತುತ ಸಂದರ್ಭದಲ್ಲಿ ಮಹಿಳೆಯರು ಎಲ್ಲಾ ರಂಗದಲ್ಲೂ ಉತ್ತಮ ಸಾಧನೆ ಮಾಡುತ್ತಿದ್ದಾರೆ. ಇತ್ತೀಚೆಗೆ ಅದರಂತೆ ಶೈಕ್ಷಣಿಕ ಕ್ಷೇತ್ರದಲ್ಲೂ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸುತ್ತಿದ್ದಾರೆ. ಈ ಹಿಂದೆ ನಾಲ್ಕು ಗೋಡೆಗಳಿಗೆ ಸೀಮಿತವಾಗಿದ್ದ ಮಹಿಳೆಯರು, ಇದೀಗ ಎಲ್ಲಾ ರಂಗದಲ್ಲೂ ಸಾಧನೆಗೈದು ದೇಶದ ಉನ್ನತಿ, ಪ್ರಗತಿಗೆ ತಮ್ಮದೇ ಕೊಡುಗೆ ನೀಡುತ್ತಿದ್ದಾರೆ. ಪ್ರಸ್ತುತ ಈ ಕಾಲೇಜಿನಲ್ಲಿ 2,250 ವಿದ್ಯಾರ್ಥಿನಿಯರು ವ್ಯಾಸಂಗ ಮಾಡುತ್ತಿದ್ದು, ಇಲ್ಲಿಗೆ ಅಗತ್ಯ ಮೂಲಸೌಕರ್ಯ ಒದಗಿಸಲು 1 ಕೋಟಿ ವೆಚ್ಚದಲ್ಲಿ ಕೊಠಡಿಗಳು ಮತ್ತು 6 ಪ್ರಯೋಗಾಲಯ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. ಅಲ್ಲದೆ, ಪ್ರಾಂಶುಪಾಲರು ಹೆಚ್ಚುವರಿ ಶೌಚಾಲಯ ನಿರ್ಮಾಣಕ್ಕೆ 12 ಲಕ್ಷ ಅನುದಾನ ಕೋರಿದ್ದು, ಅನುದಾನ ಬಿಡುಗಡೆಗೆ ಕ್ರಮ ವಹಿಸುತ್ತೇನೆ ಎಂದರು.

ಆದಿವಾಸಿ ಮಹಿಳೆ ಹಾಗೂ ಶಿಕ್ಷಕಿ ದ್ರೌಪದಿ ಮುರ್ಮು ಅವರು ಇತ್ತೀಚೆಗೆ ನಡೆದ ರಾಷ್ಟ್ರಪತಿ ಚುನಾವಣೆಯಲ್ಲಿ ಗೆದ್ದು, ದೇಶದ ಪ್ರಥಮ ಪ್ರಜೆಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಇವೆಲ್ಲಾ ಬೆಳವಣಿಗೆಗಳು ದೇಶದ ಪ್ರಗತಿ ಸಂಕೇತ ಎಂದ ಶಾಸಕರು, ಸರ್ಕಾರಿ ಮಹಾರಾಣಿ ಪಿಯು ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಬಹುತೇಕ ವಿದ್ಯಾರ್ಥಿನಿಯರು ಗ್ರಾಮೀಣ ಪ್ರದೇಶದವರಾಗಿದ್ದು, ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಉನ್ನತ ಪದವಿ ಪಡೆಯುವಂತೆ ಸಲಹೆ ನೀಡಿದರು. ಈ ಸಂದರ್ಭದಲ್ಲಿ ಡಿಡಿಪಿಯು ಡಿ.ಕೆ.ಶ್ರೀನಿವಾಸಮೂರ್ತಿ, ಪ್ರಾಂಶುಪಾಲ ಪಿ.ಸೋಮಣ್ಣ, ಇತಿಹಾಸ ಸಂಕಲನ ಸಮಿತಿಯ ಡಾ.ಎಸ್.ಬಿ.ಎಂ.ಪ್ರಸನ್ನ, ನಗರ ಪಾಲಿಕೆ ಸದಸ್ಯೆ ಪ್ರಮೀಳಾ ಭರತ್ ಇನ್ನಿತರರು ಉಪಸ್ಥಿತರಿದ್ದರು.

ಗಾಂಜಾ ಮಾರುತ್ತಿದ್ದ ಪೂಜಾರಿ ವಶ

ಕೆ.ಆರ್.ನಗರ,ಜು.31–ಮಠವೊಂದರ ಮೇಲೆ ದಾಳಿ ನಡೆಸಿದ ಪೊಲೀಸರು, ಗಾಂಜಾ ಮಾರಾಟ ಮಾಡುತ್ತಿದ್ದ ಪೂಜಾರಿಯನ್ನು ಬಂಧಿಸಿದ್ದಾರೆ. ಕೆ.ಆರ್.ನಗರದ ಚೀರನಹಳ್ಳಿ ರಸ್ತೆಯಲ್ಲಿರುವ ಮಠದಲ್ಲಿ ಗಾಂಜಾ ಮಾರಾಟ ಮಾಡಲಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಕೆ.ಆರ್.ನಗರ ಠಾಣೆ ಇನ್ಸ್‌ಪೆಕ್ಟರ್ ಲವ, ಕೆ.ಆರ್.ನಗರ ಪುರಸಭೆಯ ಹಿರಿಯ ಆರೋಗ್ಯ ನಿರೀಕ್ಷಕ ರಾಜೇಂದ್ರಕುಮಾರ್, ಕಿರಿಯ ಆರೋಗ್ಯ ಸಹಾಯಕ ಲೋಕೇಶ್ ಹಾಗೂ ಸಿಬ್ಬಂದಿಯೊಂದಿಗೆ ಜು.28ರಂದು ಮಠದ ಮೇಲೆ ದಾಳಿ ನಡೆಸಿದ್ದಾರೆ. ಮಠದಲ್ಲಿದ್ದ ಪೂಜಾರಿ ಶಿವಣ್ಣ ಅಲಿಯಾಸ್ ಪರಶಿವನಾಯಕ(68) ಎಂಬಾತನನ್ನು ವಿಚಾರಣೆಗೊಳಪಡಿಸಿದಾಗ ಆತನ ಬಳಿ 21 ಪ್ಯಾಕೆಟ್‌ಗಳಲ್ಲಿ 155 ಗ್ರಾಂ ಗಾಂಜಾ ಪತ್ತೆಯಾಗಿದೆ. ಈತ ಈ ಗಾಂಜಾವನ್ನು ಮಠದಲ್ಲೇ ಮಾರಾಟ ಮಾಡುತ್ತಿದ್ದ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ. ಪೊಲೀಸರು, ತನಿಖೆ ನಡೆಸುದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

01.08.2022 ಸೋಮವಾರ, ಮಳೆ ನಕ್ಷತ್ರ : ಪುಷ್ಯ, 20.07.2022 ರಿಂದ 02.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ತೃತೀಯ, ನಕ್ಷತ್ರ : ಮಖೆ, ರಾಹುಕಾಲ: ಬೆಳಗ್ಗೆ 7.30 ರಿಂದ 9 ರವರೆಗೆ.

■ **ನಮೋ ಯೋಗ ಭವನ :** ಉಚಿತ ಯೋಗ ತರಬೇತಿ ಶಿಬಿರ, ಸರಳೀಕೃತ ಯೋಗಾಸನ, ಪ್ರಾಣಾಯಾಮ, ಧ್ಯಾನ, ವೇದದ ತರಬೇತಿ, ಸ್ಥಳ: ನಮೋ ಯೋಗ ಭವನ ಸಭಾಂಗಣ, ರಾಮಾನುಜ ರಸ್ತೆ, ಬೆಳಗ್ಗೆ 6ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಯೋಗ ತರಬೇತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 7 ಗಂಟೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ಶ್ರೀಚಕ್ರ ಪೂಜಾ, ಮಹಾ ಗಣಪತಿ ಹೋಮ, ಬೆಳಗ್ಗೆ 7.30ಕ್ಕೆ, ನಾಗಚೌತಿ, ಸಚ್ಚಿದಾನಂದೇಶ್ವರ ಸ್ವಾಮಿಗೆ ಶ್ರಾವಣ ಸೋಮವಾರ ಪ್ರಯುಕ್ತ ಏಕಾದಶಿ ರುದ್ರಾಭಿಷೇಕ, ಅನಂತ ನಾಗೇಂದ್ರ ಸ್ವಾಮಿಗೆ ವಿಶೇಷ ಪೂಜೆ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ದತ್ತನಗರ.

■ **ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ :** ಶಾಲೆಯ ಮಕ್ಕಳಿಗೆ ಗಾಳಿಪಟ ಉತ್ಸವ ಕಾರ್ಯಕ್ರಮ ಶಾಲಾ ಆವರಣ, ಉದ್ಘಾಟನೆ: ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಉಪಸ್ಥಿತರು: ಸಂಸ್ಥೆಯ ಅಧ್ಯಕ್ಷ ಆರ್. ರಘು, ಶಾಲೆಯ ಆವರಣ, ಆರ್.ಟಿ.ನಗರ, ಬೆಳಗ್ಗೆ 9.30 ರಿಂದ.

■ **ರೀಜಿನಲ್ ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನ್ :** 60ನೇ ಸಂಸ್ಥಾಪನಾ ದಿನಾಚರಣೆ, ಮುಖ್ಯ ಅತಿಥಿ: ಕೇಂದ್ರದ ಮಾಜಿ ಸಚಿವ ಡಾ. ಸುಬ್ರಮಣಿಯನ್ ಸ್ವಾಮಿ, ಮೈಸೂರು ವಿವಿ ಕುಲಪತಿ ಪ್ರೊ. ಜಿ. ಹೇಮಂತ್‌ಕುಮಾರ್, ಸ್ಥಳ: ಟೆಕ್ನಾಲಜಿ ಬ್ಲಾಕ್, ಕಾಲೇಜಿನ ಆವರಣ, ಬೆಳಗ್ಗೆ 10 ಗಂಟೆಗೆ.

■ **ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ) ಇತಿಹಾಸ ವಿಭಾಗ, ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗ, ಎಂಟ್ರಿ ಟು ಸರ್ವಿಸ್ ಮತ್ತು ಐಕ್ಯೂ ಎಸಿ ಘಟಕ :** ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಕೌಶಲ್ಯಾಭಿವೃದ್ಧಿ ಕುರಿತು ಒಂದು ದಿನದ ರಾಜ್ಯ ಮಟ್ಟದ ಕಾರ್ಯಾಗಾರ, ಉದ್ಘಾಟನೆ: ಮಹಾಜನ ವಿದ್ಯಾ ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ. ಟಿ. ವಿಜಯಲಕ್ಷ್ಮೀ ಮುರಳೀಧರ್, ಸ್ಥಳ: ಎವಿಸಿ–3 ಸಭಾಂಗಣ, ಕಾಲೇಜು ಆವರಣ, ಜಯಲಕ್ಷ್ಮೀಪುರಂ, ಬೆಳಗ್ಗೆ 10.15ಕ್ಕೆ.

■ **ಓಟಿ ಕೇರ್:** ಉಚಿತ ವಾಕ್ ಮತ್ತು ಶ್ರವಣ ದೋಷ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಅಗ್ರಹಾರ, ಬೆಳಗ್ಗೆ 11 ಗಂಟೆಯಿಂದ.

■ **ರಾಗ ಮ್ಯೂಸಿಕ್ ಅಕಾಡೆಮಿ:** 8ನೇ ವಾರ್ಷಿಕೋತ್ಸವ, ಶ್ರೀಮದ್ ಭಾಗವತ ಸಪ್ತಾಹ, ಗಾಯನ ಕಾರ್ಯಕ್ರಮ: ವಿದ್ವಾನ್ ಎನ್. ಶ್ರೀನಾಥ್, ವೈಯಲಿನ್: ವಿದುಷಿ ಪೃಥ್ವಿ ಭಾಸ್ಕರ್, ಮೃದಂಗ: ವಿದ್ವಾನ್ ನಂದನ್ ಕಶ್ಯಪ್, ಸ್ಥಳ: ವಾಸುದೇವಚಾರ್ಯ ಭವನ್, ನಾದಬ್ರಹ್ಮ ಸಂಗೀತ ಸಭಾ, ಸಂಜೆ 5 ರಿಂದ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಸುತ್ತೂರು ಮಠ, ಬೆಳಗ್ಗೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ: ಕೆ.ಎಂ.ರೇವಣ್ಣ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು: ಮಂಡ್ಯ ಜಿಲ್ಲೆಯ ಶತಮಾನದ, ನೆನಪುಗಳು: ಲೇಖನ ಪ್ರಸ್ತುತಿ– ಡಿ.ಎನ್.ಶ್ರೀಪಾದ್, 6.40 ಭಾವಗೀತೆ, 6.45 ರೈತರಿಗೆ ಸಲಹೆ, 6.50 ವನ ಮಹೋತ್ಸವ: ಅರಣ್ಯ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ, 7.45 ನಿತ್ಯ ವಿಜ್ಞಾನ: ಪ್ರಾಯೋಜಿತ ಕಾರ್ಯಕ್ರಮ, 9.05 ಚಿತ್ರಗೀತೆ, 9.30 ಭಾರತದ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ 'ಸ್ವಾತಂತ್ರ್ಯ ಚಳುವಳಿಯ ಪಯಣ' ಆಕಾಶವಾಣಿಯೊಂದಿಗೆ, 9.45 'ವಚನಗಳಲ್ಲಿ ಸ್ತ್ರೀ ಸಂವೇದನೆ, ಮಾಯೆ, ಮೌಲ್ಯ ಪ್ರಜ್ಞೆ: ಮಾತನಾಡುವವರು–ಡಾ.ಸರ್ವಮಂಗಳಾ ಸಕ್ರಿ, 10.00 ಲಯ ಸಂಭ್ರಮ: ತಾಳ, ಲಯ, ರಸಾಸ್ವಾದ, ಪ್ರಸ್ತುತಿ ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, ಭಾಗವಹಿಸುವವರು ರಂಗಕರ್ಮಿ ಗುರುರಾಜ ಮಾರ್ಪಳ್ಳಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ಭಕ್ತಿಗೀತೆಗಳು– ಅಂಜನಾ ಡಿ ಕುಂಬ್ಳೆ, 12.45 ನಮ್ಮ ಆರೋಗ್ಯ: ಇನ್ಟೆನ್ಸಿವ್ ಕೇರ್ ಅಂಡ್ ಗೋಲ್ಡನ್ ಅವರ್ ಕುರಿತು ಡಾ.ಸಂತೋಶ್ ಎಂ.ಓ. ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು: ಹೆಚ್.ಕೆ.ನಾರಾಯಣ, 3.00 ಕೆ.ಎಸ್.ಹೇರಂಬ ಮತ್ತು ಕೆ.ಎಸ್.ಹೇಮಂತ: ಯುಗಳ ವೇಣುವಾದನ. **ಸಂಜೆ:** 4.00 ಮಹಿಳಾರಂಗ–'ಡಾಕ್ಟರ್ ಸಮಯ'– ನೇರ ಫೋನ್ ಇನ್ ಕಾರ್ಯಕ್ರಮ, ವಿಷಯ–ಮಹಿಳೆಯರ ಸಾಮಾನ್ಯ ಆರೋಗ್ಯ ಸಮಸ್ಯೆಗಳು, ಭಾಗವಹಿಸುವ ವೈದ್ಯರು– ಡಾ.ಶಿಲ್ಪಾ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ಬದುಕಿನಲ್ಲಿ ಸಾರ್ಥಕತೆ ಕುರಿತು ಚೆನ್ನಮಾದನಾಯಕ ಅವರೊಡನೆ ಸಂದರ್ಶನ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆ ವಿಶೇಷ ಕಾರ್ಯಕ್ರಮ, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ.

ಗೌರವಧನ ಹೆಚ್ಚಳ, ಉಚಿತ ಬಸ್ ಪಾಸ್, ವಿಮಾ, ಪಿಂಚಣಿ ಸೌಲಭ್ಯಕ್ಕೆ ಆಗ್ರಹಿಸಿ

ಮೈಸೂರಲ್ಲಿ ಗ್ರಾಪಂ ಸದಸ್ಯರ ಸ್ವಾಭಿಮಾನಿ ಸಮಾವೇಶ

● ಬೇಡಿಕೆ ಈಡೇರಿಕೆಗೆ ಡಿ.25ರ ಗಡುವು ● ಬೇಡಿಕೆ ಈಡೇರಿದ್ದರೆ ರಾಜ್ಯ ಮಟ್ಟದ ಬೃಹತ್ ಹೋರಾಟದ ಎಚ್ಚರಿಕೆ



ಗ್ರಾಮ ಪಂಚಾಯಿತಿ ಸದಸ್ಯರ ಸ್ವಾಭಿಮಾನಿ ಸಮಾವೇಶಕ್ಕೆ ಎಂಎಲ್‌ಸಿಗಳಾದ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ ಚಾಲನೆ ನೀಡಿದರು. ಚಿತ್ರದಲ್ಲಿ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾಒಕ್ಕೂಟದ ಅಧ್ಯಕ್ಷ ಸತೀಶ್ ಕಾಡಶೆಟ್ಟಿಹಳ್ಳಿ, ಮೈಸೂರು ಜಿಲ್ಲಾಧ್ಯಕ್ಷ ಎನ್.ನಾಗರಾಜು ಇನ್ನಿತರರನ್ನು ಕಾಣಬಹುದು.

> “ನಾನು ಶಾಸಕನಾಗಿ ಆಯ್ಕೆಯಾದ ನಂತರ ತರಬೇತಿಯಲ್ಲಿದ್ದೇನೆ ಎಂದು ಭಾವಿಸಿ ಎಲ್ಲಾ ಕಾರ್ಯಕ್ರಮ ಹಾಗೂ ಸಭೆಗಳಿಗೆ ಚಾಚೂ ತಪ್ಪದೇ ಹಾಜರಾಗುತ್ತಿದ್ದೇನೆ. ಎಲ್ಲಾ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳುತ್ತಿದ್ದೇನೆ. ನಾನೂ ಕೂಡ ಗ್ರಾಪಂ ಸದಸ್ಯನಾಗಿ ಬಂದವನು. ಸೈನಿಕನಾಗಿ ಬಂದೂಕು ಹಿಡಿದು ದೇಶ ಕಾಯ್ದವನು. ಹಾಗಾಗಿ ನನಗೆ ಸಾರ್ವಜನಿಕ ಸಮಸ್ಯೆಗಳ ಬಗ್ಗೆ ಬದ್ಧತೆ ಇದೆ.
> - ಸಿ.ಎನ್.ಮಂಜೇಗೌಡ, ಎಂಎಲ್‌ಸಿ

ಮೈಸೂರು, ಜು.31(ಆರ್‌ಕೆಬಿ)– ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರಿಗೆ ನೀಡುತ್ತಿರುವ ಗೌರವಧನ ಹೆಚ್ಚಳ, ಉಚಿತ ಬಸ್ ಪಾಸ್ ವಿತರಣೆ, ವಿಮಾ ಮತ್ತು ಪಿಂಚಣಿ ಸೌಲಭ್ಯಗಳು, ಸಂವಿಧಾನದಲ್ಲಿ ಕಲ್ಪಿಸಿದಂತೆ ಗ್ರಾಮ ಪಂಚಾಯಿತಿಯನ್ನು ಸ್ಥಳೀಯ ಸ್ವ-ಸರ್ಕಾರವೆಂದು ಪರಿಗಣಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮೈಸೂರಿನಲ್ಲಿ ಭಾನುವಾರ ಗ್ರಾಮ ಪಂಚಾಯಿತಿ ಸದಸ್ಯರ ಸ್ವಾಭಿಮಾನಿ ಸಮಾವೇಶ ನಡೆಯಿತು.

ಮೈಸೂರು, ಚಾಮರಾಜನಗರ ಸೇರಿದಂತೆ ನಾನಾ ಜಿಲ್ಲೆಗಳ ಗ್ರಾಪಂ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ನೂರಾರು ಸಂಖ್ಯೆಯಲ್ಲಿ ಸಮಾವೇಶದಲ್ಲಿ ಭಾಗವಹಿಸಿ, ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒಕ್ಕೊರಲಿನಿಂದ ನಿರ್ಣಯ ಕೈಗೊಂಡರು.

ಸಮಾವೇಶವನ್ನು ಉದ್ದೇಶಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ರಾಜ್ಯಾಧ್ಯಕ್ಷ ಸತೀಶ್ ಕಾಡಶೆಟ್ಟಿಹಳ್ಳಿ ಮಾತನಾಡಿ, ಡಿ.25ಕ್ಕೆ ಬೆಂಗಳೂರಿನಲ್ಲಿ ನಡೆಯುವ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ರಾಜ್ಯ ಮಟ್ಟದ ಸಮಾವೇಶದ ಒಳಗಾಗಿ ಗ್ರಾಪಂ ಸದಸ್ಯರ ಗೌರವ ಧನವನ್ನು ಹೆಚ್ಚಿಸದಿದ್ದರೆ ದೊಡ್ಡ ಮಟ್ಟದ ಹೋರಾಟ ಕೈಗೊಳ್ಳಲು ಸಮಾವೇಶದಲ್ಲಿ ನಿರ್ಣಯ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಗ್ರಾಪಂಗಳಿಗೆ ತನ್ನದೇ ಆದಂತಹ ಹಕ್ಕುಗಳಿವೆ. ಆದರೆ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸುವ ವಿಚಾರದಲ್ಲಿ ಜಿಪಂ ಸಿಇಓ, ತಾಪಂ ಇಓಗಳು ಮೂಗು ತೂರಿಸುತ್ತಿದ್ದಾರೆ. ಮಾರ್ಕೆಟಿಂಗ್ ಏಜೆಂಟರಂತೆ ವರ್ತಿಸುತ್ತಿದ್ದಾರೆ. ವಸತಿ ಯೋಜನೆ ಸೇರಿದಂತೆ ಯಾವುದೇ ಯೋಜನೆಗಳಿಗೆ ಸಂಬಂಧಿಸಿದ ಫಲಾನುಭವಿಗಳನ್ನು ಆಯ್ಕೆ ಮಾಡುವ ಹಕ್ಕನ್ನು ಅಧಿಕಾರ ವರ್ಗ, ಶಾಸಕರು, ಸಂಸದರಂತಹ ಮೇಲ್ವಂಕ್ತಿ ರಾಜಕಾರಣಿಗಳು ಕಸಿದು ಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು.

ಮಾರ್ಗಸೂಚಿ ಪ್ರಕಾರ ಗ್ರಾಮ ಪಂಚಾಯಿತಿಗಳೂ ಸ್ಥಳೀಯ ಸ್ವತಂತ್ರ ಸರ್ಕಾರವಾಗಿದ್ದು, ಆರ್‌ಡಿಪಿಆರ್ ಇಲಾಖೆಯ ಬ್ರಾಂಚ್ ಕಚೇರಿ ಅಲ್ಲ. ಗ್ರಾಪಂನ ಆಡಳಿತ ಗ್ರಾಪಂ ಸದಸ್ಯರೇ ಮಾಡಲು ಬಿಡಬೇಕು. ಆಡಳಿತದಲ್ಲಿ ಯಾರೂ ಮೂಗು ತೂರಿಸದೇ ಸ್ವತಂತ್ರ ಆಡಳಿತ ನಿರ್ವಹಿಸಲು ಅವಕಾಶ ವಾಗಬೇಕು ಎಂದು ಒತ್ತಾಯಿಸಿದರು.

ವಸತಿ ಯೋಜನೆಯಡಿ ಮನೆಗಳಿಗೆ ಸಂಬಂಧಿಸಿದಂತೆ ನಗರ ಪ್ರದೇಶಕ್ಕೆ ಗ್ರಾಮಾಂತರ ಪ್ರದೇಶಕ್ಕಿಂತ ಹೆಚ್ಚು ಅನುದಾನ ನೀಡುತ್ತಿರುವ ಬಗ್ಗೆ ಆಕ್ಷೇಪಿಸಿದ ಅವರು, ಈ ಅಂತರವನ್ನು ತಪ್ಪಿಸಬೇಕು ಎಂದು ಒತ್ತಾಯಿಸಿದರು. ಈ ಎಲ್ಲಾ ಅಂಶಗಳನ್ನು ಗ್ರಾಪಂ ಸದಸ್ಯರಿಂದ ಆಯ್ಕೆಯಾದ ಶಾಸಕರು ಪ್ರಾಮಾಣಿಕ ಹೋರಾಟ ನಡೆಸಿ, ಗ್ರಾಪಂ ಸದಸ್ಯರ ಬೇಡಿಕೆಗಳು ಮತ್ತು ಸಮಸ್ಯೆಗಳ ನಿವಾರಣೆಗೆ ಮೇಲ್ಮನೆಯಲ್ಲಿ ಹೋರಾಟ ನಡೆಸಬೇಕು ಎಂದು ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಡಿ. ತಿಮ್ಮಯ್ಯ ಅವರಿಗೆ ಸ್ಥಳದಲ್ಲಿಯೇ ಗಮನ ಸೆಳೆದರು.

ವಿದ್ಯುತ್ ಸಮಸ್ಯೆ, ಗದ್ದಲ: ಸಮಾವೇಶ ನಡೆಯುತ್ತಿದ್ದ ಸಂದರ್ಭದಲ್ಲಿ ಹಲವು ಬಾರಿ ವಿದ್ಯುತ್ ಅಡಚಣೆಯಾಗಿದ್ದರಿಂದ ಬೇಸರಗೊಂಡ ಗ್ರಾಪಂ ಸದಸ್ಯರು, ಕೂಡಲೇ ಸಮಸ್ಯೆ ಬಗೆಹರಿಸುವಂತೆ ವಿಧಾನ ಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡ, ಡಾ.ಡಿ.ತಿಮ್ಮಯ್ಯ ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಕೆಲ ಕಾಲ ಗದ್ದಲ ಉಂಟಾಯಿತು. ಬಳಿಕ ಶಾಸಕದ್ವಯರು ಸೆಸ್ಕ್ ಅಧಿಕಾರಿಗಳನ್ನು ದೂರವಾಣಿ ಮೂಲಕ ತರಾಟೆಗೆ ತೆಗೆದುಕೊಂಡರು. ವಿದ್ಯುತ್ ಬಂದ ನಂತರ, ಸಮಸ್ಯೆ ಬಗೆಹರಿಯಿತು.

ಸಮಾವೇಶದಲ್ಲಿ ವಿಧಾನ ಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ ಮಾತನಾಡಿದರು. ಗ್ರಾಪಂ ಸದಸ್ಯರ ಮಹಾ ಒಕ್ಕೂಟದ ಮೈಸೂರು ಜಿಲ್ಲಾ ಸಮಿತಿ ಅಧ್ಯಕ್ಷ ಎನ್.ನಾಗರಾಜು ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಉಪಾಧ್ಯಕ್ಷೆ ಬೃಂದಾ ಕೃಷ್ಣೇಗೌಡ, ರಾಜ್ಯ ಪ್ರಧಾನ ಕಾರ್ಯದರ್ಶಿ ಭೂಪತಿ, ಮಾಧ್ಯಮ ಕಾರ್ಯದರ್ಶಿ ಶಶಿಕಲಾ, ನಿಶಾಂತ್, ರಾಜಾ ಹುಣಸೂರು, ಕೆ.ಎಸ್. ರಾಘವೇಂದ್ರ, ಬೇಬಿ ಮಹೇಶ್, ಚಾಮರಾಜ ನಗರ ಜಿಲ್ಲಾ ಸಂಚಾಲಕ ಮಹದೇವಸ್ವಾಮಿ, ಕೆಂಪರಾಜು, ವೃಷಭೇಂದ್ರಪ್ಪ, ಚಾಮರಾಜನಗರ ಅಧ್ಯಕ್ಷ ಮಾದೇಶ ಆಲ್ಲೂರು, ಕಾರ್ಯದರ್ಶಿ ಬಾಲರಾಜು ಇನ್ನಿತರರು ಉಪಸ್ಥಿತರಿದ್ದರು.

ಹಕ್ಕು ಚ್ಯುತಿಯಾದರೆ ಪ್ರತಿಭಟಿಸಿ

ಗ್ರಾಪಂ ಸದಸ್ಯರಿಗೆ ಎಂಎಲ್‌ಸಿ ಸಿ.ಎನ್.ಮಂಜೇಗೌಡ ಕರೆ



ಮೈಸೂರು, ಜು.31(ಆರ್‌ಕೆಬಿ)– ಗ್ರಾಮ ಪಂಚಾಯಿತಿ ಸದಸ್ಯರು ತಮ್ಮ ಹಕ್ಕುಗಳಿಗೆ ಚ್ಯುತಿಯಾದರೆ ಹೋರಾಟ ನಡೆಸಬೇಕು ಎಂದು ವಿದಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಇಂದಿಲ್ಲಿ ಗ್ರಾಪಂ ಸದಸ್ಯರಿಗೆ ಕರೆ ನೀಡಿದರು.

ಮೈಸೂರಿನ ವಸ್ತುಪ್ರದರ್ಶನ ಆವರಣದಲ್ಲಿ ಗ್ರಾಪಂ ಸದಸ್ಯರ ಬೃಹತ್ ಸ್ವಾಭಿಮಾನಿ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಮಾತ ನಾಡಿದ ಅವರು, ಗ್ರಾಪಂ ಸದಸ್ಯರು ಮೊದಲು ಪಂಚಾಯಿತ್‌ರಾಜ್ ವ್ಯವಸ್ಥೆಯನ್ನು ಸಂಪೂರ್ಣವಾಗಿ ಓದಿಕೊಳ್ಳಬೇಕು. ತಮಗಿರುವ ಹಕ್ಕು ಬಾದ್ಯತೆಗಳ ಬಗ್ಗೆ ತಿಳಿದುಕೊಳ್ಳಬೇಕು. ಪಂಚಾಯಿತ್‌ರಾಜ್ ವ್ಯವಸ್ಥೆ ಯಡಿ ಗ್ರಾಪಂಗಳಿಗೆ ಬರುವ ಅನುದಾನ, ಇತ್ಯಾದಿ ಕಾರ್ಯಕ್ರಮ, ಯೋಜನೆಗಳು, ಗ್ರಾಮಸಭೆಗಳ ನಡಾವಳಿಗಳ ಬಗ್ಗೆ ಅರಿತುಕೊಳ್ಳಬೇಕು. ಸ್ವಾಭಿಮಾನವನ್ನು ಬಲಿಕೊಡದೆ ತಮ್ಮ ಹಕ್ಕು ಚಲಾಯಿಸಬೇಕು. ಅಧಿಕಾರಿಗಳಿಗೆ ತಲೆಬಾಗದೆ, ಕಾಯ್ದೆಗಳ ಪ್ರಾಮಾಣಿಕ ಅನುಷ್ಠಾನಕ್ಕೆ ಒತ್ತು ನೀಡಬೇಕು ಎಂದು ಸದಸ್ಯರಿಗೆ ತಿಳಿ ಹೇಳಿದರು.

ಗ್ರಾಪಂಸದಸ್ಯರು ಮೊದಲು ತಮ ಗೋಸ್ಕರ ರಾಜಕಾರಣಿಗಳ ಮನೆ ಬಾಗಿಲು ತಟ್ಟುವುದನ್ನು ನಿಲ್ಲಿಸಿ, ತಮ್ಮ ಹಕುಗಳನ್ನು ಪ್ರತಿಪಾದಿಸಲು ಅಡ್ಡಿಮಾಡುವ ಮತ್ತು ಹಸ್ತಕ್ಷೇಪ ಮಾಡುವವರನ್ನು ಕ್ಷಮಿಸದೇ ಹೋರಾಡುವ ಮೂಲಕ ಸ್ವಾಭಿಮಾನಿಗಳಾಗಬೇಕು ಎಂದು ಸಲಹೆ ನೀಡಿದರು.

ಗ್ರಾಮ ಪಂಚಾಯಿತಿ ಸದಸ್ಯರಿಗೆ ಉಚಿತ ಬಸ್ ಪಾಸ್, ವಿಮೆ ಸೌಲಭ್ಯ ಸದಸ್ಯರಿಗೆ ಕನಿಷ್ಠ 7000 ರೂ. ಗೌರವಧನ ಕೊಡಿಸಲು ತಾವು ವಿಧಾನ ಪರಿಷತ್ತಿನಲ್ಲಿ ಮುಲಾಜಿಲ್ಲದೆ ಹೋರಾಟ ನಡೆಸುವುದಾಗಿ ಭರವಸೆ ನೀಡಿದರು.

> “ಗ್ರಾಮ ಪಂಚಾಯಿತಿ ಅಧ್ಯಕ್ಷ, ಉಪಾಧ್ಯಕ್ಷರು, ಸದಸ್ಯರ ಗೌರವ ಧನ ಹೆಚ್ಚಳ, ಉಚಿತ ಬಸ್ ಪಾಸ್, ವಿಮಾ ಸೌಲಭ್ಯ ಪಿಂಚಣಿ ಸೌಲಭ್ಯ ಇನ್ನಿತರೆ ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆದು ಸಮಸ್ಯೆಗಳನ್ನು ಬಗೆಹರಿಸಿಕೊಡಲು ಪ್ರಾಮಾಣಿಕ ಪ್ರಯತ್ನ ನಡೆಸುತ್ತೇನೆ.
> - ಡಾ.ಡಿ.ತಿಮ್ಮಯ್ಯ, ವಿಧಾನಪರಿಷತ್ ಸದಸ್ಯ

ಗ್ರಾಪಂ ಸದಸ್ಯರ ಬೃಹತ್ ಮೆರವಣಿಗೆ, ಒಗ್ಗಟ್ಟು ಪ್ರದರ್ಶನ

ಮೈಸೂರು, ಜು.31– ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಗೌರವಧನ ಹೆಚ್ಚಳ ಮಾಡಬೇಕು. ಉಚಿತ ಬಸ್ ಪಾಸ್, ವಿಮಾ ಸೌಲಭ್ಯ ಮತ್ತು ಪಿಂಚಣಿ ಸೌಲಭ್ಯ ಕಲ್ಪಿಸಬೇಕು. ಸಂವಿಧಾನದ ಆಶಯದಂತೆ ಗ್ರಾಪಂಗಳನ್ನು ಸ್ಥಳೀಯ ಸ್ವಯಂ ಸರ್ಕಾರಗಳಾಗಿ ಪರಿವರ್ತಿಸಲು ಸೂಕ್ತ ವಾತಾವರಣ ಸೃಷ್ಟಿಸಬೇಕು. ಗ್ರಾಪಂಗಳಿಗೆ ಅನುದಾನ ಹೆಚ್ಚಳ ಮಾಡಬೇಕು ಎಂಬಿತ್ಯಾದಿ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ಆಶ್ರಯದಲ್ಲಿ ಭಾನುವಾರ ಮೈಸೂರಿನಲ್ಲಿ ಬೃಹತ್ ಮೆರವಣಿಗೆ ನಡೆಸಲಾಯಿತು. ಮೈಸೂರಿನ ಪುರಭವನ ಆವರಣದಿಂದ ಹೋರಾಟ ನೂರಾರು ಮಂದಿ ಗ್ರಾಮ ಪಂಚಾಯಿತಿ ಸದಸ್ಯರು ಜಯಚಾಮರಾಜ ಒಡೆಯರ್ ವೃತ್ತ (ಹಾರ್ಡಿಂಜ್ ವೃತ್ತ)ದ ಮೂಲಕ ವಸ್ತುಪ್ರದರ್ಶನ ಆವರಣ ತಲುಪಿದರು. ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ಸದಸ್ಯರ ಮಹಾ ಒಕ್ಕೂಟದ ರಾಜ್ಯಾಧ್ಯಕ್ಷ ಸತೀಶ್ ಕಾಡಶೆಟ್ಟಿಹಳ್ಳಿ, ಮೈಸೂರು ಜಿಲ್ಲಾಧ್ಯಕ್ಷ ನಾಗರಾಜು, ಪ್ರಧಾನ ಕಾರ್ಯದರ್ಶಿ ಎಡತೊರೆ ಮಹೇಶ್ ನೇತೃತ್ವದಲ್ಲಿ ನೂರಾರು ಮಂದಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ವೇತನ ಹೆಚ್ಚಳ: ಜೆ.ಕೆ.ಟೈರ್ಸ್ ಕಾರ್ಮಿಕರಿಂದ ಈಡುಗಾಯಿ ಸೇವೆ



ಮೈಸೂರು, ಜು.31(ಎಸ್‌ಬಿಡಿ)– ಜೆ.ಕೆ.ಟೈರ್ಸ್ ಕಾರ್ಖಾನೆ ಕಾರ್ಮಿಕರು ತಮ್ಮ ವೇತನ ಹೆಚ್ಚಳವಾದ ಹಿನ್ನೆಲೆಯಲ್ಲಿ ಸಂಕಲ್ಪದಂತೆ ತಾಯಿ ಚಾಮುಂಡೇಶ್ವರಿಗೆ ಈಡುಗಾಯಿ ಸೇವೆ ಸಮರ್ಪಿಸಿದರು. ಮೈಸೂರಿನ ಜೆ.ಕೆ.ಟೈರ್ಸ್ ಕಾರ್ಖಾನೆ ಆಡಳಿತ ಮಂಡಳಿ ಕಾರ್ಮಿಕರ ವೇತನವನ್ನು 6ರಿಂದ 12 ಸಾವಿರ ರೂ. ಹೆಚ್ಚಳ ಮಾಡಿದ್ದು, ಇದಕ್ಕೆ ತಾಯಿ ಚಾಮುಂಡೇಶ್ವರಿ ಕೃಪೆಯೂ ಕಾರಣ ಎಂಬ ನಂಬಿಕೆಯೊಂದಿಗೆ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನೂರೊಂದು ಈಡುಗಾಯಿ ಒಡೆದು, ಭಕ್ತಿ ಮೆರೆದರು.

ಕಾರ್ಖಾನೆ ಹಿರಿಯ ಕಾರ್ಮಿಕ ಡಾಮಡಹಳ್ಳಿ ವಿಕ್ರಾಂತ್ ಪಾಪೇಗೌಡ ಹಾಗೂ ಸಹೋದ್ಯೋಗಿ ಗಳು ಕಳೆದ ಜನವರಿ ತಿಂಗಳಲ್ಲಿ ಕಾರ್ಮಿಕರ ವೇತನ ಹೆಚ್ಚಳಕ್ಕೆ ಕೃಪೆ ತೋರುವಂತೆ ಚಾಮುಂಡೇಶ್ವರಿಯಲ್ಲಿ ನಿವೇದಿಸಿಕೊಂಡು ನೂರೊಂದು ಈಡುಗಾಯಿ ಅರ್ಪಿಸಿ ಬೇಡಿಕೊಂಡಿದ್ದರು. ಇದೇ ವೇಳೆ ಕಾರ್ಮಿಕರ ವೇತನ ಹೆಚ್ಚಳವಾದ ಬಳಿಕ ಮತ್ತೆ ನೂರೊಂದು ಈಡುಗಾಯಿ ಸೇವೆ ಸಮರ್ಪಿಸುವುದಾಗಿ ಸಂಕಲ್ಪ ಮಾಡಿಕೊಂಡಿದ್ದರು. ಸದ್ಯ ಆಡಳಿತ ಮಂಡಳಿಯು ಕಾರ್ಮಿಕರ ವೇತನವನ್ನು ಹೆಚ್ಚಿಸಿರುವುದರಿಂದ ಇಂದು ಬೆಟ್ಟದ ಮೆಟ್ಟಿಲು ಮಾರ್ಗದ ಬಳಿ ಸೇವೆ ಸಮರ್ಪಿಸಿದರು. ಇದೇ ವೇಳೆ ವೇತನ ಹೆಚ್ಚಳಕ್ಕೆ ಹೋರಾಟ ನಡೆಸಿದ್ದ ಕಾರ್ಮಿಕ ಮುಖಂಡರನ್ನು ಅಭಿನಂದಿಸಲಾಯಿತು.

ಜೆ.ಕೆ.ಟೈರ್ಸ್ ಎಂಪ್ಲಾಯೀಸ್ ಅಸೋಸಿಯೇಷನ್ ಅಧ್ಯಕ್ಷ ಜಯಚಂದ್ರ, ಉಪಾಧ್ಯಕ್ಷರಾದ ಮಹಬೂಬ್, ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಎಸ್.ಲೋಕೇಶ್, ಸಹ ಕಾರ್ಯದರ್ಶಿಗಳಾದ ರಾಜು, ಶಿವಲಿಂಗಯ್ಯ, ಖಜಾಂಚಿ ವಿಶ್ವನಾಥ್ ಮತ್ತಿತರರ ಕಾರ್ಮಿಕರು ಈಡುಗಾಯಿ ಸೇವೆಯಲ್ಲಿ ಭಾಗಿಯಾಗಿದ್ದರು.

46 ಸಾವಿರ ಮೌಲ್ಯದ ಮದ್ಯ ಕಳವು

ಶ್ರೀರಂಗಪಟ್ಟಣ,ಜು.31–ವೈನ್‌ಸ್ಟೋರ್‌ಗೆ ಕನ್ನ ಕೊರೆದು 46,622 ಮೌಲ್ಯದ ಮದ್ಯ ಕಳವು ಮಾಡಿರುವ ಘಟನೆ ಶ್ರೀರಂಗಪಟ್ಟಣದ ಹೊಂಗಳ್ಳಿ ಗ್ರಾಮದಲ್ಲಿ ನಡೆದಿದೆ. ಹೊಂಗಳ್ಳಿ ಗ್ರಾಮದ ಚೆಕ್‌ಪೋಸ್ಟ್ ಬಳಿ ಇರುವ ಎಂಎಸ್‌ಐಎಲ್ ಮದ್ಯದ ಅಂಗಡಿ ಗೋಡೆಯನ್ನು ಜು.27ರಂದು ರಾತ್ರಿ ಕೊರೆದು ಒಳ ನುಗ್ಗಿರುವ ಖದೀಮರು ಅಂಗಡಿಯಲ್ಲಿದ್ದ ವಿವಿಧ ಬ್ರ್ಯಾಂಡ್‌ಗಳ 46,622 ರೂ. ಮೌಲ್ಯದ ಮದ್ಯವನ್ನು ಕಳವು ಮಾಡಿದ್ದಾರೆ. ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಿಲ್ಲಾ ಗೃಹ ರಕ್ಷಕ ದಳದ ವಿರುದ್ಧ ಆಪಾದಿಸಿದ್ದ 40 ಮಂದಿ ಗೃಹರಕ್ಷಕ ಸಿಬ್ಬಂದಿ ವಿಚಾರಣೆ

ಮೈಸೂರು, ಜು.31(ಎಸ್‌ಪಿಎನ್)– ಮೈಸೂರು ಜಿಲ್ಲಾ ಗೃಹ ರಕ್ಷಕ ದಳ ಸಿಬ್ಬಂದಿಗಳ ವಿರುದ್ಧ ವಿಚಾರಣೆ ಆರಂಭವಾಗಿದ್ದು, ಜಿಲ್ಲಾ ಹೆಚ್ಚುವರಿ ಎಸ್ಪಿ ನೇತೃತ್ವದಲ್ಲಿ ಈ ವಿಚಾರಣೆ ನಡೆಸಿದ್ದಾರೆ.

> “ಜಿಲ್ಲಾ ಗೃಹರಕ್ಷಕ ದಳದ ಅಧಿಕಾರಿಗಳ ತಾರತಮ್ಯ ನೀತಿ ವಿರುದ್ಧ ಹಾಗೂ ಸಹಾಯಕ ಬೋಧಕರಾದ ಗೋವಿಂದ ಅವರ(ನಿಯೋಜನೆ ರದ್ದು) ಬದಲಾವಣೆ ವಿರೋಧಿಸಿ ಹಿರಿಯ ಅಧಿಕಾರಿಗಳಿಗೆ ಪತ್ರ ಬರೆದಿದ್ದ ಸಿಬ್ಬಂದಿಗೆ ಜಿಲ್ಲಾ ಘಟಕದಿಂದ ನೋಟೀಸ್ ನೀಡಿ, ಜು.28ರಂದು ವಿಚಾರಣೆ ನಡೆಸಿದ್ದಾರೆ. ಈ ವೇಳೆ ವಿಚಾರಣೆ ಎದುರಿಸಿದ ಸಿಬ್ಬಂದಿಗೆ 3 ತಿಂಗಳವರೆಗೆ ಕರ್ತವ್ಯಕ್ಕೆ ನಿಯೋಜಿಸದಂತೆ ಹಾಗೂ ಪೆರೇಡ್‌ನಲ್ಲಿ ಭಾಗವಹಿಸದಂತೆ ಹಿರಿಯ ಅಧಿಕಾರಿಗಳು ಮೌಖಿಕ ಆದೇಶ ನೀಡಿದ್ದಾರೆ. ಇದರಲ್ಲಿ ವಿಚಾರಣೆ ಎದುರಿಸಿದ್ದ ಓರ್ವ ಸಿಬ್ಬಂದಿ ನಟರಾಜಮೂರ್ತಿ ಎಂಬುವರಿಗೆ ಬೆಂಗಳೂರಿನಲ್ಲಿ ಸೋಮವಾರದಿಂದ ಆರಂಭವಾಗುತ್ತಿರುವ ಆಫೀಸರ್ಸ್ ತರಬೇತಿಗೆ ನಿಯೋಜಿಸಿರುವುದು ಎಷ್ಟರ ಮಟ್ಟಿಗೆ ಸರಿ? ಹಾಗೂ ಇದೇ ರೀತಿ ಬೇರೆಯವರೆಗೂ ಸೇವಾ ಹಿರಿತನದ ಮೇಲೆ ಅವಕಾಶ ಕಲ್ಪಿಸಲಿ.
> -ನೊಂದ ಗೃಹರಕ್ಷಕ ದಳದ ಸಿಬ್ಬಂದಿ.

ಜಿಲ್ಲಾ ಗೃಹರಕ್ಷಕದಳ ಸಹಾಯಕ ಬೋಧಕ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಗೋವಿಂದ ಎಂಬುವರ ಬದಲಾವಣೆ(ನಿಯೋಜನೆ ರದ್ದು) ವಿರೋಧಿಸಿ ಹಾಗೂ ಸಾಮಾನ್ಯ ಗೃಹರಕ್ಷಕನಿಗೆ ಕರ್ತವ್ಯ ನೀಡದೆ ಕಿರುಕುಳ ನೀಡುತ್ತಿರುವುದರ ಕುರಿತು ಬೆಂಗಳೂರು ಗೃಹರಕ್ಷಕ ದಳದ ಉಪ ಮಹಾ ಸಮಾದೇಷ್ಟರು ಹಾಗೂ ಪೌರರಕ್ಷಕ ವಿಭಾಗದ ಉಪನಿರ್ದೇಶಕರಿಗೆ ಪತ್ರ ಬರೆದಿದ್ದ 40 ಮಂದಿ ಸಿಬ್ಬಂದಿ ವಿರುದ್ಧ ಈ ವಿಚಾರಣೆ ನಡೆದಿದೆ.

ಮೈಸೂರು ಗೃಹ ರಕ್ಷಕದಳದಲ್ಲಿ ಸಹಾಯಕ ಬೋಧಕ ಗೋವಿಂದ ಅವರು ಕರ್ತವ್ಯಕ್ಕೆ ಹಾಜರಾದ ದಿನದಿಂದ ಅಸ್ತವ್ಯಸ್ತಗೊಂಡಿದ್ದ ಜಿಲ್ಲಾ ಗೃಹರಕ್ಷಕ ಘಟಕದಲ್ಲಿ ಸಾಕಷ್ಟು ಬದಲಾವಣೆಗೆ ಶ್ರಮಿಸಿದ್ದರು. ಆದರೆ, ಇವರ ವಿರುದ್ಧ ಕೆಲ ಹಿರಿಯ ಅಧಿಕಾರಿಗಳೇ ಷಡ್ಯಂತ್ರ ರೂಪಿಸಿ, ಬದಲಾವಣೆ (ನಿಯೋಜನೆ ರದ್ದುಗೊಳಿಸಲು)ಗೆ ಮಸಲತ್ತು ನಡೆಸಿದ್ದರು.

ಅಲ್ಲದೆ, ಸಾಮಾನ್ಯ ಗೃಹರಕ್ಷಕ ಸಿಬ್ಬಂದಿಗೆ ಯಾವ ಮಾಹಿತಿ ನೀಡದೇ ಏಕಾಏಕಿ ಕರ್ತವ್ಯಕ್ಕೆ ನಿಯೋಜಿಸುವುದು. ಇಂತಹ ಸಿಬ್ಬಂದಿಗಳು ಕಾರಣಾಂತರಗಳಿಂದ ಕರ್ತವ್ಯಕ್ಕೆ ಹಾಜರಾಗದಿದ್ದರೆ , ಕೆಲಸ ನೀಡದೇ ತಾರತಮ್ಯ ಎಸಗುತ್ತಿದ್ದಾರೆ ಎಂದು ಹಿರಿಯ ಅಧಿಕಾರಿಗಳಿಗೆ ಬರೆದ ಪತ್ರದಲ್ಲಿ ಆಗ್ರಹಿಸಿದ್ದರು. ಸೇವಾ ಹಿರಿತನ ಹೊಂದಿದ್ದ ಸಿಬ್ಬಂದಿಯನ್ನು ಕಡೆಗಣಿಸಿ, ಕಿರಿಯರಿಗೆ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಪತ್ರದಲ್ಲಿ ದೂರಲಾಗಿತ್ತು.

ವಿಚಾರಣೆ ಎದುರಿಸಿದ ಸಿಬ್ಬಂದಿ: ಈ ಹಿನ್ನೆಲೆಯಲ್ಲಿ ಮೈಸೂರು ಜಿಲ್ಲಾ ಗೃಹರಕ್ಷಕ ದಳದ ಸಹಾಯಕ ಆಡಳಿತಾಧಿಕಾರಿ ಅವರು, ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ಜಿಲ್ಲಾ ಗೃಹರಕ್ಷಕದಳದ ವಿರುದ್ಧ ಪತ್ರ ಬರೆದಿದ್ದ 40 ಮಂದಿಗೆ ಜು.28 ರಂದು ಬೆಳಗ್ಗೆ 10.30ಕ್ಕೆ ಸರಸ್ವತಿಪುರಂನ ಅಗ್ನಿಶಾಮಕ ದಳದ ಆವರಣದ ಸಮಾದೇಷ್ಟವರ ಕಾರ್ಯಾಲಯದಲ್ಲಿ ವಿಚಾರಣೆ ಹಾಜರಾಗಿ ಉತ್ತರ ನೀಡುವಂತೆ ನೋಟೀಸ್ ಜಾರಿಗೊಳಿಸಿದ್ದರು. ಈ ಹಿನ್ನೆಲೆಯಲ್ಲಿ ಎಲ್ಲರೂ ಹಾಜರಾಗಿ ವಿಚಾರಣೆಗೆ ಸಹಕರಿಸಿದರು.

ರಾಜ್ಯದಲ್ಲಿಂದು 1,692 ಮಂದಿಗೆ ಕೊರೊನಾ ಸೋಂಕು

ಬೆಂಗಳೂರು: ಕಳೆದ ಎರಡು ದಿನಗಳಿಂದ ಕೊರೊನಾ ಸೋಂಕಿತರ ಸಂಖ್ಯೆ ಇಳಿಮುಖವಾಗುತ್ತಿದೆ. ನಿನ್ನೆ 1,886 ಇದ್ದ ಕೊರೊನಾ ಸೋಂಕಿತರ ಸಂಖ್ಯೆ ಇಂದು 1,692ಕ್ಕೆ ಇಳಿಕೆಯಾಗಿದೆ. ಇಬ್ಬರು ಕೊರೊನಾ ಸೋಂಕಿಗೆ ಬಲಿಯಾಗಿದ್ದಾರೆ.

ಇಂದು ರಾಜ್ಯದಲ್ಲಿ 1,094 ಮಂದಿ ಕೊರೊನಾದಿಂದ ಗುಣಮುಖರಾಗಿ ವಿವಿಧ ಆಸ್ಪತ್ರೆಗಳಿಂದ ಬಿಡುಗಡೆಯಾಗಿದ್ದಾರೆ. ಈ ಮೂಲಕ ರಾಜ್ಯದಲ್ಲಿ ಇದುವರೆಗೆ 39,56,112 ಮಂದಿ ಕೊರೊನಾದಿಂದ ಚೇತರಿಸಿಕೊಂಡಿದ್ದಾರೆ. ಇಂದು 33,320 ಮಂದಿಯನ್ನು ಕೊರೊನಾ ಪರೀಕ್ಷೆಗೆ ಒಳಪಡಿಸಲಾಗಿದೆ. ಇದರೊಂದಿಗೆ ಇಲ್ಲಿಯವರೆಗೆ 6,78,01,921 ಮಂದಿಯನ್ನು ಟೆಸ್ಟ್ ಮಾಡಲಾಗಿದೆ. ಕೋವಿಡ್‌ನಿಂದ ಇಂದು ಎರಡು ಮರಣ ಪ್ರಕರಣ ದಾಖಲಾಗಿದ್ದು, ಇದುವರೆಗೆ ಒಟ್ಟು 40,104 ಮಂದಿ ಜೀವ ಕಳೆದುಕೊಂಡಿದ್ದಾರೆ.

ಧ್ರುವನಾರಾಯಣ್ ಹುಟ್ಟುಹಬ್ಬ: ತಿ.ನರಸೀಪುರದಲ್ಲಿ ಸೇವಾಕಾರ್ಯ



ತಿ.ನರಸೀಪುರ, ಜು.31– ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ 61ನೇ ಹುಟ್ಟುಹಬ್ಬದ ಪ್ರಯುಕ್ತ ಭಾನುವಾರ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಪಟ್ಟಣದ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು. ಬಳಿಕ ಆಸ್ಪತ್ರೆ ಹೊರಾವರಣದಲ್ಲಿ ಕೇಕ್ ಕತ್ತರಿಸಿ ಸಾರ್ವಜನಿಕರಿಗೆ ವಿತರಿಸಿದರು.

ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್ ಮಾತನಾಡಿ, ಸರಳ ಸಜ್ಜನಿಕೆ ವ್ಯಕ್ತಿತ್ವದ ಆರ್.ಧ್ರುವನಾರಾಯಣ್ ಅವರು ಕ್ರಿಯಾಶೀಲರಾಗಿ ಪಕ್ಷ ಸಂಘಟನೆಗೆ ಹಗಲಿರುಳು ದುಡಿಯುತ್ತಿದ್ದಾರೆ. ಈ ಭಾಗದ ಸಂಸತ್ ಸದಸ್ಯರಾಗಿ ಹಲವು ಶಾಶ್ವತ ಯೋಜನೆಗಳನ್ನು ತರುವ ಮೂಲಕ ಮೂಲ ಸೌಕರ್ಯ ಅಭಿವೃದ್ಧಿಪಡಿಸಿದರು. ಶೈಕ್ಷಣಿಕ ಕ್ಷೇತ್ರ ಬಲಪಡಿಸಲು ಹಲವು ಸರ್ಕಾರಿ ಶಾಲೆಗಳಿಗೆ ಸುಸಜ್ಜಿತ ಕಟ್ಟಡ ಕಲ್ಪಿಸಿಕೊಟ್ಟರು. ಸಾಮಾಜಿಕ ಬದ್ಧತೆ ಇರುವ ಧ್ರುವನಾರಾಯಣ್ ಅವರಿಗೆ ಮುಂದಿನ ದಿನಗಳಲ್ಲಿ ಆಯುರ್ ಆರೋಗ್ಯದೊಂದಿಗೆ ಉನ್ನತ ರಾಜಕೀಯ ಅಧಿಕಾರ ಸಿಗಲಿ ಎಂದರು.

ಜಿಪಂ ಮಾಜಿ ಸದಸ್ಯ ಮಂಜುನಾಥನ್ ಮಾತನಾಡಿ, ಮಾಜಿ ಸಂಸದ ಆರ್.ಧ್ರುವನಾರಾಯಣ್‌ರವರು ಕೇಂದ್ರ ಪುರಸ್ಕೃತ ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ಅತ್ಯುತ್ತಮ ಸಂಸದರಲ್ಲಿ ಪ್ರಮುಖರಾಗಿದ್ದರು. ಜನರೊಂದಿಗೆ ನಿರಂತರ ಒಡನಾಟ ಇಟ್ಟುಕೊಂಡು ಸಮಸ್ಯೆಗಳಿಗೆ ಸ್ಪಂದಿಸುವ ಗುಣವಿರುವ ಅವರಿಗೆ ದೇವರು ರಾಜಕೀಯ ಅಧಿಕಾರ ನೀಡಲಿ ಎಂದು ಶುಭ ಹಾರೈಸಿದರು.

ಈ ವೇಳೆ ವರುಣಾ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಮುದ್ದೇಗೌಡ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಎಂ.ಮಹದೇವಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ಪುರಸಭಾ ಮಾಜಿ ಅಧ್ಯಕ್ಷ ಎನ್.ಸೋಮು, ಉಮೇಶ್, ತಾಪಂ ಮಾಜಿ ಸದಸ್ಯ ಎಂ.ರಮೇಶ, ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್, ಡಿ.ಕೆ.ಶಿವಕುಮಾರ್ ಅಭಿಮಾನಿ ಬಳಗದ ಅಧ್ಯಕ್ಷ ಚೇತನ್, ಎಪಿಎಂಸಿ ಮಾಜಿ ಸದಸ್ಯ ಪುಟ್ಟಸ್ವಾಮಿ, ಗ್ರಾಪಂ ಸದಸ್ಯ ಉಮೇಶ್, ಚನ್ನರಾಜು, ಪುರಸಭಾ ಸದಸ್ಯ ಆರ್.ನಾಗರಾಜು, ಮುಖಂಡರಾದ ಬಸವರಾಜು, ಹೆಚ್.ಸಿ.ಅರುಣ್ ಕುಮಾರ, ಪುಟ್ಟು, ರವಿ, ಅಮಾಸೆಗೌಡ, ನಾಗಣ್ಣ, ನಾಗ, ಗೋಪಿ, ಬೋರೇಗೌಡ, ಕಿಶೋರ್ ಕುಮಾರ್, ದೇವರಾಜು ಇನ್ನಿತರರಿದ್ದರು.

ಪೊಲೀಸರಿಗೆ ಸಾರ್ವಜನಿಕರೊಂದಿಗೆ ಉತ್ತಮ ಒಡನಾಟವಿರಬೇಕು

ನಿವೃತ್ತ ಡಿಜಿಪಿ ರಾಜೇಂದ್ರ ಪ್ರಸಾದ್ ಅಭಿಮತ



ಜಿ.ಎಸ್. ಮೋಹನ್ ಅವರ ಅಭಿನಂದನ ಸಮಾರಂಭದಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಜಿ.ಎಸ್. ಮೋಹನ್ ಮತ್ತು ಅವರ ಪತ್ನಿ ವನಿತ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಜು.31(ಜಿಎ)– ಉತ್ತಮ ಪೊಲೀಸ್ ಅಧಿಕಾರಿಯಾಗಬೇಕು ಎಂದರೆ ಸಾರ್ವಜನಿಕರೊಂದಿಗೆ ಉತ್ತಮ ಒಡನಾಟ ಇರಬೇಕು. ಆದರೆ, ಇತ್ತೀಚಿನ ದಿನಗಳಲ್ಲಿ ಪೊಲೀಸರು ಸಾರ್ವಜನಿಕರೊಂದಿಗೆ ಬೆರೆಯುತ್ತಿಲ್ಲ ಎಂದು ನಿವೃತ್ತ ಡಿಐಜಿ ಡಾ.ಪಿ.ರಾಜೇಂದ್ರ ಪ್ರಸಾದ್ ಬೇಸರ ವ್ಯಕ್ತಪಡಿಸಿದರು.

ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ಜಿ.ಎಸ್.ಮೋಹನ್ ಸ್ನೇಹ ಬಳಗದ ವತಿಯಿಂದ ಪೊಲೀಸ್ ಇಲಾಖೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿ ನಿವೃತ್ತರಾದ ಜಿ.ಎಸ್. ಮೋಹನ್ ಅವರ ಅಭಿನಂದನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಪೊಲೀಸರಿಗೆ ಸ್ನೇಹ ಬಳಗವಿರುವುದು ಅತ್ಯಂತ ವಿರಳ. ಅವರಿಗೆ ಶತ್ರುಗಳ ಸಂಖ್ಯೆ ಹೆಚ್ಚಿರುತ್ತದೆ. ಏಕೆಂದರೆ ಪೊಲೀಸ್ ಇಲಾಖೆಯವರು ಯಾವಾಗಲೂ ನೆಗೆಟಿವ್ ಕೆಲಸಗಳನ್ನು ಮಾಡುತ್ತಾರೆ. ಅದಕ್ಕೆ ಪೊಲೀಸರು ಹೀರೋಗಳ ರೀತಿ ಯಾರಿಗೂ ಕಾಣುವುದಿಲ್ಲ. ಎಲ್ಲರೂ ವಿಲನ್‌ಗಳ ರೀತಿ ಕಾಣುತ್ತಾರೆ ಎಂದರು.

ಜನರ ಮನಸು ಗೆಲುವುದು ಬಹಳ ಕಷ್ಟ. ಪೊಲೀಸ್ ಸೇವೆ ಮಾಡುವುದು ಒಂದು ಉತ್ತಮವಾದ ಅವಕಾಶ ಅದನ್ನು ಸದುಪಯೋಗ ಅಥವಾ ದುರುಪಯೋಗ ಪಡಿಸಿಕೊಳ್ಳಬಹುದು. ಇದರ ನಡುವೇ ಜನರನ್ನು ಸಂಪಾದನೆ ಮಾಡುವುದು ಬಹಳ ಕಷ್ಟ ಸಂಗತಿಯಾಗಿದೆ. ಕಷ್ಟ ಬಂದಾಗ ಮಾತ್ರ ನಾವು ಸಾರ್ವಜನಿಕರ ಬಳಿ ಹೋಗುತ್ತೇವೆ. ಆದರೆ, ಇತರೆ ಸಂದರ್ಭದಲ್ಲಿ ಹೋಗಿ ಅವರೊಟ್ಟಿಗೆ ಬೆರೆಯುವುದಿಲ್ಲ. ಹಾಗೇ ಅಧಿಕಾರವಿದ್ದಾಗ ದರ್ಪ ತೋರಬಾರದು. ತೋರಿದರೆ ನಮಗೆ ಕಷ್ಟವಾದಾಗ ಸಾರ್ವಜನಿಕರು ನಮ್ಮ ಜೊತೆ ನಿಲ್ಲುವುದಿಲ್ಲ ಎಂದ ಅವರು ನಾಗರಿಕರು ಮಫ್ತಿಯಲ್ಲಿರುವ ಪೊಲೀಸರಂತೆ ಇರಬೇಕು ಯೂನಿಫಾರಂನಲ್ಲಿರುವ ಪೊಲೀಸರು ನಾಗರಿಕರಂತೆ ಇರಬೇಕು. ಆ ರೀತಿ ಇದ್ದರೆ ಮಾತ್ರ ಉತ್ತಮ ಸಮಾಜ ಕಾಣಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಸಾರ್ವಜನಿಕರು, ವಿವಿಧ ಸಂಘ ಸಂಸ್ಥೆಯವರು ಮೋಹನ್ ಅವರನ್ನು ಅಭಿನಂದಿಸುತ್ತಿದ್ದಾರೆ. ಇದನ್ನು ನೋಡಿದ್ದರೆ, ಮೋಹನ್ ಅವರು ಸಾರ್ವಜನಿಕರೊಂದಿಗೆ ಎಷ್ಟು ಒಡನಾಟ ಇಟ್ಟುಕೊಂಡಿದ್ದರು ಎಂಬುದಕ್ಕೆ ಇಂದಿನ ಕಾರ್ಯಕ್ರಮ ಸಾಕ್ಷಿಯಾಗಿದೆ. ಇದು ಅನೇಕ ಪೊಲೀಸರಿಗೂ ಸ್ಫೂರ್ತಿ ನೀಡುವಂತಿದೆ. ನಾನು ಮೈಸೂರಿನ ಡಿಸಿಪಿಯಾಗಿದ್ದಾಗ ಮೋಹನ್ ಅವರು ವಿಜಯನಗರ ಠಾಣೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಆ ವ್ಯಾಪ್ತಿಯಲ್ಲಿ ಅನಗತ್ಯವಾಗಿ ಕಾನೂನು ಸುವ್ಯವಸ್ಥೆಯನ್ನು ಹಾಳು ಮಾಡುತ್ತಿದ್ದ ಮಂಟೇಲಿಂಗಯ್ಯ ಕೇಸ್ ಅನ್ನು ಉತ್ತಮವಾಗಿ ನಿಭಾಯಿಸಿ ಶಿಕ್ಷೆ ಕೊಡಿಸುವಲ್ಲಿ ಯಶಸ್ಸು ಕಂಡಿದ್ದರು. ಅಲ್ ಬದರ್ಸ್ ಪಾಕಿಸ್ತಾನದ ಉಗ್ರರನ್ನು ಬಂಧಿಸಿದ ಪ್ರಕರಣವನ್ನು ಉತ್ತಮವಾಗಿ ನಿರ್ವಹಿಸಿದರು ಹಾಗೂ ಚಾಮುಂಡೇಶ್ವರಿ ಉಪ ಚುನಾವಣೆ ಸಂದರ್ಭದಲ್ಲಿಯೂ ಯಾವುದೇ ಅಹಿತಕರ ಘಟನೆಯಾಗದಂತೆ ನೋಡಿಕೊಂಡಿದ್ದರು ಎಂದು ನೆನೆದರು.

ಕಾರ್ಯಕ್ರಮದಲ್ಲಿ ಮೈಸೂರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಜಿ.ಎಸ್.ಮೋಹನ್ ಸ್ನೇಹ ಬಳಗದ ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣ್ ಗೌಡ, ನಿವೃತ್ತ ಇಂಜಿನಿಯರ್ ಎಂ.ಕೆ. ನಂಜಯ್ಯ, ಪ್ರಕಾಶ್, ಚೆನ್ನಕೇಶವ್, ಲೋಕೇಶ್, ಪಾಲಿಕೆ ಸದಸ್ಯರಾದ ಪ್ರೇಮಶಂಕ್ರೆಗೌಡ, ಕೆ.ವಿ. ಶ್ರೀಧರ್, ಪುಷ್ಪಲತಾ ಜಗನ್ನಾಥ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಮಂಚೇಗೌಡ, ಗಂಗಾಧರ್ ಗೌಡ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಪತ್ರಾ ಚಾಲ್ ಭೂ ಹಗರಣ

ಸಂಸದ ಸಂಜಯ್ ರಾವತ್ ಇಡಿ ವಶಕ್ಕೆ

ನವದೆಹಲಿ: ಪತ್ರಾ ಚಾಲ್ ಭೂ ಹಗರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಸೇನೆ ಮುಖಂಡ, ಸಂಸದ ಸಂಜಯ್ ರಾವತ್ ರನ್ನು ಜಾರಿ ನಿರ್ದೇಶನಾಲಯ ವಶಕ್ಕೆ ಪಡೆದಿದೆ. ರಾವತ್ ನಿವಾಸದ ಮೇಲೆ ದಾಳಿ ನಡೆಸಿದ ಗಂಟೆಗಳ ನಂತರ ಇಡಿ ಅವರನ್ನು ವಶಕ್ಕೆ ಪಡೆದಿದೆ. 1,034 ಕೋಟಿ ರೂ.ಗಳ ಪತ್ರಾ ಚಾವ್ಲ್ ಭೂ ಹಗರಣಕ್ಕೆ ಸಂಬಂಧಿಸಿದಂತೆ ರಾವತ್ ಅವರನ್ನು ಈ ಹಿಂದೆ ಎರಡು ಬಾರಿ ವಿಚಾರಣೆ ನಡೆಸಲಾಗಿತ್ತು. ಜುಲೈ 1ರಂದು ರಾವತ್ ಅವರನ್ನು ಸುಮಾರು 10 ಗಂಟೆಗಳ ಕಾಲ ವಿಚಾರಣೆ ನಡೆಸಿದ್ದ ಇಡಿ ಈ ಸಂದರ್ಭದಲ್ಲಿ ಅವರ ಹೇಳಿಕೆಯನ್ನು ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆಯ(ಪಿಎಂಎಲ್‌ಎ) ಕ್ರಿಮಿನಲ್ ಸೆಕ್ಷನ್‌ಗಳ ಅಡಿಯಲ್ಲಿ ದಾಖಲಿಸಿಕೊಂಡಿತ್ತು.



ಕಳೆದ ಏಪ್ರಿಲ್‌ನಲ್ಲಿ, ಜಾರಿ ನಿರ್ದೇಶನಾಲಯವು ತನ್ನ ತನಿಖೆಯ ಭಾಗವಾಗಿ ರಾವತ್ ಅವರ ಪತ್ನಿ ವರ್ಷಾ ರಾವತ್ ಮತ್ತು ಅವರ ಇಬ್ಬರು ಸಹಚರರ 11.15 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿತ್ತು ಜಾರಿ ನಿರ್ದೇಶನಾಲಯದ (ಇ.ಡಿ) ತಂಡವು ಇಂದು ಬೆಳಗ್ಗೆ ಮುಂಬೈನಲ್ಲಿರುವ ಶಿವಸೇನಾ ಸಂಸದ ಸಂಜಯ್ ರಾವುತ್ ಅವರ ನಿವಾಸದಲ್ಲಿ ಶೋಧ ಕಾರ್ಯ ಕೈಗೊಂಡಿದೆ. ಮುಂಬೈನ 'ಪತ್ರಾ ಚಾಲ್' ಪ್ರಕರಣಕ್ಕೆ ಸಂಬಂಧಿಸಿದಂತೆ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ರಾವುತ್ ಅವರನ್ನು ಇ.ಡಿ ತನಿಖೆ ನಡೆಸುತ್ತಿದೆ. ಸಂಜಯ್ ರಾವತ್ ರನ್ನು ಇಡಿ ವಶಕ್ಕೆ ಪಡೆದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ರಾವತ್ ನಿವಾಸದ ಎದುರು ಪೊಲೀಸ್ ಬಿಗಿ ಬಂದೋಬಸ್ತ್ ಮಾಡಲಾಗಿದೆ.

ನಕ್ಕರೆ ಅದೇ ಸ್ವರ್ಗ

ಟೀಚರ್ : ರಾಮನು ಮರದಿಂದ ಕೆಳಗೆ ಬಿದ್ದನು–ಇದು ಯಾವ ಕಾಲ?
ಗುಂಡ : ರಾಮನಿಗೆ ಕೆಟ್ಟ ಕಾಲ.

ಮೈಸೂರು ಮಿತ್ರ

ಸೋಮವಾರ, 1 ಆಗಸ್ಟ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಮಳೆ ನೀರಿಗಿಂತ ಬೇರೆ ನೀರಿಲ್ಲ, ಆತ್ಮ ಬಲಕ್ಕಿಂತ ಬೇರೆ ಬಲವಿಲ್ಲ, ಕಣ್ಣಿಗಿಂತ ಬೇರೆ ತೇಜಸ್ಸಿಲ್ಲ, ಧ್ಯಾನಕ್ಕಿಂತ ಶಾಂತವಾದುದು ಬೇರೊಂದಿಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಉಣ್ಣಲಿಕ್ಕೆ ಇಲ್ಲದಿದ್ದರೂ ಸಣ್ಣಕ್ಕಿ ಅನ್ನ, ಉಡಲಿಕ್ಕೂ ಇಲ್ಲದಿದ್ದರೂ ಪಟ್ಟೆ ಸೀರೆ...

ದುಡಿಯುವ ಮಹಿಳೆಯರ ಮಕ್ಕಳಿಗಾಗಿ ಶಿಶುಪಾಲನಾ ಕೇಂದ್ರ ಸ್ಥಾಪನೆ

ಅಸಂಘಟಿತ ವಲಯಗಳಲ್ಲಿ ಕೆಲಸ ಮಾಡುವ ಮಹಿಳೆಯರಿಗೂ ವಸತಿ ನಿಲಯ ಸೌಲಭ್ಯ





● ಎಸ್.ಟಿ.ರವಿಕುಮಾರ್

ಮೈಸೂರು, ಜು.31– ಇತ್ತೀಚಿನ ದಿನಗಳಲ್ಲಿ ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಜೀವನ ಸಾಗಿಸಲು ಪತಿ–ಪತ್ನಿ ಉದ್ಯೋಗ ಮಾಡುವುದು ಅನಿವಾರ್ಯವಾಗಿದೆ. ಪುರುಷರಿಗೆ ಸರಿಸಮಾನವಾಗಿ ಮಹಿಳೆಯರೂ ಸಹ ಎಲ್ಲಾ ಕ್ಷೇತ್ರಗಳಲ್ಲಿ ಮುನ್ನೆಲೆಯಲ್ಲಿದ್ದು, ದುಡಿದು ತಮ್ಮ ಕಾಲಿನ ಮೇಲೆ ತಾನು ನಿಲ್ಲುವ ಹಾಗೂ ಪತಿಯ ಆದಾಯವನ್ನೇ ಅವಲಂಬಿಸದೇ ಸ್ವಾವಲಂಬಿ ಜೀವನ ನಡೆಸಲು ಬಯಸುತ್ತಿರುವವರ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ.

ದುಡಿಮೆಗೆಂದು ಹೊರಗೆ ಹೋದರೆ ತಮ್ಮ ಮಕ್ಕಳನ್ನು ನೋಡಿಕೊಳ್ಳಲು ಮನೆಯಲ್ಲಿ ತಂದೆ–ತಾಯಿ, ಅತ್ತೆ–ಮಾವ ಅಥವಾ ಸಂಬಂಧಿಕರಿದ್ದರೆ ತೊಂದರೆ ಇಲ್ಲ. ಆದರೆ ಇತ್ತೀಚಿನ ದಿನಗಳಲ್ಲಿ ವಯಸ್ಸಾದ ತಂದೆ–ತಾಯಂದಿರು ಹಾಗೂ ಅತ್ತೆ–ಮಾವಂದಿರೊಂದಿಗೆ ಸಹ ಕುಟುಂಬದಲ್ಲಿ ವಾಸಿಸುವವರ ಸಂಖ್ಯೆ ಕಡಿಮೆಯಾಗುತ್ತಿದ್ದು, ಪ್ರತ್ಯೇಕ ಮನೆ ಮಾಡಿಕೊಂಡು ಸ್ವತಂತ್ರವಾಗಿ ಬದುಕಬೇಕೆನ್ನುವವರ ಸಂಖ್ಯೆ ಅಧಿಕವಾಗಿದೆ.

ತಮ್ಮ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ಮಾಡಿಸಬೇಕೆಂಬ ಮಹದಾಸೆಯಿಂದ ಹಳ್ಳಿಗಳಿಂದ ನಗರ ಪ್ರದೇಶಗಳಿಗೆ ಬಂದು ವ್ಯಾಪಾರ, ಉದ್ದಿಮೆ, ಉದ್ಯೋಗ ಅರಸಿ ಬಾಡಿಗೆ ಮನೆ ಮಾಡಿಕೊಂಡು ಜೀವನ ಸಾಗಿಸುವ ಪ್ರವೃತ್ತಿಯೂ ವ್ಯಾಪಕವಾಗಿರುವುದರಿಂದಲೇ ನಗರೀಕರಣ ವಿಸ್ತಾರವಾಗಿ ಬೆಳೆಯುತ್ತಿರುವುದನ್ನು ಕಾಣಬಹುದಾಗಿದೆ.

ಅಂತಹ ಉದ್ಯೋಗಸ್ಥ ಮಹಿಳೆಯರ ಆರು ವರ್ಷದೊಳಗಿನ ಮಕ್ಕಳನ್ನು ಕೆಲಸದ ವೇಳೆ ಬೆಳಗ್ಗೆ 9.30ರಿಂದ ಸಂಜೆ 6 ಗಂಟೆವರೆಗೆ ನೋಡಿಕೊಂಡು ಪಾಲನೆ ಮಾಡಲೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೈಸೂರು ನಗರದ ಬನ್ನೂರು ರಸ್ತೆಯ ಡೈರಿ ಬಳಿ ಇರುವ ಜಿಲ್ಲಾಧಿಕಾರಿ ಕಚೇರಿ ನೂತನ ಕಟ್ಟಡದಲ್ಲಿ, ಮೈಸೂರು ಜಿಲ್ಲಾ ಪಂಚಾಯಿತಿ ಕಚೇರಿ, ಹುಣಸೂರಿನ ತಾಲೂಕು ಪಂಚಾಯಿತಿ ಕಚೇರಿ ಹಾಗೂ ನಂಜನಗೂಡಿನ ಸ್ತ್ರೀಶಕ್ತಿ ಭವನದಲ್ಲಿ ಶಿಶುಪಾಲನಾ ಕೇಂದ್ರಗಳನ್ನು ತೆರೆದಿದೆ.

ಅಲ್ಲಿ ಮಕ್ಕಳಿಗಾಗಿ ಚೇರ್, ಟೇಬಲ್, ಬಣ್ಣ ಬಣ್ಣದ ಚಿತ್ರಗಳನ್ನು ಗೋಡೆಗಳಲ್ಲಿ ಬರೆದು ಆಹ್ಲಾದಕರ ವಾತಾವರಣ ನಿರ್ಮಿಸಲಾಗಿದೆ. ಆಟಿಕೆ ವಸ್ತುಗಳು, ಬೊಂಬೆಗಳು, ಪುಟಾಣಿ ಮಕ್ಕಳನ್ನು (6 ತಿಂಗಳೊಳಗಿನ) ಮಲಗಿಸಲು ತೊಟ್ಟಿಲುಗಳನ್ನು ಒದಗಿಸಲಾಗಿದೆ.

ಮಕ್ಕಳಿಗೆ ಉಚಿತವಾಗಿ ಉಪಹಾರ, ಹಾಲು ಪೂರೈಸಲಾಗುತ್ತಿದ್ದು, ಓರ್ವ ಅಂಗನವಾಡಿ ಶಿಕ್ಷಕಿ, ಓರ್ವ ಸಹಾಯಕಿಯನ್ನು ಮಕ್ಕಳ ವಿದ್ಯಾಭ್ಯಾಸ ಹಾಗೂ ಪಾಲನೆಗಾಗಿ ನಿಯೋಜಿಸಲಾಗಿದೆ. ಉದ್ಯೋಗಸ್ಥ ಮತ್ತು ದುಡಿಯುವ ಮಹಿಳೆಯರು 6 ತಿಂಗಳಿಂದ 6 ವರ್ಷದೊಳಗಿನ ತಮ್ಮ ಮಕ್ಕಳನ್ನು ಬೆಳಗ್ಗೆ ಕೆಲಸಕ್ಕೆ ಹೋಗುವಾಗ ಕರೆತಂದು ಶಿಶುಪಾಲನಾ ಕೇಂದ್ರದಲ್ಲಿ ಬಿಟ್ಟು ಕೆಲಸ ಮುಗಿಸಿಕೊಂಡು ಬಂದು ಮನೆಗೆ ಕರೆದೊಯ್ಯಬಹುದಾಗಿದೆ. ತಾಯಂದಿರು ಬಂದು ಕರೆದೊಯ್ಯುವವರೆಗೆ ಕೇಂದ್ರದಲ್ಲಿ ಮಕ್ಕಳನ್ನು ಸಂತೈಸಿ, ಅಟ ಆಡಿಸಿ, ನಿದ್ರೆ ಮಾಡಿಸಿ, ಉಪಹಾರ ನೀಡಿ ಸಲಹುವ ಸಿಬ್ಬಂದಿಗಳು ತಮ್ಮ ಮಕ್ಕಳಂತೆ ನೋಡಿಕೊಳ್ಳುತ್ತಿದ್ದಾರೆ. ಕಳೆದ 20 ದಿನಗಳಿಂದ ಶಿಶುಪಾಲನಾ ಕೇಂದ್ರಗಳನ್ನು ಆರಂಭಿಸಿದ್ದು, ಇದೀಗ ಪ್ರತೀ ಕೇಂದ್ರದಲ್ಲಿ 10ರಿಂದ 15 ಮಕ್ಕಳು ಆಶ್ರಯ ಪಡೆದಿವೆ.





ಸೌಲಭ್ಯ ಪಡೆಯಲು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ಮಂಜುಳಾ ವಿ.ಪಾಟೀಲ್ (ಮೈಸೂರು ಗ್ರಾಮಾಂತರ) 9448185611, ಬಿ.ಎನ್.ಕವಿತಾ (ನಂಜನಗೂಡು ತಾಲೂಕು) 9682962676 ಹಾಗೂ ಎಸ್.ರಶ್ಮಿ (ಹುಣಸೂರು ತಾಲೂಕು)9916695860 ಅವರನ್ನು ಸಂಪರ್ಕಿಸಬಹುದು.

ಕುಡಿಯುವ ಶುದ್ಧ ನೀರು, ಶೌಚಾಲಯ, ಸ್ವಚ್ಛತೆ, ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲು ಸೌಲಭ್ಯಗಳನ್ನು ಶಿಶುಪಾಲನಾ ಕೇಂದ್ರದಲ್ಲಿ ಒದಗಿಸಿ ಉತ್ತಮ ವಾತಾವರಣ ಕಲ್ಪಿಸಲಾಗಿದೆ. ಸರ್ಕಾರಿ, ಅರೆ ಸರ್ಕಾರಿ ಕಚೇರಿ ಅಥವಾ ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ತಮ್ಮ ಮಕ್ಕಳನ್ನು ಈ ಕೇಂದ್ರಗಳಿಗೆ ಬಿಟ್ಟು ಹೋಗಬಹುದಾಗಿದೆ. ಅದಕ್ಕಾಗಿ ಸರ್ಕಾರವೇ ಸಂಪೂರ್ಣ ಸೌಲಭ್ಯ ಒದಗಿಸಿದ್ದು, ಮಹಿಳೆಯರು ಯಾವುದೇ ಶುಲ್ಕ ಪಾವತಿಸಬೇಕಾಗಿಲ್ಲ. ಈ ಸೇವೆ ಸಂಪೂರ್ಣ ಉಚಿತವಾಗಿರುವುದರಿಂದ ಅಗತ್ಯವಿರುವ ಉದ್ಯೋಗಸ್ಥ ಮಹಿಳೆಯರು ಈ ಸೌಲಭ್ಯಗಳನ್ನು ಬಳಸಿಕೊಳ್ಳಬೇಕೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮೈಸೂರು ಜಿಲ್ಲಾ ಉಪ ನಿರ್ದೇಶಕ ಬಸವರಾಜು ಅವರು ತಿಳಿಸಿದ್ದಾರೆ.

ಮಹಿಳೆಯರ ವಸತಿ ನಿಲಯಗಳು: ಅಸಂಘಟಿತ ವಲಯ, ಕೈಗಾರಿಕೆ, ಕಾರ್ಖಾನೆ, ಗಾರ್ಮೆಂಟ್, ಅಂಗಡಿ, ಮಾಲ್‌ಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳೆಯರಿಗೆ ಉಳಿದುಕೊಳ್ಳಲು ಅನುಕೂಲವಾಗುವಂತೆ ಮೈಸೂರು ತಾಲೂಕಿನ ಕೂರ್ಗಳ್ಳಿ ಮತ್ತು ಹೂಟಗಳ್ಳಿಯಲ್ಲಿ ಮಹಿಳೆಯರ ವಸತಿ ನಿಲಯಗಳನ್ನು ಆರಂಭಿಸಲಾಗಿದೆ. 50,000 ರೂ. ಮಾಸಿಕ ಸಂಬಳ ಪಡೆಯುತ್ತಿರುವ ಮಹಿಳಾ ಕಾರ್ಮಿಕರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಂಗವಿಕಲ ಮಹಿಳೆಯರು, ಅಲ್ಪಸಂಖ್ಯಾತ, ವಿಧವೆಯರು, ವಿಚ್ಛೇದಿತ ಹಾಗೂ ಒಬ್ಬಂಟಿ ಮಹಿಳೆಯರಿಗೆ ಈ ವಸತಿ ನಿಲಯಗಳಲ್ಲಿ ವಾಸ್ತವ್ಯ ಹೂಡಲು ಅವಕಾಶ ಕಲ್ಪಿಸಲಾಗಿದೆ. ತಮ್ಮ ದೂರದ ಊರುಗಳಿಂದ ಬಂದು ಹೋಗುವ ಸಾರಿಗೆ ವೆಚ್ಚ, ಊಟ–ತಿಂಡಿ, ವಾಸ್ತವ್ಯಕ್ಕೆ ಮನೆ ಬಾಡಿಗೆ ಹಾಗೂ ನಿರ್ವಹಣೆ ವೆಚ್ಚ ವನ್ನು ಭರಿಸಲು ನಿಯಮಿತ ಸಂಬಳದಿಂದ ಭರಿಸಲು ಪರದಾಡುವ ಮಹಿಳೆಯರಿಗೆ ಅನುಕೂಲವಾಗಲೆಂದು ಸರ್ಕಾರ ಈ ವ್ಯವಸ್ಥೆ ಕಲ್ಪಿಸಿದೆ.

> “ವಸತಿ ನಿಲಯಕ್ಕೆ ಪಡೆದಿರುವ ಮನೆ ಬಾಡಿಗೆ, ವಿದ್ಯುತ್, ನೀರಿನ ಶುಲ್ಕ, ನಿರ್ವಹಣೆ ವೆಚ್ಚ, ಊಟ–ತಿಂಡಿ ಖರ್ಚು ಬರುವುದರಿಂದ ತಿಂಗಳಿಗೆ ಒಬ್ಬ ಮಹಿಳೆ 1,200 ರೂ.ಗಳನ್ನು ಮಾತ್ರ ನಿರ್ವಹಣೆಗಾಗಿ ಪಾವತಿಸಬೇಕಾಗಿದ್ದು, ಒಂದು ಕೊಠಡಿಯಲ್ಲಿ ಇಬ್ಬರು ವಾಸ್ತವ್ಯ ಹೂಡಲು ಅವಕಾಶವಿರುತ್ತದೆ
> –ಬಸವರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ

ಉದ್ಯೋಗಸ್ಥ ಮಹಿಳೆಯರಿಗೆ ಸುರಕ್ಷಿತ ವಾಸ್ತವ್ಯ ಸೌಲಭ್ಯ ಒದಗಿಸುವ ಸಲುವಾಗಿ ಸರ್ಕಾರ ಈ ಯೋಜನೆ ಜಾರಿಗೊಳಿಸಿದ್ದು, ವಸತಿ ನಿಲಯಗಳಲ್ಲಿ ಭದ್ರತೆ, ಸಿಸಿ ಕ್ಯಾಮರಾ ಅಳವಡಿಸಿ ಕಟ್ಟೆಚ್ಚರ ವಹಿಸಲಾಗಿದೆ. ತಿಂಗಳಿಗೆ ಕೇವಲ 1,200 ರೂ. ಪಾವತಿಸಿ ದರೆ ಸಾಕು, ಮಹಿಳೆಯರು ನಿರ್ಭೀತಿಯಿಂದ ವಸತಿ ನಿಲಯಗಳಲ್ಲಿ ವಾಸ ಮಾಡಬಹುದಾಗಿದ್ದು, ಆಸಕ್ತ ಮಹಿಳೆಯರು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳನ್ನು 9448185611, 9682962676, 9916695860 ಮೂಲಕ ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಸವರಾಜು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ನಿಮ್ಮ ಪತ್ರಗಳು

ಅನಾಥವಾದ ಹೊಸ ಜಿಲ್ಲಾಧಿಕಾರಿಗಳ ಕಟ್ಟಡ

ಮಾನ್ಯರೆ,

ಮೈಸೂರಿನ ಸಿದ್ದಾರ್ಥ ಬಡಾವಣೆಯಲ್ಲಿ ಅತ್ಯಂತ ಸುಂದರ ಹಾಗೂ ಭವ್ಯವಾದ ಜಿಲ್ಲಾಧಿಕಾರಿಗಳ ಕಚೇರಿ ನಿರ್ಮಾಣವಾಗಿ ಐದು ವರ್ಷಗಳಾಗುತ್ತಾ ಬಂದಿದೆ. ಹಿಂದೆ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯನವರ ಕನಸಿನ ಭವ್ಯ ಕಟ್ಟಡ ಅನಾಥವಾಗಿರುವುದು ದುರಂತವೇ ಸರಿ.



ಕಟ್ಟಡ ನಿರ್ಮಾಣವಾಗಿ ಉದ್ಘಾಟನೆಯಾಗಿದ್ದರೂ ಪೂರ್ಣ ಪ್ರಮಾಣದ ಕಚೇರಿಗಳು ಸ್ಥಳಾಂತರವಾಗದೆ ಇರುವುದು ನಿಜಕ್ಕೂ ಆಡಳಿತ ನಡೆಸುವವರ ಅದಕ್ಷತೆಗೆ ಸಾಕ್ಷಿಯಾಗಿದೆ. ಜಿಲ್ಲಾಧಿಕಾರಿಗಳ ಕಟ್ಟಡ ಹೊರ ನೋಟಕ್ಕೆ ಸುಂದರವಾಗಿ ಕಂಗೊಳಿಸುತ್ತಿದೆ. ಕಚೇರಿಗೆ ಪ್ರವೇಶ ಮಾಡಿದರೆ ಧೂಳು, ಸ್ವಚ್ಛತೆ ಇಲ್ಲದೆ ಗಬ್ಬು ವಾಸನೆ ಬರುತ್ತದೆ. ಕಟ್ಟಡದ ಹಿಂಭಾಗದಲ್ಲಿ ಗಿಡಗಂಟಿಗಳು ಬೆಳೆದುಕೊಂಡು ವಿಷ ಜಂತುಗಳ ಆವಾಸ ಸ್ಥಾನವಾಗಿರುವುದಲ್ಲದೆ, ಅನೈತಿಕ ಚಟುವಟಿಕೆಗಳ ತಾಣವಾಗಿದೆ.

ಕಟ್ಟಡದ ನಿರ್ವಹಣೆಯನ್ನು ಪೂರ್ಣ ಪ್ರಮಾಣದಲ್ಲಿ ಮಾಡದೆ ಇರುವುದರಿಂದ ಕಟ್ಟಡ ಶಿಥಿಲಾವಸ್ಥೆಯನ್ನು ತಲುಪುತ್ತಿದೆ. ಈ ಕಟ್ಟಡದಲ್ಲಿ ಜಿಲ್ಲಾ ಉಸ್ತುವಾರಿಗಳು ಕಚೇರಿ ಮಾಡಿಕೊಂಡಿರುವುದರಿಂದ ಜಿಲ್ಲಾ ಮಂತ್ರಿಗಳೇ ಸಂಪೂರ್ಣ ಜವಾಬ್ದಾರಿ ಯಾಗುತ್ತಾರೆ. ಜಿಲ್ಲಾ ಮಂತ್ರಿಗಳು ಕಟ್ಟಡವನ್ನು ವೀಕ್ಷಣೆ ಮಾಡಿದರೆ ವಾಸ್ತವ ಅರಿವಾಗುತ್ತದೆ.

ಐದು ವರ್ಷಗಳಾದರೂ ಕಚೇರಿಗಳನ್ನು ಸ್ಥಳಾಂತರಿಸದೆ ಇರುವುದು ಮೈಸೂರು ನಗರದ ಜನತೆಗೆ ಬಗೆದ ದ್ರೋಹ ಎಂದು ಹೇಳಬಹುದು. ಹೇಳುವವರು, ಕೇಳುವವರು ಇಲ್ಲವೆಂದು ಮೈಸೂರಿನ ಸಾಂಸ್ಕೃತಿಕ ನಗರವನ್ನು ಕಳಂಕಿತ ನಗರವಾಗಿ ಮಾಡಬೇಡಿ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು, ಜನಪ್ರತಿನಿಧಿಗಳು ಜವಾಬ್ದಾರಿ ತೆಗೆದುಕೊಂಡು ಭವ್ಯ ಕಟ್ಟಡವನ್ನು ಕಾಪಾಡಬೇಕೆಂದು ಕಳಕಳಿಯ ಮನವಿ. ಕೋಟಿಗಟ್ಟಲೇ ಖರ್ಚು ಮಾಡಿ ನಿರ್ಮಿಸಿರುವ ಕಟ್ಟಡವನ್ನು ನಾಶ ಮಾಡಬೇಡಿ.

– ಪುಟ್ಟಣ್ಣ, ಜೆಎಸ್‌ಎಸ್ ಬಡಾವಣೆ 1ನೇ ಹಂತ, ಮೈಸೂರು.

ಬೈಲಕುಪ್ಪೆಯಲ್ಲಿ ಕಸದ ರಾಶಿ

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕು ಬೈಲಕುಪ್ಪೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಲಕ್ಷ್ಮೀಪುರ ಗ್ರಾಮಕ್ಕೆ ತೆರಳುವ ರಸ್ತೆಯ ಪಕ್ಕದಲ್ಲಿ ರಾಶಿ ರಾಶಿ ಕಸ ಬಿಸಾಡಲಾಗಿದೆ. ಇದರಿಂದ ಅನೈರ್ಮಲ್ಯ, ದುರ್ವಾಸನೆ ಬರುತ್ತಿದ್ದು, ಇಲ್ಲಿನ ಜನರು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಬೈಲಕುಪ್ಪೆ ಗ್ರಾಮ ಪಂಚಾಯಿತಿ ಅಧಿಕಾರಿಗಳು ನೋಡಿಯೂ ಕಣ್ಮುಚ್ಚಿ ಕುಳಿತಿದ್ದಾರೆ. ಎಲ್ಲಾ ಪ್ರಗತಿಯಲ್ಲೂ ಮುಂದಿರುವ ಬೈಲಕುಪ್ಪೆ ಗ್ರಾಮ ಪಂಚಾಯಿತಿ ಶುಚಿತ್ವ ಕಾಪಾಡಿಕೊಳ್ಳುವಲ್ಲಿ ವಿಫಲವಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.



ವಿದ್ಯುತ್ ಟ್ರಾನ್ಸ್‌ಫಾರ್ಮರ್ ಪಕ್ಕದಲ್ಲಿ ಕಸ ತುಂಬಿ ತುಳುಕುತ್ತಿದ್ದು, ಟ್ರಾನ್ಸ್‌ಫಾರ್ಮರ್ ಕೆಟ್ಟು ಹೋದ ಸಂದರ್ಭದಲ್ಲಿ ವಿದ್ಯುತ್ ಇಲಾಖೆ ಸಿಬ್ಬಂದಿಗಳು ಸರಿಪಡಿಸಲು ಬಂದಾಗ ಮಾತ್ರ ಮೂಗು ಮುಚ್ಚಿಕೊಂಡು ಕೆಲಸ ಮಾಡುವ ಪರಿಸ್ಥಿತಿ ಎದುರಾಗಿದೆ. ಕೂಡಲೇ ಸಂಬಂಧಪಟ್ಟ ಗ್ರಾಪಂ ಅಧಿಕಾರಿಗಳು ಕಸ ವಿಲೇವಾರಿ ಮಾಡಬೇಕೆಂದು ಈ ಮೂಲಕ ಮನವಿ.

– ಲಕ್ಷ್ಮೀಪುರಂ ನಿವಾಸಿಗಳು, ಪಿರಿಯಾಪಟ್ಟಣ ತಾ.

ಮಾಯೆಯೊಳಗೆ ಯುವ ಜನಾಂಗ...

ಮಾನ್ಯರೆ,

ಹದಿನೈದು ದಿನದ ಹಿಂದೆ ತೀರ್ಥಹಳ್ಳಿಗೆ ಹೋಗ್ತಾ ಇದ್ದಾಗ ಆದ ಅನುಭವ.



ನಾನು ಬೆಳಿಗ್ಗೆ ಇಂಟರ್‌ಸಿಟಿ ರೈಲು ಗಾಡಿಗೆ ಶಿವಮೊಗ್ಗಕ್ಕೆ ಹೋಗಿ ಅಲ್ಲಿಂದ ತೀರ್ಥಹಳ್ಳಿಗೆ ಹೋಗೋ ಯೋಜನೆ ಇತ್ತು. ಮಧ್ಯೆ ಹಾಸನದಲ್ಲಿ ಸ್ನೇಹಿತ ಕೂಡ ಜೊತೆಗೆ ಬರುವವನಿದ್ದ. ಹಾಸನಕ್ಕೆ ತಲುಪಿದ ಕೂಡಲೇ ಸ್ನೇಹಿತ ಕೂಡ ಬಂದು ಜೊತೆಯಾದ. ಹಾಗೆ ಒಂದು ಯುವಕರ ತಂಡ ಕೂಡ ನಮ್ಮ ಎದುರಿಗೆ ಬಂದು ಕುಳಿತುಕೊಂಡಿತು. ಬಹಳ ಹುಮ್ಮಸ್ಸಿನಿಂದ ಖುಷಿ ಖುಷಿಯಾಗಿದ್ದ ಹುಡುಗರನ್ನು ಕೇಳಿದೆ ಯಾವ ಕಡೆಗೆ ಎಂದು. ಶಿವಮೊಗ್ಗ, ಅಲ್ಲಿಂದ ಜೋಗ ಜಲಪಾತ ಅಂದರು, ಸಂತೋಷ ಅಂತ ಹೇಳಿ ಸುಮ್ಮನಾದೆ.

ಸರಿ ಅಪರೂಪಕ್ಕೆ ಸಿಕ್ಕ ಸ್ನೇಹಿತನೊಂದಿಗೆ ಹರಟೆ ಶುರುವಾಯಿತು. ನಮ್ಮ ಶಾಲಾ ಕಾಲೇಜಿನ ದಿನದ ನೆನಪುಗಳ ಮೆಲುಕು. ರೈಲು ಮುಂದೆ ಹೋದ ಹಾಗೆ ನಮ್ಮ ಮಾತುಗಳು ಹಿಂದಿನ ಜೀವನದ ಕಡೆ ಹೋಗ್ತಾ ಇತ್ತು. ನಮ್ಮಿಬ್ಬರ ಮೊಬೈಲ್ ಮಾತ್ರ ನಿಶ್ಯಬ್ದವಾಗಿ ಜೇಬಿನಲ್ಲಿತ್ತು.

ಅಲ್ಲಿದ್ದ ಯುವಕ–ಯುವತಿಯರೂ ಸತತವಾಗಿ ಮೊಬೈಲ್ ನೋಡೋದರಲ್ಲೇ ಬ್ಯುಸಿ ಆಗಿದ್ರು, selfy ತೊಗೊಳೋದು, Reals ಮಾಡೋದು, ವಿಭಿನ್ನವಾದ ವೀಡಿಯೋ ತೊಗೊಳೋದು, ಆನಂತರ ಕೆಲವು ಸಮಯ ನೀರವ ಮೌನ. ಎಲ್ಲರೂ ಮೊಬೈಲ್ ಒಳಗೆ ಮುಳುಗಿದ್ದಾರೆ, ಕಾರಣ ತೆಗೆದ ಫೋಟೋ ಹಾಗೂ ವೀಡಿಯೋಗಳನ್ನು ಸಾಮಾಜಿಕ ತಾಣಗಳಲ್ಲಿ ಅಪ್ ಲೋಡ್ ಮಾಡುವ ಕಾತುರ.

ನಮ್ಮ ಕಾಲೇಜು ದಿನಗಳಲ್ಲಿ ನಾವು ಇದ್ದ ರೀತಿ ನಮ್ಮ ಮಾತುಗಳು, ಚರ್ಚೆಗಳು, ಒಡನಾಟಗಳು ಇವೆಲ್ಲ ಇವಾಗಿನ ಯುವ ಪೀಳಿಗೆಯಲ್ಲಿ ಕಾಣಲೇ ಇಲ್ಲ.

ಈ ಸಾಮಾಜಿಕ ತಾಣಗಳು ಎಲ್ಲರನ್ನೂ ಮರಳು ಮಾಡಿದೆ. ಅದರ ಮೇಲೆ ಅವಲಂಬಿತರಾಗಿದ್ದಾರೆ. ನಮ್ಮ ಇಂದಿನ ಯುವ ಜನಾಂಗದ ಶಕ್ತಿ, ಯೋಚಾನ ಲಹರಿಗಳು ಎಲ್ಲ ಅನಾವಶ್ಯಕವಾಗಿ ಸಾಮಾಜಿಕ ತಾಣಗಳಲ್ಲಿ ವ್ಯರ್ಥ ಆಗ್ತಾ ಇದೆ ಅನಿಸಿತು.

ಈ ಸಾಮಾಜಿಕ ತಾಣಗಳ ಬಳಕೆಯ ನಿಯಂತ್ರಣಕ್ಕೆ ದಾರಿಯೇ ಇಲ್ಲವಾ? ಸರ್ಕಾರದ ತನ್ನ ನಿಯಮಗಳ ಮೂಲಕ ನಿಯಂತ್ರಣ ತರಬಹುದಾ? Facebook, Whatsapp, Instagram, reels, YouTube vedeo create ಇತ್ಯಾದಿ.., ಇದರಿಂದ ನಮ್ಮ ಅಮೂಲ್ಯ ಸಮಯ ವ್ಯರ್ಥ ಆಗೋದು ತಪ್ಪುತ್ತಾ!

ಮನಸುಗಳು ಎದುರಾದಾಗ, ಮಾತಾಡೋ ಸಮಯ. ಮೊಬೈಲ್ ಸ್ಥಗಿತವಾದರೆ ಮನುಷ್ಯರ ನಡುವೆ ಆತ್ಮೀಯತೆ ಹೆಚ್ಚುವುದು ಖಂಡಿತ. ಮೊಬೈಲ್‌ನಿಂದ ದೂರವಾಗಿ, ಮುಕ್ತ ಮಾತುಕತೆಯ ಮೂಲಕ ಮನಸುಗಳೊಂದಿಗೆ Connect ಆಗಬೇಕಿದೆ.

– ದೀಪಕ್ ವಸಿಷ್ಠ, ಶಾರದಾದೇವಿನಗರ, ಮೈಸೂರು.

ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಮಾಜಿ ಸಂಸದ ಆರ್.ಧ್ರುವನಾರಾಯಣ ಹುಟ್ಟುಹಬ್ಬ

ಪೌರಕಾರ್ಮಿಕರಿಗೆ ವಸ್ತ್ರ ಇನ್ನಿತರೆ ಸಲಕರಣೆ ವಿತರಣೆ



ಮೈಸೂರು,ಜು.31(ಎಂಟಿವೈ)– ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ 61ನೇ ಹುಟ್ಟುಹಬ್ಬದ ಅಂಗವಾಗಿ ಕರ್ನಾಟಕ ರಾಜ್ಯ ಸಂವಿಧಾನ ರಕ್ಷಣಾ ಸಮಿತಿಯಿಂದ ಪೌರಕಾರ್ಮಿಕರಿಗೆ ವಸ್ತ್ರ ವಿತರಿಸಲಾಯಿತು. ಮೈಸೂರಿನ ಪುರಭವನದ ಆವರಣದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿ ಕರ್ನಾಟಕ ರಾಜ್ಯ ಸಂವಿಧಾನ ರಕ್ಷಣಾ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಹಿಳಾ ಪೌರಕಾರ್ಮಿಕರಿಗೆ ಬಟ್ಟೆ ವಿತರಿಸಿದರು.

ಬಳಿಕ ಡಾ.ಯತೀಂದ್ರ ಮಾತನಾಡಿ, ರಾಜ್ಯದಲ್ಲಿ ಪಕ್ಷ ಸಂಘಟನೆ ಹಾಗೂ ಹಳೆ ಮೈಸೂರು ಭಾಗದಲ್ಲಿ ಪಕ್ಷದ ಬಲವರ್ಧನೆಗೆ ಶ್ರಮಿಸುತ್ತಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಕಾಂಗ್ರೆಸ್ ಪಕ್ಷಕ್ಕೆ ಒಂದು ದೊಡ್ಡ ಆಸ್ತಿ ಇದ್ದಂತೆ. ಅವರ ಸರಳ ಬದುಕು ಹಾಗೂ ಸಂಸದರಾಗಿ ರಾಷ್ಟ್ರದಲ್ಲಿ ಅತೀ ಹೆಚ್ಚು ಮನ್ನಣೆ ಗಳಿಸಿದ್ದಾರೆ. ಸಚ್ಚಾರಿತ್ರ್ಯರೂ ಹಾಗೂ ಪ್ರಾಮಾಣಿಕ ರಾಜಕಾರಣಿ ಗಳಲ್ಲಿ ಒಬ್ಬರಾಗಿದ್ದಾರೆ. ಅವರಿಗಿರುವ ಬದ್ಧತೆ ಹಾಗೂ ಪಕ್ಷಕ್ಕಾಗಿ ದುಡಿಯುವ ಹಂಬಲ ಯುವಕರಿಗೆ ಆದರ್ಶ. ನಾನು ಶಾಸಕರಾದ ಸಂದರ್ಭದಲ್ಲಿ ಒಬ್ಬ ಸಂಸದರಾಗಿ ನನಗೆ ಹಲವಾರು ವಿಚಾರಗಳಲ್ಲಿ ಮಾರ್ಗದರ್ಶನ ನೀಡಿದ್ದಾರೆ. ಅವರ ಮಾರ್ಗದರ್ಶನ ಮರೆಯಲು ಸಾಧ್ಯವಿಲ್ಲ ಎಂದರು.

ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ನನ್ನ ಚುನಾವಣೆ ಸಂದರ್ಭದಲ್ಲಿ ಪಕ್ಷದ ಕಾರ್ಯಾಧ್ಯಕ್ಷರಾಗಿ ಅವರು ನನಗೆ ನೀಡಿದ ಮಾರ್ಗದರ್ಶನ ಹಾಗೂ ತೆಗೆದುಕೊಂಡ ಕೆಲವು ನಿರ್ಧಾರಗಳು ಮೆಚ್ಚುಗೆಯಾದವು. ಅವರ ಚಾಣಾಕ್ಷತನದಿಂದ ಅತೀ ಹೆಚ್ಚು ಮತ ಗಳಿಸಲು ಸಾಧ್ಯವಾಯಿತು. ನನ್ನ ಗೆಲುವಿಗೆ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಂತೆ ಆರ್.ಧ್ರುವನಾರಾಯಣ್ ಹಾಗೂ ಜಿಲ್ಲೆಯ ಎಲ್ಲಾ ನಾಯಕರೂ ಕಾರಣ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಶಾಸಕ ಡಾ. ಯತೀಂದ್ರರಿಂದ ಧ್ರುವರ ಗುಣಗಾನ

ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಸಂವಿಧಾನ ರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಅಶೋಕಪುರಂ ಭಾಸ್ಕರ್, ಟಿ.ನರಸೀಪುರ ಪುರಸಭಾ ಅಧ್ಯಕ್ಷ ಮದನ್, ಮಾಜಿ ಪುರಸಭಾ ಅಧ್ಯಕ್ಷ ಸೋಮು, ಕಾಂಗ್ರೆಸ್ ಮುಖಂಡರಾದ ಭಾಸ್ಕರ್ ಗೌಡ, ಶಿವಪ್ರಸಾದ್, ಮಂಜುನಾಥ್, ಬಸವಣ್ಣ, ಮಂಜುನಾಥ್, ಸಂತೋಷ್, ಹೇಮಂತ್, ರಮೇಶ್ ಮುದ್ದೇಗೌಡ, ವೆಂಕಟೇಶ್, ಪ್ರವೀಣ್ ತೇಜ, ಬಸವರಾಜ್, ರಾಹುಲ್, ಮನೋಜ್, ತಿಮ್ಮರಾಜು, ಗಿಣಿ ಸ್ವಾಮಿ, ಅಪ್ಪು, ವೆಂಕಟರಾಮು, ಕುಮಾರ ರಾಮು, ಪತ್ರಕರ್ತ ಕೆ.ದೀಪಕ್, ನೂರಾರು ಅಭಿಮಾನಿಗಳು ಈ ಸಂದರ್ಭದಲ್ಲಿ ಹಾಜರಿದ್ದರು. ಇದೇ ವೇಳೆ 50 ಮಂದಿ ಪೌರಕಾರ್ಮಿಕ ಮಹಿಳೆಯರಿಗೆ ಬಟ್ಟೆ ಇತರೆ ಸಲಕರಣೆ ವಿತರಿಸಲಾಯಿತು.

ಬಿಜೆಪಿ ಕಾರ್ಯಕರ್ತರು ಧೃತಿಗೆಡಬಾರದು

ಬಿಜೆಪಿ ಪ್ರಧಾನ ಕಾರ್ಯದರ್ಶಿ ಗಿರಿಧರ್ ಸಲಹೆ

ಮೈಸೂರು, ಜು.31(ಜಿಎ)– ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಅವರ ಬರ್ಬರ ಹತ್ಯೆಯಿಂದ ಹಿಂದೂ ಸಮಾಜ ಆತಂಕದಲ್ಲಿದೆ ಎಂದು ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಎಚ್ ಜಿ ಗಿರಿಧರ್ ಹೇಳಿದರು

ಸಮಾಜದಲ್ಲಿ ಅಶಾಂತಿ ಮೂಡಿಸಲು ಕೆಲವರು ಇಂತಹ ಹೇಯ ಕೃತ್ಯ ಎಸಗುತ್ತಿದ್ದು ಬಿಜೆಪಿ ಕಾರ್ಯಕರ್ತರು ಹಾಗೂ ಹಿಂದೂ ಯುವಕರು ಧೃತಿಗೆಡಬಾರದು. ಬಿಜೆಪಿ ಸರ್ಕಾರ ಕಾನೂನು ಸುವ್ಯವಸ್ಥೆ ಕಾಪಾಡಲಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಗೃಹಸಚಿವ ಅರಗ ಜ್ಞಾನೇಂದ್ರ ಅವರು ದುಷ್ಕೃತ್ಯ ಎಸಗಿದವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು. ಬಿಜೆಪಿ ಯುವಮೋರ್ಚಾ ಬಲಿಷ್ಠವಾಗಿದೆ. ಕಾರ್ಯಕರ್ತರನ್ನು ವಿಚಲಿತ ಗೊಳಿಸುವ ಹುನ್ನಾರದಿಂದ ಇಂತಹ ಕೃತ್ಯಗಳು ನಡೆಯುತ್ತಿದೆ. ಬಿಜೆಪಿ ಯುವ ಮೋರ್ಚಾ ಸೇರಿ ಬಿಜೆಪಿ ವಿವಿಧ ವಿಭಾಗದ ಪದಾಧಿಕಾರಿಗಳು ರಾಜೀನಾಮೆ ನಿರ್ಧಾರವನ್ನು ಕೈಬಿಡಬೇಕು. ಸರ್ಕಾರ ಪಾರದರ್ಶಕ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸುತ್ತಿದೆ. ಆದ್ದರಿಂದ ಕಾರ್ಯಕರ್ತರು ಇಂತಹ ಸಂದರ್ಭ ಒಟ್ಟಾಗಿ ನಿಲ್ಲಬೇಕು ಎಂದು ಪತ್ರಿಕಾ ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

ಥಿಯರಮ್ ಇಂಡಿಯಾದಿಂದ ಉದ್ಯೋಗ ನೇಮಕಾತಿ

ಮೈಸೂರು,ಜು.31–ಜಾಗತಿಕ ಡಿಜಿಟಲ್ ಮಾರ್ಕೆಟಿಂಗ್ ಏಜೆನ್ಸಿ ಯಾದ ಥಿಯರಮ್ ಇಂಡಿಯಾ ಮೈಸೂರಿನಲ್ಲಿ ನೇಮಕಾತಿ ನಡೆಸುತ್ತಿದೆ. ಕಂಪನಿಯು ಹೆಚ್ಚು ಫ್ರೆಶರ್‌ಗಳನ್ನು (ಹೊಸಬರನ್ನು) ನೇಮಿಸಿಕೊಳ್ಳಲು ಬಯಸುತ್ತಿದೆ – ಯಾವುದೇ ಪದವೀಧರರು ಮತ್ತು ಡಿಪ್ಲೊಮಾವನ್ನು (MCA & M.Tech ಹೊರತುಪಡಿಸಿ) ಕ್ಲೈಂಟ್ ಸರ್ವೀಸ್ ಎನಲಿಸ್ಟ್ ಪಾತ್ರಕ್ಕಾಗಿ ನೇಮಕಾತಿ ನಡೆಸಲಾಗುತ್ತಿದೆ. ಈ ಹುದ್ದೆಯಲ್ಲಿ ಸುಮಾರು 80 ಸ್ಥಾನಗಳಿವೆ. ಈ ಪೂರ್ಣ ಅವಧಿಯ ಉದ್ಯೋಗವು 5 ಎಕರೆಗಳಷ್ಟು ವ್ಯಾಪಿಸಿರುವ ಸ್ಟಾರ್ಟ್–ಆಫ್–ಆರ್ಟ್–ಫೆಸಿಲಿಟಿಯಲ್ಲಿ ಕೆಲಸ ಮಾಡಲು ಉತ್ತಮ ಅವಕಾಶವಾಗಿದೆ. ಆಸಕ್ತ ಅಭ್ಯರ್ಥಿಗಳು ಆ.3ರಂದು ಕ್ಯಾಂಪಸ್‌ಗೆ ಭೇಟಿ ನೀಡಬಹುದು. ನೋಂದಣಿ ಬೆಳಗ್ಗೆ 9ರಿಂದ 11ರವರೆಗೆ ನಡೆಯಲಿದೆ. ಹೂಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕ್ಯಾಂಪಸ್‌ನಲ್ಲಿ ಮುಂದಿನ ಅಕ್ಟೋಬರ್ ತನಕ ಮೂರು ತಿಂಗಳವರೆಗೆ ಪ್ರತಿ ಬುಧವಾರದಂದು ಫ್ರೆಶರ್‌ಗಳಿಗಾಗಿ ನೇಮಕಾತಿ ನಡೆಯಲಿದೆ. ಅಭ್ಯರ್ಥಿಗಳು ಪಾಳಿಯಲ್ಲಿ ಕೆಲಸ ಮಾಡಲು ಹೊಂದಿಕೊಳ್ಳುವವರಾಗಿರಬೇಕು ಎಂದು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ ಮೊ. 99865 92604 ಸಂಪರ್ಕಿಸಬಹುದು.

ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ನಿರ್ದೇಶಕರ ನೇಮಕ



ಬಿ.ನಾಗರಾಜು



ಎಸ್.ಶಿವಣ್ಣ

ಮೈಸೂರು, ಜು. 31– ದಿ ಮೈಸೂರು ಸಿಟಿ ಕೋ–ಆಪರೇಟಿವ್ ಹೌಸಿಂಗ್ ಸೊಸೈಟಿ ಆಡಳಿತ ಮಂಡಳಿಗೆ ವೃತ್ತಿಪರ ನಿರ್ದೇಶಕರನ್ನಾಗಿ ಬ್ಯಾಂಕ್‌ನ ಮಾಜಿ ಅಧ್ಯಕ್ಷ ಕೆ.ಜಿ.ಕೊಪ್ಪಲು ಬಿ.ನಾಗರಾಜು ಮತ್ತು ಗಿರಿದರ್ಶಿನಿ ಬಡಾವಣೆಯ ಎಸ್.ಶಿವಣ್ಣ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಬ್ಯಾಂಕಿನ ಕಾರ್ಯದರ್ಶಿ ಬಿ.ಎಸ್. ಶ್ರೀನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಹೆಚ್.ಡಿ ಪದವೀಧರರು

ಕೆ.ಜಗದೀಶ್



ಮೈಸೂರು, ಜು.31– ಮೈಸೂರು ವಿಶ್ವವಿದ್ಯಾನಿಲಯದ ಡಾ.ಎಂ. ರಾಮೇಗೌಡ ಅವರ ಮಾರ್ಗದರ್ಶನದಲ್ಲಿ ಕೆ.ಜಗದೀಶ್ ಅವರು ಭೌತಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಇಂಗ್ಲಿಷ್‌ನಲ್ಲಿ ಸಾದರಪಡಿಸಿದ ಮಹಾಪ್ರಬಂಧವನ್ನು ವಿವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ ಎಂದು ಪರೀಕ್ಷಾಂಗ ಕುಲಸಚಿವ ಪ್ರೊ. ಜ್ಞಾನಪ್ರಕಾಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಯೇಷಾ ತರನಂ



ಡಾ.ರೇಷ್ಮಾಬಾನು ಅವರ ಮಾರ್ಗದರ್ಶನದಲ್ಲಿ ಆಯೇಷಾ ತರನಂ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ 'ಆನ್ ಆಪ್ಟಿಮೈಸ್ಡ್ ಮೆಥೆಡ್ಸ್ ಫಾರ್ ಕಾಂಜೆಷನ್ ಕಂಟ್ರೋಲ್ ಇನ ವೈರ್‌ಲೆಸ್ ನೆಟ್‌ವರ್ಕ್' ಮಹಾಪ್ರಬಂಧವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

'ಉದಯವಾಣಿ' ಸಂಸ್ಥಾಪಕ ಟಿ.ಮೋಹನದಾಸ್ ಪೈ ಇನ್ನಿಲ್ಲ



ಮಣಿಪಾಲ: ಮಣಿಪಾಲದ ಪೈ ಕುಟುಂಬದ ಹಿರಿಯರಾದ 'ಉದಯವಾಣಿ' ಪತ್ರಿಕೆಯ ಸಂಸ್ಥಾಪಕ ತೋನ್ಸೆ ಮೋಹನದಾಸ್ ಪೈ(89) ಭಾನುವಾರ ಮಣಿಪಾಲದಲ್ಲಿ ನಿಧನ ಹೊಂದಿದರು.

ಮೃತರು ತಮ್ಮಂದಿರಾದ ಡಾ.ಟಿ.ರಾಮದಾಸ್ ಪೈ, ಟಿ. ನಾರಾಯಣ ಪೈ, ಟಿ.ಅಶೋಕ್ ಪೈ, ತಂಗಿಯರಾದ ವಸಂತಿ ಆರ್. ಶೆಣೈ, ಜಯಂತಿ ಪೈ, ಇಂದುಮತಿ ಪೈ, ಆಶಾ ಪೈ, ಸಹೋದರ ಟಿ.ಸತೀಶ್ ಯು. ಪೈ ಅವರನ್ನು ಅಗಲಿದ್ದಾರೆ.

ಕರ್ನಾಟಕ ಪತ್ರಿಕಾ ಅಕಾಡೆಮಿಯು ಪತ್ರಿಕಾರಂಗದ ಕ್ಷೇತ್ರಕ್ಕಾಗಿ ಸಲ್ಲಿಸಿದ ಕೊಡುಗೆಗಾಗಿ ಪ್ರಶಸ್ತಿಯನ್ನು ಮೋಹನ ದಾಸ್ ಪೈ ಸ್ವೀಕರಿಸಿದ್ದರು. ಪೈಯವರು ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿಯ (ಐಎನ್‌ಎಸ್) ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿ 2 ಅವಧಿ ಸೇವೆ ಸಲ್ಲಿಸಿದ್ದರು. ಪಿಟಿಐನ ಜಂಟಿ ಆಡಳಿತ ನಿರ್ದೇಶಕರಾಗಿ 1989ರಲ್ಲಿ ನೇಮಕಗೊಂಡ ಪೈ 1995ರಲ್ಲಿ ಆಡಳಿತ ನಿರ್ದೇಶಕರಾದರು. ಬಳಿಕ ಛೇರ್ಮನ್ ಮತ್ತು ಆಜೀವ ನಿರ್ದೇಶಕರಾಗಿ ಸೇವೆ ಸಲ್ಲಿಸಿದರು.

ಗಣ್ಯರ ಸಂತಾಪ: ಪೇಜಾವರ ಮಠದ ಶ್ರೀವಿಶ್ವಪ್ರಸನ್ನತೀರ್ಥ ಶ್ರೀಪಾದರು, ಪುತ್ತಿಗೆ ಮಠದ ಶ್ರೀಸುಗುಣೇಂದ್ರತೀರ್ಥ ಶ್ರೀಪಾದರು, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಚಿವರಾದ ವಿ.ಸುನಿಲ್‌ಕುಮಾರ್, ಕೋಟ ಶ್ರೀನಿವಾಸ ಪೂಜಾರಿ, ಎಸ್. ಅಂಗಾರ, ಶಾಸಕ ಕೆ.ರಘುಪತಿ ಭಟ್, ಲಾಲಾಜಿ ಮೆಂಡನ್, ಕರಾವಳಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಟಾರ್ ರತ್ನಾಕರ ಹೆಗ್ಡೆ, ಮಾಜಿ ಸಚಿವರಾದ ಪ್ರಮೋದ್ ಮಧ್ವರಾಜ್, ವಿನಯ ಕುಮಾರ ಸೊರಕೆ, ಮಾಜಿ ಶಾಸಕ ಯು.ಆರ್.ಸಭಾಪತಿ ಸಂತಾಪ ಸೂಚಿಸಿದ್ದಾರೆ.

ಆ.1ರ ಬೆಳಿಗ್ಗೆ 9ರಿಂದ 11 ಗಂಟೆವರೆಗೆ ಉಡುಪಿ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಸಾರ್ವಜನಿಕ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

ರಾಜ್ಯದ ಆಸ್ಪತ್ರೆಗಳಲ್ಲಿ ದೂರು ಪುಸ್ತಕ



ಕೋಲಾರ: ರಾಜ್ಯದ ಎಲ್ಲ ಆಸ್ಪತ್ರೆಗಳಲ್ಲಿಯೂ ದೂರು ಪುಸ್ತಕ ಇಟ್ಟು, ರೋಗಿಗಳಿಂದ ಅಭಿಪ್ರಾಯ ಮತ್ತು ಸಲಹೆ ಸೂಚನೆಗಳನ್ನು ಪಡೆಯುವ ಕ್ರಮ ಜಾರಿಗೆ ತರುವುದಾಗಿ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ನಗರದ ಎಸ್‌ಎನ್‌ಆರ್ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ರೋಗಿಗಳನ್ನು ಭೇಟಿಯಾಗಿ ಚಿಕಿತ್ಸೆಯ ಬಗ್ಗೆ ಮಾಹಿತಿ ಪಡೆದ ನಂತರ ಈ ವಿಷಯ ತಿಳಿಸಿದರು. ಸರ್ಕಾರಿ ಆಸ್ಪತ್ರೆಗಳಿಗೆ ಬಡವರೇ ಬರುತ್ತಾರೆ. ಇವರ ಬಗ್ಗೆ ಅನುಕಂಪ ಇರಬೇಕು. ಆರೋಗ್ಯ ಮೂಲಭೂತ ಹಕ್ಕು ಎಂದು ಪರಿಗಣಿಸಲಾಗಿದೆ. ಹಾಗಾಗಿ ಆಸ್ಪತ್ರೆಗೆ ಬರುವ ಎಲ್ಲರಿಗೂ ಉಚಿತ ಮತ್ತು ಅಗತ್ಯ ಚಿಕಿತ್ಸೆ ನೀಡಲು ವೈದ್ಯರು ಪ್ರಾಮಾಣಿಕತೆಯಿಂದ ಕೆಲಸ ನಿರ್ವಹಿಸಬೇಕು ಎಂದರು.

ಮಂಗಳೂರು ಸರಣಿ ಹತ್ಯೆಗಳ ವಿಚಾರ, ನನಗೆ ಬಹಳ ನೋವಾಗಿದೆ, ಕೋಪವೂ ಇದೆ. ಯಾವುದೇ ಒಂದು ಸಮಾಜದಲ್ಲಿ ಕೋಮುವಾದ, ಧರ್ಮದ ಹೆಸರಲ್ಲಿ ಕೊಲೆಗಳು, ನಾಗರಿಕತೆ, ಪ್ರಜಾಪ್ರಭುತ್ವಕ್ಕೆ ವಿರುದ್ಧ ಎಂದರು. ಈ ವಿಚಾರವಾಗಿ ಸಿಎಂ ದಿಟ್ಟ ನಿರ್ಧಾರ ಕೈಗೊಂಡಿದ್ದಾರೆ. ಹತ್ಯೆಯ ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ. ಇದರಲ್ಲಿ ಯಾವುದನ್ನೂ ಮುಚ್ಚಿಡುವ ಅಗತ್ಯವಿಲ್ಲ. ಕೋಮುಗಳು, ಧರ್ಮದ ಹೆಸರಿನಲ್ಲಿ ಪ್ರಚೋದನೆ ಮಾಡಿ ಕೊಲೆ ಮಾಡುವುದನ್ನು ತಡೆಯುವ ಬಗ್ಗೆ ಚರ್ಚಿಸಲಾಗುತ್ತಿದೆ ಎಂದರು.

ಉಚಿತ ಕಣ್ಣಿನ ತಪಾಸಣಾ ಶಿಬಿರ



ಮೈಸೂರು, ಜು.31(ಎಸ್‌ಪಿಎನ್)– ಮೈಸೂರಿನ ಶೇಷಾದ್ರಿಪುರಂ ಸಂಜೆ ಪಿಯು ಕಾಲೇಜಿನಲ್ಲಿ ಉಚಿತ ಕಣ್ಣಿನ ತಪಾಸಣೆ ಮತ್ತು ನೇತ್ರದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಮೈಸೂರು ನಾರಾಯಣ ನೇತ್ರಾಲಯ, ಬೆಂಗಳೂರು ಸೆಂಟೇನಿಯಲ್ ಸರ್ವೀಸ್, ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು ಎನ್‌ಎಸ್‌ಎಸ್ ಘಟಕ ಹಾಗೂ ಲಯನ್ಸ್ ಕ್ಲಬ್ ಸಹಯೋಗದೊಂದಿಗೆ ವಿದ್ಯಾರ್ಥಿಗಳು, ಬೋಧಕ, ಬೋಧಕೇತರ ವರ್ಗ ಹಾಗೂ ಪೋಷಕರಿಗಾಗಿ ಹಮ್ಮಿಕೊಂಡಿದ್ದ ಉಚಿತ ನೇತ್ರದಾನ ಮತ್ತು ತಪಾಸಣಾ ಶಿಬಿರವನ್ನು ದಕ್ಷಿಣ ಭಾರತ ಈಬಿಎಎಲ್‌ನ ಅಧ್ಯಕ್ಷ ಡಾ.ಎಂ.ಕೆ.ಕೃಷ್ಣ ಉದ್ಘಾಟಿಸಿದರು.

ಈ ವೇಳೆ ನಾಡೋಜ ಡಾ.ವೂಡೇ ಪಿ.ಕೃಷ್ಣ, ಎಲ್‌ಸಿಬಿಸಿಎಸ್ ಅಧ್ಯಕ್ಷ ವಿ.ಮಣಿ, ಡಾ.ರಾಜ್‌ಕುಮಾರ್ ನೇತ್ರ ಬ್ಯಾಂಕ್‌ನ ವೀರೇಶ್, ಶೇಷಾದ್ರಿಪುರಂ ಸಂಜೆ ಕಾಲೇಜಿನ ಪ್ರಾಂಶುಪಾಲ ಪ್ರೊಎನ್.ಎಸ್.ಸತೀಶ್, ಸಂಚಾಲಕ ಆರ್.ನಾಗಸುಧಾ, ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಎಲ್.ಎಸ್.ಸಾಗರ್, ಯೂತ್ ರೆಡ್‌ಕ್ರಾಸ್ ಟಿ.ಮೋಹನ್ ಉಪಸ್ಥಿತರಿದ್ದರು.

ಹಂದಿಗೆ ಬೈಕ್ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಹೋಗಿ ಬಿದ್ದು ವೃದ್ಧೆ ಸಾವು

ರಾಮಾಪುರ, ಜು. 31– ರಸ್ತೆಗೆ ಅಡ್ಡಲಾಗಿ ನುಗ್ಗಿದ ಹಂದಿ ಹಿಂಡಿನ ಮೇಲೆ ಬೈಕ್ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಪ್ರಯತ್ನಿಸಿದಾಗ ನಿಯಂತ್ರಣ ತಪ್ಪಿ ಬಿದ್ದು, ವೃದ್ಧೆ ಸಾವನ್ನಪ್ಪಿ, ಮತ್ತಿಬ್ಬರು ಗಾಯಗೊಂಡಿರುವ ಘಟನೆ ರಾಮಾಪುರ ಠಾಣಾ ವ್ಯಾಪ್ತಿಯ ಚೆನ್ನೂರು ಗ್ರಾಮದ ಬಳಿ ಸಂಭವಿಸಿದೆ.

ಹನೂರು ತಾಲೂಕು ಕೊರಟ್ಟಿ ಹೊಸೂರು ಗ್ರಾಮದ ಸಿದ್ದಮ್ಮ(60) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಈಕೆಯ ಪತಿ ಗುರುಬಸವ ಶೆಟ್ಟಿ(65) ಮತ್ತು ಮೊಮ್ಮಗ ಬಸವರಾಜು(23) ಗಾಯಗೊಂಡಿದ್ದಾರೆ. ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದ ಬಸವರಾಜು ಭೀಮನ ಅಮಾವಾಸ್ಯೆ ಪ್ರಯುಕ್ತ ಗ್ರಾಮಕ್ಕೆ ಬಂದಿದ್ದು, ಪೆದ್ದನ ಪಾಳ್ಯದ ದೇವಸ್ಥಾನದಲ್ಲಿ ಪೂಜೆ ಮಾಡಿಸಿಕೊಂಡು ಬರಲು ತಾತ ಮತ್ತು ಅಜ್ಜಿಯೊಂದಿಗೆ ಬೈಕ್‌ನಲ್ಲಿ (ಕೆಎ 05–ಜೆಜಿ 3466) ತೆರಳಿ ಹಿಂತಿರುಗುತ್ತಿದ್ದಾಗ, ರಾತ್ರಿ 8.30ರ ಸುಮಾರಿನಲ್ಲಿ ಹಠಾತ್ತನೇ ರಸ್ತೆಗೆ ಅಡ್ಡಲಾಗಿ ಹಂದಿಗಳ ಹಿಂಡು ನುಗ್ಗಿದೆ. ಅದಕ್ಕೆ ಡಿಕ್ಕಿ ಹೊಡೆಯುವುದನ್ನು ತಪ್ಪಿಸಲು ಬ್ರೇಕ್ ಹಾಕಿದಾಗ ನಿಯಂತ್ರಣ ತಪ್ಪಿ ಬೈಕ್ ಬಿದ್ದಿದೆ. ತೀವ್ರವಾಗಿ ಗಾಯಗೊಂಡ ಮೂವರನ್ನೂ ಕೌದಳ್ಳಿ ಸರ್ಕಾರಿ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದು, ಪ್ರಥಮ ಚಿಕಿತ್ಸೆ ನೀಡಿದ ಬಳಿಕ ಸಿದ್ದಮ್ಮ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಹನೂರು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗಮಧ್ಯೆ ಅವರು ಮೃತಪಟ್ಟಿದ್ದಾರೆ. ಈ ಸಂಬಂಧ ರಾಮಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಹಕರಿಗೆ ವಂಚನೆ: ದೂರು ದಾಖಲು

ಹೆಚ್.ಡಿ.ಕೋಟೆ,ಜು.31–ಖಾಸಗಿ ಹಣಕಾಸು ಸಂಸ್ಥೆ ಸಾರ್ವಜನಿಕ ಸಂಪರ್ಕಾಧಿಕಾರಿ ಗ್ರಾಹಕರಿಂದ ಸಂಗ್ರಹಿಸಿದ್ದ ಹಣವನ್ನು ಸಂಸ್ಥೆಗೆ ಜಮೆ ಮಾಡದೆ 2.17 ಲಕ್ಷ ರೂ. ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಹೆಚ್.ಡಿ.ಕೋಟೆಯ ಉಜ್ಜೀವನ್ ಸ್ಮಾಲ್ ಫೈನಾನ್ಸ್‌ನ ಅಸಿಸ್ಟೆಂಟ್ ಮ್ಯಾನೇಜರ್ ಹೇಮಲತಾ ಈ ಸಂಬಂಧ ದೂರು ಸಲ್ಲಿಸಿದ್ದು, ಫೈನಾನ್ಸ್‌ನ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿದ್ದ ನಾಗನಾಯ್ಕ (34) ಆರೋಪಕ್ಕೆ ಗುರಿಯಾಗಿರುವವರು. ಫೈನಾನ್ಸ್ ವತಿಯಿಂದ ಗ್ರಾಹಕರಿಗೆ ಗುಂಪು ಸಾಲ ಕೊಡಿಸುವುದು ಹಾಗೂ ಅದನ್ನು ವಸೂಲಿ ಮಾಡಿ ಫೈನಾನ್ಸ್‌ಗೆ ಪಾವತಿ ಮಾಡುವ ಕೆಲಸ ಮಾಡುತ್ತಿದ್ದ ನಾಗನಾಯ್ಕ 2020ರ ಮಾರ್ಚ್ 4ರಿಂದ 2022ರ ಏ.16ರವರೆಗೆ ಐವರು ಗ್ರಾಹಕರು ಮರುಪಾವತಿ ಮಾಡಿದ್ದ 21,475 ರೂ. ಫೈನಾನ್ಸ್‌ಗೆ ಪಾವತಿಸದೆ ದುರ್ಬಳಕೆ ಮಾಡಿಕೊಂಡ ಬಗ್ಗೆ 2022ರ ಏ.8ರಂದು ಹೆಚ್.ಡಿ.ಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ನಂತರ ಫೈನಾನ್ಸ್‌ನ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ನಡೆಸಿದಾಗ ನಾಗನಾಯ್ಕ 66 ಗ್ರಾಹಕರಿಂದ ವಸೂಲಿ ಮಾಡಿದ್ದ 3,07,495 ರೂ. ಫೈನಾನ್ಸ್‌ಗೆ ಪಾವತಿ ಮಾಡದೆ ಇದ್ದದ್ದು ಕಂಡು ಬಂದಿದೆ. ಈ ಸಂಬಂಧ ಅವರನ್ನು ಕರೆದು ವಿಚಾರಿಸಿದಾಗ ತಪ್ಪು ಒಪ್ಪಿಕೊಂಡು, ಒಪ್ಪಿಗೆ ಪತ್ರ ಬರೆದುಕೊಟ್ಟ ಆತ 90 ಸಾವಿರ ರೂ.ಗಳನ್ನು ಪಾವತಿಸಿದ್ದು, ಉಳಿದ 2,17,495 ರೂ. ಪಾವತಿಸದೆ ಮೋಸ ಮಾಡಿದ್ದಾನೆ ಎಂದು ದೂರಿನಲ್ಲಿ ತಿಳಿಸಲಾಗಿದೆ. ಈ ಸಂಬಂಧ ಹೆಚ್.ಡಿ.ಕೋಟೆ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸುವರ್ಣಾವಕಾಶ
ನಿವೃತ್ತಿ, ಸ್ವಯಂ ನಿವೃತ್ತಿ, ಗೃಹಿಣಿಯರಿಗೆ, ಸ್ವಯಂ ಉದ್ಯಮದಾರರಿಗೆ ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part Time - Full Time ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. Fixed Salary / PF - ESI, Age:- above 30 years.
9008799156 / 8861611395

PART TIME WORK
ಬಿಡುವಿನ ವೇಳೆಯಲ್ಲಿ ನೀವು ಕುಳಿತ ಸ್ಥಳದಲ್ಲಿಯೇ
ಕೆಲಸ / JOB
ವಾರದ ಸಂಬಳ 3000/– ರಿಂದ 5000/– ಮೇಲ್ಪಟ್ಟು
ಕೊರಿಯರ್ ಸೌಲಭ್ಯವಿದೆ.
9108418233
9743217566

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

BASEMENT FOR RENT
Lenskart Building, Vijaya Bank Circle, Mysore. Area : 1800 Sq. Ft.
9620191884
8217393507

SITE FOR SALE
30x40
S/E Corner Site MUDA approved @ Sunpure Garden Layout, Hanchaya Village, Kasaba Hobli, Mysore Geniune Buyers only. (Brokers Excuses)
9945180836

ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಅನಿಮಲ್ ಫೀಡ್ ಕಂಪನಿಗೆ ಪ್ಯಾಕಿಂಗ್, ಲೋಡಿಂಗ್ ಕೆಲಸಕ್ಕೆ 18 ರಿಂದ 50 ವರ್ಷದ ಒಳಗಿನ ಪುರುಷರು ಬೇಕಾಗಿದ್ದಾರೆ. ವಿದ್ಯಾರ್ಹತೆ ಅವಶ್ಯಕತೆ ಇಲ್ಲ. ಸಂಬಳ: 12,382/–, ಇ.ಎಸ್.ಐ+ಪಿ.ಎಫ್+ಬೋನಸ್ ಇರುತ್ತದೆ. ಸಂಪರ್ಕಿಸಿ: ಚಾಮುಂಡೇಶ್ವರಿ ಎಂಟರ್ ಪ್ರೈಸಸ್ ಸಂದರ್ಶನ : CIEPT ಕಾಲೇಜು ಹತ್ತಿರ ಬೆಳಿಗ್ಗೆ : 10 ಗಂಟೆಯಿಂದ 11.30 ರವರೆಗೆ
ಲೋಕೇಶ್: 8722844236

ಬೋಳು ತಲೆಯ ಸಮಸ್ಯೆಯೇ?

ಕಿಮೋತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, Kuvempunagar, Mysuru
MYSURU 9611028523 MANGALORE 9343142258

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಬೇಕಾಗಿದ್ದಾರೆ
Office Assistant (Female) ಆಫೀಸ್ ಸಹಾಯಕಿ
ಹಿಂದಿ, ತೆಲುಗು ಭಾಷೆ ಗೊತ್ತಿರುವವರಿಗೆ ಮೊದಲ ಆದ್ಯತೆ
Office Boy (Male)
DRIVER (Male)
ಧನ್ವಂತರಿಲೋಕಸಿರಿ ಬಯೋಟೆಕ್ ಪ್ರೈ.ಲಿ. ಮೈಸೂರು
8197868106, 9448415584

ಸೈಟು ಮಾರಾಟಕ್ಕಿದೆ
Muda ಖಾತೆ ಆಗಿದೆ
30X40
ಈಸ್ಟ್ ಫೇಸಿಂಗ್ ಬೆಲೆ 66 ಲಕ್ಷ
ಕೂಡಲೇ ರಿಜಿಸ್ಟ್ರೇಷನ್ & ಬ್ಯಾಂಕ್ ಲೋನ್ ಸೌಲಭ್ಯ ಇದೆ
ಹರ್ಷಬಾರ್ ಸಮೀಪ, ಬೋಗಾದಿ ಮುಖ್ಯ ರಸ್ತ
Call: 98800 65122 / 77956 09173

Dr.D.H.BAGALKOT SEXOLOGIST (Since 1983)
ಲೈಂಗಿಕ ನಿಶ್ಯಕಿ ಹಾಗೂ ನಶಾಮುಕ್ತಿ
ಶಿಘ್ರಸ್ಖಲನ, ಸ್ವಪ್ನದೋಷ, ಹಸ್ತಮೈಥುನ, ನರಗಳ ದೌರ್ಬಲ್ಯ, ಸಂತಾನದೋಷ, ವೀರ್ಯ ತಿಳಿಯಾಗಿ ಹೋಗುವುದು, ಲಿಂಗ ಚಿಕ್ಕದಾಗಿರುವುದು, ಮಧುಮೇಹದಿಂದ ಬರುವ ಲೈಂಗಿಕ ನಿಶ್ಯಕ್ತಿಗೆ ಹಾಗೂ ಮದ್ಯ ಕುಡಿಯುವ ವ್ಯಕ್ತಿಗೆ ಕುಡಿತದ ಚಟ ಬಿಡಿಸಲು ಯಾವುದೇ ಅಡ್ಡ ಪರಿಣಾಮ ಇಲ್ಲದೆ ಸರಳವಾದ ಪರಿಹಾರ
*ಮೈಸೂರು : ಪ್ರತಿ ತಿಂಗಳು 1,2 ಹಾಗೂ 16, 17 ರಂದು ಹೋಟೆಲ್ ಆಶ್ರಯಾ. ಧನವಂತ್ರಿ ರೋಡ್
Cell:9743193428
www.drbagalkot.com

Sudarshan Saur
SOLAR WATER HEATER
ATTRACTIVE OFFER
ಸೇಲ್ಸ್&ಸರ್ವೀಸ್
10 ವರ್ಷಗಳ ಗ್ಯಾರಂಟಿ
Bajaj Finserv Available
SUNZONE SOLAR SYSTEM
Vishwamanava Double Road, Kuvempunagar, Mysuru
9845175443

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಮನೆ ಬಾಡಿಗೆಗಿದೆ
ಮೈಸೂರು ಕುವೆಂಪುನಗರದ 'ಎಮ್' ಬ್ಲಾಕ್ ನಲ್ಲಿರುವ 20x30 ರ ನಿವೇಶನದಲ್ಲಿರುವ 2 ಬೆಡ್ ರೂಂ, AEH ಸೋಲಾರ್ ಸೌಲಭ್ಯ ಇರುವ ಉತ್ತರ ದಿಕ್ಕಿಗೆ ಬಾಗಿಲಿರುವ 2ನೇ ಮಹಡಿ (2nd Floor) ಮನೆ ಹಾಗೂ ಗ್ರೌಂಡ್ ಫ್ಲೋರ್ ಮನೆಗಳು ಬಾಡಿಗೆಗೆ ಇರುತ್ತದೆ. ಸಂಪರ್ಕಿಸಿ
9449703452

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

AFFIDAVIT
I, T.S. Gopalakrishnan, residing at #Type 2, No. 15, DFRL Residential Colony, Siddarthanagar, Mysuru City states that my name was mentioned in Ministry of Defence ID Card as T.S. Gopalakrishnan. But in SSLC certificate my name was mentioned as Gopalakrishnan, in Airforce ID card it was mentioned as SGT Thannikel Sivan Gopalakrishnan and in Aadhar card it was mentioned as Gopalakrishnan T.S. All the above names are one and the same which belongs to me only.
Sd/- T.S. Gopalakrishnan

GOLD FINANCE
ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5200
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಂಡು ಉಳಿದ ಹಣ ತಕ್ಷಣಕೊಡುತ್ತೇವೆ. ಕೂಡಲೇ ಸಂಪರ್ಕಿಸಿ – (T&C)
9964522225

ಮನೆ ಬಾಡಿಗೆಗೆ ಇದೆ
2 ರೂಮ್, ಅಟ್ಯಾಚ್ ಬಾತ್, ಹಾಲ್, ದೇವರಮನೆ, ಅಡುಗೆ ಮನೆ, ಸೋಲಾರ್ ವಾಟರ್, ಸೌಲಭ್ಯ ಇರುವ ವಾಸ್ತು ಮನೆ ಬಾಡಿಗೆಗೆ ಇದೆ. (ಸಸ್ಯಹಾರಿಗಳಿಗೆ ಮಾತ್ರ)# ಎನ್.ಆರ್.ಮೊಹಲ್ಲಾ, ಶಿವಾಜಿ ರಸ್ತೆ, 2ನೇ ಕ್ರಾಸ್, ಎಸ್.ಬಿ.ಐ ಬ್ಯಾಂಕ್ ಹತ್ತಿರ. ಸಂಪರ್ಕಿಸಿ:
9341982565
8105577324

WANTED COMMERCIAL PROPERTY
(Building/Vacant Site) Areas preferred (Mysore, Srirangapatna, Mandya, K.R.Pete, Chamarajanagar)
9035405980

ಮೈಸೂರು ಮ್ಯಾರೇಜ್ ಲಿಂಕ್ಸ್
ವಧು–ವರರನ್ನು ಹುಡುಕಲು ಸಹಾಯಬೇಕೆ? ನಮಗೆ ಕರೆಮಾಡಿ
ಡಾ.ಗೂರೂಜಿ ಮೈಸೂರು
6361740552
ಲೇಡಿ ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೊರೆ ನಾಲ್ವರ ದೈವ ಚೌಡನ್ ಕರೆ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಮ್ಯಾನ್ ಪವರ್ ಸರ್ವೀಸಸ್ (ರಿ)
(8 hr/24 hr) ಫಿಜಿಯೋಥೆರಫಿ ಕೇರ್
Patient ಮತ್ತು ವಯಸ್ಸಾದವರನ್ನು ನೋಡಿಕೊಳ್ಳಲು ಹಾಗೂ ಅಡುಗೆ, ಮನೆ ಕೆಲಸ ಮಾಡಲು ಮಹಿಳೆಯರು ಸಿಗುತ್ತಾರೆ. ಸಂಪರ್ಕಿಸಿ:
8105149095

ಕ್ಯಾಟರಿಂಗ್ ಸರ್ವೀಸಸ್ (ರಿ)
ನಮ್ಮಲ್ಲಿ ಎಲ್ಲಾ ತರಹದ ಕಾರ್ಯಕ್ರಮಗಳಿಗೂ ಸಸ್ಯಹಾರಿ ಹಾಗೂ ಮಾಂಸಹಾರಿ ಅಡುಗೆಗಳನ್ನು ತಯಾರಿ ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:
9742896244
7019453827

ಬೇಕಾಗಿದ್ದಾರೆ
ಕಂಪ್ಯೂಟರ್ ಜ್ಞಾನ ಉಳ್ಳವರು ಮತ್ತು ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ.
ಚೇತನ ಬುಕ್ ಹೌಸ್, ನಾರಾಯಣ ಶಾಸ್ತ್ರಿ ರಸ್ತೆ, ಮೈಸೂರು

ಈ ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಹೆಬ್ಬಾಳು ಕೈಗಾರಿಕ ಕಂಪನಿಯಲ್ಲಿ ಕೆಲಸ ಮಾಡಲು, ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ESI/PF ವಾರದ ರಜೆ, ಬೋನಸ್ ಇರುತ್ತದೆ. ಸಂಪರ್ಕಿಸಿ
7795285485
8105249880

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್ ಮೈಸೂರು
ಮೊ: 8050345574

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
ಟೆಲಿಕಾಲಿಂಗ್ ಮಾಡಲು ಹುಡುಗಿಯರು ಸಂಬಳ : 8000 – 10000 ರವರೆಗೆ, ಸ್ಥಳ: ಎನ್.ಆರ್.ಮೊಹಲ್ಲಾ, ಚಾಮುಂಡಿಪುರಂ GTR Hotel ಹತ್ತಿರ, Field work ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 15,000 (Life Insurance) ಕಂಪ್ಯೂಟರ್ ಜ್ಞಾನವುಳ್ಳ (ಕನ್ನಡ, ಇಂಗ್ಲೀಷ್, ಹಿಂದಿ)
8050912616

SCRAP DEALERS
Bharath Traders, Mysore Karnataka
We Buy All kinds of Scrap, Industrial Scrap, Metal, Brass, Vessels, Electronics. Used Furnitures, Old UPS, Batteries and old Generators. (Any condition) Door Step Pick Up all over Karnataka
9845431582

ಸೈಟು ಮಾರಾಟಕ್ಕಿದೆ
K.R. ನಗರ ಲಾಲನಹಳ್ಳಿ ಮುಖ್ಯ ರಸ್ತೆಯಲ್ಲಿ 35x40 ಪೂರ್ವ ದಿಕ್ಕಿನ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ.
9901189791

ಇಂದೇ ಬೇಕಾಗಿದ್ದಾರೆ
ಮೈಸೂರು ಮತ್ತು ಸುತ್ತಮುತ್ತಲಿನ ಕೈಗಾರಿಕ ಪ್ರದೇಶಗಳಲ್ಲಿರುವ ಕಂಪನಿಗಳಿಗೆ Packing, Helper, Checking, Store incharge, Line incharge, Maintenance ಮುಂತಾದ ಕೆಲಸಗಳಿಗೆ 356 ಯುವಕ / ಯುವತಿಯರು ಬೇಕಾಗಿದ್ದಾರೆ. ಸಂಬಳ: 14,500, 40,000/– (ESI+PF+OT) ಸೇರಿ.
7892878915
9353753194

NEW HOUSE FOR SALE
Near Vidya Vikas College, Vasantha Nagar, Mysore. 20x30, 3BHK fully Furnished House. Price: 69 Lakhs.
8867576767

ಬೇಕಾಗಿದ್ದಾರೆ
1. ಸೆಕ್ಯೂರಿಟಿ ಗಾರ್ಡ್ – 2 ಹುದ್ದೆ
2. ಹೌಸ್ ಕೀಪಿಂಗ್ ಹುಡುಗರು–2 ಹುದ್ದೆ
ದಿ ಕೋರಮ್ ಹೋಟೆಲ್
ನಂ.2257/1, ವಿನೋಭಾ ರಸ್ತೆ, ಕಲಾಮಂದಿರ ಹತ್ತಿರ, ಮೈಸೂರು.
9663202843 / 9620274630

ಬೇಕಾಗಿದ್ದಾರೆ
ಆಫೀಸ್ ಕೆಲಸಕ್ಕೆ ಅನುಭವಸ್ಥ ಮಹಿಳಾ ಬಿ.ಕಾಂ ಪದವೀಧರ ಅಭ್ಯರ್ಥಿ ಬೇಕಾಗಿದ್ದಾರೆ.ಕಂಪ್ಯೂಟರ್ ಮತ್ತು Tally ಬಗ್ಗೆ ತಿಳುವಳಿಕೆ ಇರಬೇಕು. ನಿಮ್ಮ ಸ್ವ–ವಿವರವನ್ನು ಈ ಕೆಳಗಿನ ಇ–ಮೇಲ್‌ಗೆ ಬರೆದುಕಳುಹಿಸಿ.
globalagribiotech2014@gmail.com

AFFIDAVIT
I, Haseeb ur Rahman residing at No.62, 2A, 10th Cross, Rajendranagar, Kesare, Mysore - 570007, I swear that in some of the documents my name is mentioned as Hasseb ur Rahman Hence I Affirm on oath that in Future, in all my records, dealings & Transactions I will be known, Called and Identified as Haseeb ur Rahman Vide affidavit sworn before Notary Asadullakhan on 27/7/2022.
Sd/- Hasees ur Rahman

ಮನೆ ಆಲ್ಟ್ರೇಷನ್ ಮಾಡಿಕೊಡಲಾಗುತ್ತದೆ
ಗಾರೆಕೆಲಸ, ನಲ್ಲಿ ಕೆಲಸ, ಸ್ಯಾನಿಟರಿ ಕೆಲಸ, ಹೊಸ ಮನೆ ಕೆಲಸ ಮಾಡಿ ಕೊಡಲಾಗುತ್ತದೆ. ಸಿದ್ದರಾಜು:
8971160587
8310338551

ಬೇಕಾಗಿದ್ದಾರೆ
ಫುಡ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು 18 ರಿಂದ 45. ಸಂಬಳ 14,500 ESI, PF ಒಳಗೊಂಡು Week off ಹಾಗೂ 3 Shift ಗಳು ಇರುತ್ತದೆ. ಹೆಚ್ಚಿನ ಮಾಹಿತಿಯನ್ನು ಸ್ಥಳಕ್ಕೆ ಬಂದು ಪಡೆದುಕೊಳ್ಳತಕ್ಕದ್ದು. ವಿಳಾಸ: CIPET ಕಾಲೇಜ್ ಹತ್ತಿರ ರಿಂಗ್ ರೋಡ್, ಮೇಟಗಳ್ಳಿ, ಮೈಸೂರು.
9986874584

ಬೇಕಾಗಿದ್ದಾರೆ
ಬೆಂಗಳೂರಿನಲ್ಲಿರುವ ಲೇಡಿಸ್ PG ಹಾಸ್ಟಲ್‌ಗೆ ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ.
1) ವಾರ್ಡನ್ 2) ಅಡುಗೆಯವರು 3) ರೂಮ್ ಕ್ಲೀನಿಂಗ್ ಕೆಲಸಕ್ಕೆ ಸಂಬಳ ಊಟ ಮತ್ತು ವಸತಿ ನೀಡಲಾಗುವುದು
9141311111

ಬೇಕಾಗಿದ್ದಾರೆ
ಕೊರಿಯರ್ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸಲು ಮಹಿಳೆಯರು ಬೇಕಾಗಿದ್ದಾರೆ. (ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು) ಹಾಗೂ ಡೆಲಿವರಿ ಬಾಯ್ಸ್ ಮತ್ತು K.T.Street ಶಾಖೆಯಲ್ಲಿ ಆಫೀಸ್ Incharge ಆಗಿ ಕಾರ್ಯ ನಿರ್ವಹಿಸಲು ಬೇಕಾಗಿದ್ದಾರೆ.
ಸಮಯ: ಬೆ.10 ರಿಂದ ಸಂಜೆ 6
9449871794

ಎಲ್ಲಾ ಜಾತಿಯ ವಿವಾಹ ಮಾಹಿತಿಕೇಂದ್ರ
ಎಲ್ಲಾ ಜಾತಿಯ ವಧು ವರರ ವಿವಾಹಕ್ಕೆ ಕರೆ ಮಾಡಿ. SSLC, PUC, Degree, MBA, MCA, MBBS, Engineers
9164743059

WANTED URGENT
Impulse expansion - 2022 @ mysore, Age (18-22), 10th, PUC, BBM ಆದ Earn (10,500/- ರಿಂದ 18,500/-) PM, No Fee ಪರಸ್ಥಳದವರಿಗೆ ವಸತಿ Time (11am to 3pm) Call: ಗೌತಮ್
9353475598

ಅನುಗ್ರಹ ಯಾತ್ರಾ
ದಿ.21/8/22 ಮೈಸೂರು ಮತ್ತು ಬೆಂಗಳೂರಿನಿಂದ ರಾಮೇಶ್ವರಂ ಶ್ರೀರಂಗಂ ತಂಜಾವೂರು ಮತ್ತು ಮಧುರೈ 2 ದಿನ ರೈಲು ಪ್ರವಾಸ. ಸಂಪರ್ಕಿಸಿ
9880079351

ಉದ್ಯೋಗವಕಾಶ
ಮೈಸೂರಿನ ಹೆಸರಾಂತ ಸೆಕ್ಯೂರಿಟಿ ಸಲ್ಯೂಷನ್ ಕಂಪನಿಗೆ ಗಾರ್ಡ್ ಮತ್ತು ಹೌಸ್ ಕೀಪಿಂಗ್ ಕೆಲಸಕ್ಕೆ ಯುವ ಮತ್ತು ಕ್ರಿಯಾತ್ಮಕ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ:
0821 3567906
9880570381 / 7349278501

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ. Salary: 13,000-21,000+ ESI, PF ವಿದ್ಯಾರ್ಹತೆ: 10th, PUC, ITI, Diploma and Any Degree
ಇಂದೇ ಸಂಪರ್ಕಿಸಿ:
9035734821

ಸೈಟು ಮಾರಾಟಕ್ಕಿದೆ
40x60 ಉತ್ತರ ದಿಕ್ಕು, ಶಾರದ ಲೇ ಔಟ್,
(ಶ್ರೀನಗರ ಬಡಾವಣೆಎದುರು)
(ಜೆ.ಪಿ.ನಗರ ರಿಂಗ್ ರೋಡ್‌ನಿಂದ 3 km)
ಮನೋಜವಂ ರಿಯಲ್ ಎಸ್ಟೇಟ್
9845835535

MUDA APPROVED SITE
20x30, 30x40 & 35x40 with Bank Loans 1.5 km ಹುಣಸೂರು ರಸ್ತೆಗೆ, ಬೆಳವಾಡಿ, ವಿಜಯನಗರ 4ನೇ ಹಂತಕ್ಕೆ ಸಮೀಪ
9035565773

ಶ್ರೀಮಂತರ ವಿವಾಹಕ್ಕಾಗಿ
ಎಲ್ಲಾ ಜಾತಿಯ 18 ರಿಂದ 65 ವಯಸ್ಸಿನ Doctor, BE, M.Tech, Diploma, Any Degree, 1st Marriage 18000 ವಧುಗಳಿಗೆ ವರಬೇಕು. 28000 ವರಗಳಿಗೆ ವಧು ಬೇಕು, ಡೈವೋರ್ಸಿ, ವಿಧವೆ, ವಿಧುರರು
ತರಬೇತಿ / ಉದ್ಯೋಗ
SCGE ಕಂಪ್ಯೂಟರ್ ಟ್ರೈನಿಂಗ್ ಸೆಂಟರ್. ಎಲ್ಲಾ ರೀತಿಯ ಕಂಪ್ಯೂಟರ್ ತರಬೇತಿ + ಉದ್ಯೋಗ BE, Diploma, Degree, SSLC & ಓದಿಲ್ಲದವರಿಗೂ, City Bus stand No.15, 2nd Floor.
7975728012

ಉಚಿತವಾಗಿ ಪಡೆಯಿರಿ
25Kg MR ಗೋಲ್ಡನ್ BT ರೈಸನ್ನು ಖರೀದಿಸಿದರೆ 5Kg ಬ್ರಾಂಡೆಡ್ ಗೋದಿಹಿಟ್ಟು 2Kg ಸಕ್ಕರೆ, 1Kg ಫೈನ್ ತೊಗರಿಬೇಳೆಯನ್ನು ಉಚಿತವಾಗಿ ಕೊಡುತ್ತೇವೆ
ಬೆಲೆ ರೂ 1400/- ಮಾತ್ರ (ಷರತ್ತು ಅನ್ವಯ)
ಸನ್‌ಶೈನ್ ಟ್ರೇಡರ್ಸ್
ಶಿವರಾಂಪೇಟೆಯ ಮೋರ್ ಮೆಗಾಸ್ಟೋರ್ ಎದುರಿನ ರಸ್ತೆ
9206470833 ಮೈಸೂರು

FLAT FOR RENT
Sharing Accommodation Available in 2BHK Flat for Rent, Location: Near Sterling, Vidyaranyapuram.
Contact:
9676887643
Chats on whatsapp

FOR SALE
A)30x40 30x50 sites available attch Brahmins E blk layout
B) 0.28 land in Varkodu Bannur Road
C) 20x30 sites in vjr 4th stage
D) 20x30 G+1 New House University layout
E)12 /36 house Near Vijaya Bank Circle Kuvempu Nagar
PRAKRUTHI PROPERTIES
90359 90359 / 95386 90359

MUDA SITE FOR SALE
40'x60' North Facing, Vijayanagar 4th stage, 2nd phase, Mysore -17
Site no : 11759
1.20 CR , Negotiable
Contact :
9342113036

KHB SITE FOR SALE
30x40
Near Citizen School Nanjangud
Rs. 2600/ Sq.ft
9448322796

ಕೊಳ್ಳೇಗಾಲ ಜ್ಯೋತಿಷ್ಯರು ನಂ. 01 ಮೋಡಿ ಮಾಂತ್ರಿಕರು ಪಂ. ಎಸ್. ಕುಮಾರಸ್ವಾಮಿ
Mob: 9880583804
ಕೊಳ್ಳೇಗಾಲದ ಮೋಡಿ ಮಾಂತ್ರಿಕ ಅಘೋಚರ ಶಕ್ತಿಯಿಂದ ಸ್ತ್ರೀ–ಪುರುಷ, ಪ್ರೇಮ, ಸಂತಾನ, ಶತ್ರುದೋಷ, ಸಾಲಭಾಧೆ, ಆರೋಗ್ಯ, ಭೂಮಿ, ಕೋರ್ಟು, ವ್ಯಾಪಾರ, ನಂಬಿದ ಜನರಿಂದ ಮೋಸ ನಿಮ್ಮ ಯಾವುದೇ ಜಟಿಲವಾದ ಸಮಸ್ಯೆಗಳಿಗೆ 2 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ. ಕರೆ ಮಾಡಿ ಬನ್ನಿ.
ಖಾಯಂ ವಿಳಾಸ ಎ.ಟಿ.ಎಂ. ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ (ರಿಲಾಯನ್ಸ್ ಮಾಲ್), ಬಿ.ಎನ್. ರೋಡ್, ಕೆ.ಎಸ್.ಆರ್.ಟಿ.ಸಿ. ಸಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮಾಂತ್ರಿಕ ಕೇರಳ ಶ್ರೀ ಭಗವತಿ ಜೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ: 9731839596
ಇವರು ಕುಟ್ಟಿ ಚೇತನ್ ಮಾರ್ತಾಂಡ ದೇವಿ ಭಗವತಿ ಕಾಟೇರಿ ಪ್ರಯೋಗದಿಂದ, ಸ್ತ್ರೀ ಪುರುಷ ಪ್ರೇಮ, ವಿವಾಹ, ಸಂತಾನ, ದಾಂಪತ್ಯ ಸಮಸ್ಯೆ, ಶತ್ರು ಭಾಧೇ, ಪ್ರೇತಾ ಭಾದೇ, ಹಣದ ಸಮಸ್ಯೆ, ತನ್ನವರೇ ತನಗೆ ಶತ್ರು, ಕೌಟುಂಬಿಕ ಕಲಹ ನಿಮ್ಮ ಯಾವುದೇ ಸಮಸ್ಯೆಗಳಿಗೆ ಮಳಯಾಳಿ ಮಾಂತ್ರಿಕ ಶಕ್ತಿಯಿಂದ ತಕ್ಷಣ ಪರಿಹಾರ ಶತಸಿದ್ಧ.
ಖಾಯಂ ಮನೆ ವಿಳಾಸ: ಮನೆ ನಂ 68, ಸತ್ಯ ಮಾರ್ಗ, ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ.ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಮೈಸೂರು ಮಿತ್ರ – ಓದುಗರ ಗಮನಕ್ಕೆ
43
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ ಸೋಮವಾರ 1 ಆಗಸ್ಟ್ 2022

ನಾಗಮಂಗಲದ ಸೋಮನಹಳ್ಳಿಯಲ್ಲಿ ಜೆಡಿಎಸ್ ಕಾರ್ಯಕರ್ತರ ಬೃಹತ್ ಸಮಾವೇಶ

ಪಕ್ಷದಲ್ಲೇ ಬೆಳೆದು ಹೋದ ಕುತಂತ್ರಿಗಳಿಂದ ಜೆಡಿಎಸ್‌ಗೆ ಸೋಲು

ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕಿಡಿ



ಮಂಡ್ಯ, ಜು.31– ಜಿಲ್ಲೆಯ ಜನರು ನಮ್ಮನ್ನು ಸೋಲಿಸಲಿಲ್ಲ. ನಮ್ಮ ಪಕ್ಷದಲ್ಲಿಯೇ ಬೆಳೆದು ಕಾಂಗ್ರೆಸ್‌ಗೆ ಹೋದ ಕುತಂತ್ರಿ ರಾಜಕಾರಣಿಗಳು ನಮ್ಮನ್ನು ಸೋಲಿಸಿದರು. ಈ ಕುತಂತ್ರದ ಚಕ್ರವ್ಯೂಹಕ್ಕೆ 2023ರ ವಿಧಾನಸಭಾ ಚುನಾವಣೆಯಲ್ಲಿ ಉತ್ತರ ಸಿಗಲಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕಿಡಿಕಾರಿದರು.

ಜಿಲ್ಲೆಯ ನಾಗಮಂಗಲ ತಾಲೂಕಿನ ಸೋಮನಹಳ್ಳಿಯಲ್ಲಿ ಭಾನುವಾರ ನಡೆದ ಜೆಡಿಎಸ್ ಕಾರ್ಯಕರ್ತರ ಬೃಹತ್ ಸಮಾವೇಶ ಹಾಗೂ ಪಕ್ಷ ಸೇರ್ಪಡೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಂಡ್ಯ ಲೋಕಸಭಾ ಚುನಾವಣೆ ಸೇರಿದಂತೆ ಕೆಆರ್ ಪೇಟೆ ಉಪ ಚುನಾವಣೆ, ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್, ಬಿಜೆಪಿ, ರೈತಸಂಘ ಸೇರಿದಂತೆ ಎಲ್ಲರೂ ಒಂದಾಗಿ ಕುತಂತ್ರದ ಚಕ್ರವ್ಯೂಹ ರಚಿಸಿ ಸೋಲಿಸಿದರು. ಆದರೆ, ಜೆಡಿಎಸ್ ನಿರ್ನಾಮ ಮಾಡಲು ಯಾರಿಂದಲೂ ಸಾಧ್ಯವಿಲ್ಲ. ಕಾರ್ಯಕರ್ತರು ಅದಕ್ಕೆ ಅವಕಾಶ ನೀಡುವುದಿಲ್ಲ ಎಂಬುದನ್ನು ಅರಿಯಬೇಕು ಎಂದರು.

ಇತ್ತೀಚೆಗೆ ಸಾವಿರಾರು ಕೋಟಿ ರೂ. ಅನುದಾನದ ಯೋಜನೆಗಳನ್ನು ಜಾರಿಗೊಳಿಸುತ್ತೇವೆ ಎಂದು ಕೆಆರ್.ಪೇಟೆಯಲ್ಲಿ ಭಾಷಣ ಮಾಡಿದ್ದ ಮಾಜಿ ಸಿಎಂ ಒಬ್ಬರು, ನನ್ನ ತವರು ಕ್ಷೇತ್ರ ಅಭಿವೃದ್ಧಿ ಮಾಡುತ್ತೇನೆ ಎನ್ನುತ್ತಾರೆ. ಆದರೆ, ನಾನು ಬಜೆಟ್ ಮಂಡಿಸಿದಾಗ ಮಂಡ್ಯ ಬಜೆಟ್ ಎಂದು ಟೀಕಿಸಿದರು. ಈಗ ಇವರಿಗೆ ಮಾತನಾಡಲು ನೈತಿಕತೆ ಇದೆಯೇ ಎಂದು ಮಾಜಿ ಸಿಎಂ ಯಡಿಯೂರಪ್ಪ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದ ಅವರು, ನಾನು ಮುಖ್ಯಮಂತ್ರಿಯಾಗಿದ್ದಾಗ ಶಿಕಾರಿಪುರದ ನೀರಾವರಿ ಯೋಜನೆಯ ಫೈಲ್ ಬಂದಾಗ ನಾನು ಯಾವುದೇ ದ್ವೇಷ ಮಾಡದೆ ಸಹಿ ಮಾಡಿದ್ದೇನೆ ಎಂದು ತಿಳಿಸಿದರು.

ನಾನು ಕೇವಲ ಮಂಡ್ಯ ಜಿಲ್ಲೆಗೆ ಸೀಮಿತವಾಗಿ ರಾಜಕಾರಣ ಮಾಡಿಲ್ಲ. ಇಡೀ ರಾಜ್ಯದ ಜನರ ಪರವಾಗಿ ಕೆಲಸ ಮಾಡಿದ್ದೇನೆ. ರಾಜ್ಯದ ಅಭಿವೃದ್ಧಿಗೆ ದುಡಿದಿದ್ದೇನೆ. ನನಗೆ ಜನರ ಹಿತ ಮುಖ್ಯ. ನಾನು ಎರಡು ಬಾರಿ ಸಿಎಂ ಆಗಿದ್ದು, ನನ್ನ ತಂದೆ-ತಾಯಿ, ಕಾರ್ಯಕರ್ತರು ಹಾಗೂ ದೇವರ ಆಶೀರ್ವಾದದಿಂದ ಮುಖ್ಯಮಂತ್ರಿಯಾಗಿದ್ದೇನೆ. 2023ಕ್ಕೆ ಸಂಪೂರ್ಣ ಬಹುಮತ ನೀಡಿದರೆ ಜನರ ಅಭಿವೃದ್ಧಿಗೆ ಅನೇಕ ಯೋಜನೆಗಳನ್ನು ಜಾರಿಗೆ ತರುತ್ತೇನೆ ಎಂದು ಭರವಸೆ ನೀಡಿದರು.

ಮುಂದಿನ ತಿಂಗಳಿನಿಂದ ರಾಜ್ಯಾದ್ಯಂತ ಪಂಚರತ್ನ ರಥಯಾತ್ರೆ ಆರಂಭಿಸಲಾಗುವುದು. ರಾಜ್ಯಾದ್ಯಂತ ಸಂಚರಿಸಿ ಪ್ರತಿ ದಿನ 15ರಿಂದ 20 ಸಭೆ, ಸಮಾರಂಭ ಮಾಡುತ್ತಾ, 100 ದಿನಗಳ ಕಾಲ ನಿಗದಿತ ಗ್ರಾಮಗಳಲ್ಲಿ ವಾಸ್ತವ್ಯ ಮಾಡಲಿದ್ದೇನೆ. ಜನರ ಸಮಸ್ಯೆ ಅರಿತು ಯೋಜನೆ ರೂಪಿಸುತ್ತೇನೆ ಎಂದು ತಿಳಿಸಿದರು.

ಕೇಂದ್ರದ ಮೋದಿ ಸರ್ಕಾರ ಮೊದಲು ದೇಶದ ಬಡವರಿಗೆ ಸಬ್ಸಿಡಿಯಲ್ಲಿ ಎಲ್ಲ ಬಡವರಿಗೂ ಗ್ಯಾಸ್ ಸಿಲಿಂಡರ್ ನೀಡಿದರು. ಈಗ ಆ ಸಬ್ಸಿಡಿಯನ್ನು ಕಿತ್ತುಕೊಂಡು ಗ್ಯಾಸ್ ಸಿಲಿಂಡರ್ ಬೆಲೆ ಏರಿಸಿ ಬಡವರನ್ನು ಮತ್ತಷ್ಟು ಬಡವರನ್ನಾಗಿ ಮಾಡಿದ್ದಾರೆ.

ಮುಂದಿನ 2023ರ ಚುನಾವಣೆಗೆ ಜೆಡಿಎಸ್‌ಗೆ ಸಂಪೂರ್ಣ ಬಹುಮತ ನೀಡಿದರೆ, ಉತ್ತಮ ಆಡಳಿತ ನೀಡುತ್ತೇನೆ. 200 ಯೂನಿಟ್ ವರೆಗೂ ಉಚಿತ ವಿದ್ಯುತ್ ಸೇರಿದಂತೆ ಬಡವರ ಪರ ಅನೇಕ ಯೋಜನೆಗಳನ್ನು ಜಾರಿಗೊಳಿಸುತ್ತೇನೆ. ಯೋಜನೆಗಳ ಪ್ರಣಾಳಿಕೆಯನ್ನು ಶೀಘ್ರದಲ್ಲಿಯೇ ಹೊರಡಿಸುತ್ತೇನೆ.
–ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಮುಖ್ಯಮಂತ್ರಿ

ಬಡವರ ಗ್ಯಾಸ್ ಸಿಲಿಂಡರ್ ತುಂಬಿಸಲು ಒಂದು ಸಾವಿರ ರೂ. ಕೊಡಬೇಕಾಗಿದೆ. ಎಲ್ಲಿಂದ ಹಣ ತರುತ್ತಾರೆ. ಇತ್ತ ಸೌದೆಯೂ ಇಲ್ಲ ಅತ್ತ ಗ್ಯಾಸ್ ತುಂಬಿಸಲು ಆಗುತ್ತಿಲ್ಲ. ಇದು ಮೋದಿಯ ಸರ್ಕಾರದ ಕೊಡುಗೆ ಎಂದು ಟೀಕಿಸಿದರು.

ವೇದಿಕೆಯಲ್ಲಿ ಜೆಡಿಎಸ್ ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ, ಶಾಸಕರಾದ ಹೆಚ್.ಡಿ. ರೇವಣ್ಣ, ಬಂಡೆಪ್ಪ ಕಾಶೆಂಪೂರ, ಕೆ. ಸುರೇಶ್ ಗೌಡ, ಡಾ.ಕೆ.ಅನ್ನದಾನಿ, ಎಂ. ಶ್ರೀನಿವಾಸ್, ರವೀಂದ್ರ ಶ್ರೀಕಂಠಯ್ಯ, ಹೆಚ್.ಕೆ.ಕುಮಾರಸ್ವಾಮಿ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ. ರಮೇಶ್, ಮುಖಂಡರಾದ ಹೆಚ್.ಟಿ. ಮಂಜು, ಬಿ.ಎಲ್.ದೇವರಾಜು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಸಮಾವೇಶದಲ್ಲಿ ಸಹೋದರರ ಕಣ್ಣೀರು!



ಮಂಡ್ಯ: ಸಮಾವೇಶದಲ್ಲಿ ಸಹೋದರರಾದ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಮಾಜಿ ಸಚಿವ ಹೆಚ್.ಡಿ.ರೇವಣ್ಣ ಕಣ್ಣೀರಿಟ್ಟ ಪ್ರಸಂಗ ನಡೆಯಿತು.

ವೇದಿಕೆ ಕಾರ್ಯಕ್ರಮ ನಡೆಯುತ್ತಿದ್ದ ವೇಳೆ ವೇದಿಕೆಯ ಮೇಲೆ ಅಳವಡಿಸಿದ್ದ ಬೃಹತ್ ಎಲ್‌ಇಡಿ ಪರದೆ ಮೇಲೆ ತಮ್ಮ ತಂದೆ ದೇವೇಗೌಡರನ್ನು ನೋಡಿದ ಕುಮಾರಸ್ವಾಮಿ ಹಾಗೂ ರೇವಣ್ಣ ಕಣ್ಣೀರು ಹಾಕಿದರು. ಈ ವೇಳೆ ಕಾರ್ಯಕರ್ತರು, ಅಭಿಮಾನಿಗಳು ದೇವೇಗೌಡರನ್ನು ಕಂಡು ಹರ್ಷೋದ್ಗಾರ ವ್ಯಕ್ತಪಡಿಸಿದರು. ಅನಾರೋಗ್ಯದ ಹಿನ್ನೆಲೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು ಸಮಾವೇಶಕ್ಕೆ ಬಂದಿರಲಿಲ್ಲ. ಮನೆಯಲ್ಲೇ ಕುಳಿತು ಇಡೀ ಕಾರ್ಯಕ್ರಮ ವೀಕ್ಷಿಸಿದರು. ಈ ದೃಶ್ಯವನ್ನು ವೇದಿಕೆಯ ಎಲ್‌ಇಡಿಯಲ್ಲಿ ನೇರ ಪ್ರಸಾರ ಮಾಡಲಾಗುತ್ತಿತ್ತು. ಬಳಿಕ ಕುಮಾರಸ್ವಾಮಿ ಮಾತನಾಡಿ, ದೇವೇಗೌಡರು ತಮ್ಮ ಇಳಿ ವಯಸ್ಸಿನಲ್ಲಿಯೂ ಛಲದಿಂದ ಹೋರಾಟ ನಡೆಸುತ್ತಿದ್ದಾರೆ. ಅವರ ಹೋರಾಟ ಎಲ್ಲರಿಗೂ ಸ್ಫೂರ್ತಿದಾಯಕವಾಗಿದೆ ಎಂದು ಹೇಳುತ್ತಾ ಕಣ್ಣೀರು ಹಾಕಿದರು.

20 ಸಾವಿರ ಮಂದಿಗೆ ಭರ್ಜರಿ ಬಾಡೂಟ

ಮಂಡ್ಯ: ಸಮಾವೇಶಕ್ಕೆ ಆಗಮಿಸಿದ ಸುಮಾರು 20 ಸಾವಿರ ಮಂದಿ ಕಾರ್ಯಕರ್ತರಿಗಾಗಿ ಮಟನ್‌ಕುರ್ಮಾ, ಚಿಕನ್ ಫ್ರೈ, ಮುದ್ದೆ ಅನ್ನ–ಸಾಂಬಾರ್ ಸೇರಿದಂತೆ ಭರ್ಜರಿ ಬಾಡೂಟದ ವ್ಯವಸ್ಥೆ ಮಾಡಲಾಗಿತ್ತು. ಸಮಾವೇಶದ ನಂತರ ಕಾರ್ಯಕರ್ತರು ಬಾಡೂಟ ಸವಿದರು.

ಹೆಚ್‌ಡಿಕೆಗೆ ಅದ್ದೂರಿ ಸ್ವಾಗತ: ಸಮಾವೇಶಕ್ಕೆ ಆಗಮಿಸಿದ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರನ್ನು ತಾಲೂಕಿನ ಚಿಣ್ಯದಿಂದ ಕಾರ್ಯಕರ್ತರು ಬೈಕ್ ರ‍್ಯಾಲಿ ಮೂಲಕ ಕರೆ ತಂದರು. ಇದೇ ವೇಳೆ ಅವರಿಗೆ ಬೃಹತ್ ಸೇಬಿನ ಹಾರ ಹಾಕಿ ಸ್ವಾಗತಿಸಲಾಯಿತು.

ಪ್ರಮುಖರ ಗೈರು: ಸಮಾವೇಶಕ್ಕೆ ಕ್ಷೇತ್ರದವರೇ ಆದ ವಿಧಾನಪರಿಷತ್ ಮಾಜಿ ಸದಸ್ಯ ಎನ್.ಅಪ್ಪಾಜಿಗೌಡ, ಮನ್‌ಮುಲ್ ನಿರ್ದೇಶಕ ನೆಲ್ಲಿಗೆರೆ ಬಾಲು, ಹಿರಿಯ ಶಾಸಕರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ ಹಾಗೂ ಮರಿತಿಬ್ಬೇಗೌಡ ಗೈರು ಹಾಜರಿ ಎದ್ದು ಕಾಣುತ್ತಿತ್ತು.

ಹವಾಮಾನ ವೈಪರೀತ್ಯ: ಹಿನ್ನೀರಿನಲ್ಲಿ ಜೂನಿಯರ್ ರ‍್ಯಾಂಕಿಂಗ್ ಸೈಲಿಂಗ್ ರೇಸ್ ಇಂದಿಗೆ ಮುಂದೂಡಿಕೆ





ಶ್ರೀರಂಗಪಟ್ಟಣ, ಜು.31– ತಾಲೂಕಿನ ಕೃಷ್ಣರಾಜ ಸಾಗರ(ಕೆಆರ್‌ಎಸ್)ದ ಜಲಾಶಯದ ಹಿನ್ನೀರಿನಲ್ಲಿ ಭಾನುವಾರದಿಂದ(ಜು.31) ನಡೆಯಬೇಕಿದ್ದ ನ್ಯಾಷನಲ್ ಜೂನಿಯರ್ ರ‍್ಯಾಂಕಿಂಗ್ ಸೈಲಿಂಗ್ ಚಾಂಪಿಯನ್‌ಶಿಪ್ ಸ್ಪರ್ಧೆಯನ್ನು ತಾತ್ಕಾಲಿಕವಾಗಿ ಮುಂದೂಡಲಾಯಿತು.

ಹಿನ್ನೀರಿನಲ್ಲಿ ಗಾಳಿಯ ಪ್ರಮಾಣ ಕಡಿಮೆ ಇದ್ದುದರಿಂದ ಬೋಟುಗಳ ಸೈಲಿಂಗ್‌ಗೆ ಅಡ್ಡಿಯುಂಟಾಗಿದೆ. ಹಾಗಾಗಿ, ಮೊದಲ ದಿನ ನಡೆಯಬೇಕಿದ ರೇಸ್‌ಗಳನ್ನು ಸೋಮವಾರಕ್ಕೆ ಮುಂದೂಡಲಾಗಿದೆ ಎಂದು ಕ್ಯಾಪ್ಟನ್ ಅರವಿಂದ್ ಶರ್ಮಾ ತಿಳಿಸಿದರು. ದೇಶದ ತಮಿಳುನಾಡು, ಹೈದರಾಬಾದ್, ಭೋಪಾಲ್, ಮುಂಬೈ, ಗೋವಾ, ಕರ್ನಾಟಕ, ಇಂಡಿಯನ್ ನೇವಿ ಮತ್ತು ಇಂಡಿಯನ್ ಆರ್ಮಿ ತಂಡಗಳು ಈ ಸ್ಪರ್ಧೆಯಲ್ಲಿ ಭಾಗವಹಿಸುತ್ತಿರುವುದು ವಿಶೇಷವಾಗಿದೆ.

ಭೂ ನ್ಯಾಯ ಮಂಡಳಿ ನಾಮನಿರ್ದೇಶನ ಸದಸ್ಯರಿಗೆ ಅಭಿನಂದನೆ



ಪಾಂಡವಪುರ, ಜು.31– ಭೂ ನ್ಯಾಯ ಮಂಡಳಿ ಹಾಗೂ ತ್ರೈಮಾಸಿಕ ಪ್ರಗತಿ ಪರಿಶೀಲನ ಸಭೆ (ಕೆಡಿಪಿ)ಗೆ ಸರ್ಕಾರದ ನಾಮನಿರ್ದೇಶಿತ ಸದಸ್ಯರಾಗಿ ನೇಮಕಗೊಂಡ ಕಾರ್ಯಕರ್ತರನ್ನು ಬಿಜೆಪಿಯಿಂದ ಅಭಿನಂದಿಸಲಾಯಿತು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಭೂ ನ್ಯಾಯ ಮಂಡಳಿಗೆ ನಾಮ ನಿರ್ದೇಶಿತ ಸದಸ್ಯರಾದ ಕೆನ್ನಾಳು ಹೇಮಂತ್‌ಕುಮಾರ್, ಹರವು ಹೆಚ್.ಕೆ.ಧನಂಜಯ್, ವಿಜಯ್, ಕೆ.ವಿ. ಮರಿಸ್ವಾಮಿ ಗೌಡ, ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ(ಕೆಡಿಪಿ)ಗೆ ನೇಮಕಗೊಂಡ ಕೆಆರ್.ಪುರುಷೋತ್ತಮ್, ಜಯಣ್ಣಚಾರಿ, ಲೋಕೇಶ್ ಮೂರ್ತಿ, ಕುಮಾರ್, ಗೋಪಾಲ್, ನಿರ್ಮಲಾ ಆನಂದ್ ಅವರನ್ನು ಬಿಜೆಪಿ ಮುಖಂಡ ಎನ್.ಎಸ್. ಇಂದ್ರೇಶ್ ಹಾಗೂ ತಾಲೂಕು ಅಧ್ಯಕ್ಷ ಅಶೋಕ್ ಅವರು ಅಭಿನಂದಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಅಧ್ಯಕ್ಷ ಎಲ್. ಅಶೋಕ್, ಮುಖಂಡರಾದ ಧನಂಜಯ್, ಬಿಜೆಪಿ ಮಹಿಳಾ ಜಿಲ್ಲಾ ಕಾರ್ಯದರ್ಶಿ ಮಂಗಳ ನವೀನ್, ಸಂದೇಶ್, ನವೀನ್, ಚಿಕ್ಕಣ್ಣ, ಟಿಎಪಿಸಿಎಂಎಸ್ ನಿರ್ದೇಶಕ ಮಧು ಸೇರಿದಂತೆ ಹಲವರು ಹಾಜರಿದ್ದರು.



ಶ್ರೀರಂಗಪಟ್ಟಣದಲ್ಲಿ ಮಾಜಿ ಶಾಸಕ ರಮೇಶ್ ಬಂಡಿಸಿದ್ದೇಗೌಡ ಅವರ ನೇತೃತ್ವದಲ್ಲಿ ನಗುವಿನಹಳ್ಳಿ ಗ್ರಾಪಂ ಮಾಜಿ ಅಧ್ಯಕ್ಷೆ ಸುಮಾ ಅವರು ಜೆಡಿಎಸ್ ತೊರೆದು ಕಾಂಗ್ರೆಸ್ ಪಕ್ಷ ಸೇರ್ಪಡೆಯಾದರು. ಈ ವೇಳೆ ಬ್ಲಾಕ್ ಕಾಂಗ್ರೆಸ್ ತಾಲೂಕು ಅಧ್ಯಕ್ಷ ಪ್ರಕಾಶ್, ಗ್ರಾಪಂ ಸದಸ್ಯರಾದ ಚೇತನ್, ಮಹೇಂದ್ರಚಾರಿ, ಮುಖಂಡರಾದ ಬಿ.ಆರ್.ನಂದಕುಮಾರ್, ರಮೇಶ್, ಭಾಸ್ಕರ್, ಲಕ್ಷ್ಮೀ ನಾರಾಯಣ, ಶೇಖರ್, ನಾರಾಯಣಪ್ಪ, ಡಿ.ಕುಮಾರ್, ನಾಗೇಂದ್ರ ಇದ್ದರು.

ಓಬಿಸಿಗೆ ವೀರಶೈವ ಲಿಂಗಾಯತ ಸಮುದಾಯ ಸೇರ್ಪಡೆಗೆ ಒತ್ತಾಯ

ಇಂದು ಜಿಲ್ಲಾಧಿಕಾರಿಗೆ ಲಿಂಗಾಯತ ಮಹಾಸಭಾದಿಂದ ಮನವಿ ಸಲ್ಲಿಕೆ

ಕೆ.ಆರ್.ಪೇಟೆ, ಜು.31– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದಿಂದ ವೀರಶೈವ ಲಿಂಗಾಯತ ಸಮುದಾಯವನ್ನು ಓಬಿಸಿ ಪಟ್ಟಿಗೆ ಸೇರ್ಪಡೆ ಮಾಡುವಂತೆ ಒತ್ತಾಯಿಸಿ ಆ.1ರ ಸೋಮವಾರ ಬೆಳಗ್ಗೆ 10 ಗಂಟೆಗೆ ಮಂಡ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ತಾಲೂಕು ಅಧ್ಯಕ್ಷ ವಕೀಲ ವಿ.ಎಸ್.ಧನಂಜಯ್‌ಕುಮಾರ್ ಹೇಳಿದರು.

ತಾಲೂಕು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಕಚೇರಿಯಲ್ಲಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸಮುದಾಯದ ಬಂಧುಗಳು ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಮನವಿ ಸಲ್ಲಿಕೆ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಕೋರಿದರು.

ಮಂಡ್ಯ ಜಿಲ್ಲಾ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ಜಿಲ್ಲೆಯ 7 ತಾಲೂಕಿನ ಮಹಾಸಭಾ ವತಿಯಿಂದ ಸುಮಾರು 5 ಸಾವಿರ ಜನರು ಸೇರಿ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಕಾಲ್ನಡಿಗೆಯಲ್ಲಿ ಜಾಥಾ ಹೊರಟು ವೀರಶೈವ ಲಿಂಗಾಯತ ಸಮುದಾಯವನ್ನು ಓಬಿಸಿ ವರ್ಗಕ್ಕೆ ಸೇರಿಸಬೇಕು ಎಂದು ಜಿಲ್ಲಾಧಿಕಾರಿ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು. ಸಭೆಯಲ್ಲಿ ಮಹಾಸಭಾದ ನಿರ್ದೇಶಕ ಎಂ.ಎಸ್.ಶಿವಮೂರ್ತಿ, ಡಿ.ಸಿ.ಕುಮಾರ್, ಚೋಕನಹಳ್ಳಿ ಪ್ರಕಾಶ್, ಮಹಿಳಾ ಘಟಕದ ಉಪಾಧ್ಯಕ್ಷೆ ಜಯನಂದಿನಿ, ರಾಣಿ ಜಗದೀಶ್, ಪುಷ್ಪ ರಮೇಶ್, ಮಹೇಶ್‌ಕುಮಾರ್, ಈರಪ್ಪ, ನಾಗೇಂದ್ರ ಕುಮಾರ್, ವಿಜಯ ಕುಮಾರ್ ಹಾಜರಿದ್ದರು.

ಶಿಕ್ಷಣಕ್ಕೆ ಪೂರಕವಾಗಿ ಸಂಗೀತ, ಕಲೆ, ಸಂಸ್ಕೃತಿ ಅಳವಡಿಸಿಕೊಳ್ಳಿ

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸಲಹೆ



ಮೈಸೂರು, ಜು.31– ವಿದ್ಯಾರ್ಥಿನಿಯರು ಶಿಕ್ಷಣಕ್ಕೆ ಪೂರಕವಾಗಿ ಸಂಗೀತ, ಕಲೆ, ಭರತನಾಟ್ಯ, ಯೋಗ, ಧ್ಯಾನ, ಸಂಸ್ಕೃತಿಯನ್ನು ಅಳವಡಿಸಿಕೊಳ್ಳಬೇಕು ಎಂದು ಶಾಸಕ ಜಿ.ಟಿ.ದೇವೇಗೌಡ ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೈಸೂರಿನ ರಾಜರಾಜೇಶ್ವರಿ ನಗರದಲ್ಲಿ ಡಿ.ದೇವರಾಜಅರಸು ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯವನ್ನು ಉದ್ಘಾಟಿಸಿ ಮಾತನಾಡಿದ ಅವರು ನಿಮ್ಮ ತಂದೆ ತಾಯಿಯರು ನಿಮ್ಮನ್ನು ಡಾಕ್ಟರ್ ಆಗಬೇಕು, ಇಂಜಿನಿಯರ್ ಆಗಬೇಕು ಎಂದು ಕನಸು ಕಟ್ಟಿಕೊಂಡು ಕಳಿಸಿದ್ದಾರೆ. ಇಲ್ಲಿ ಎಲ್ಲರೂ ಒಂದೇ ಕುಟುಂಬದವರಂತೆ, ಯಾವುದೇ ಜಾತಿ, ಭೇದ ಮಾಡದೆ ಹಾಸ್ಟೆಲ್ ಮುಂದೆ ಕೈತೋಟ, ಹೂವಿನಗಿಡ ನೆಟ್ಟು ಪರಿಸರವನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು. ಪ್ರತಿಯೊಬ್ಬರನ್ನು ಮಾನವೀಯತೆಯಿಂದ ನೋಡಬೇಕು, ಎಲ್ಲರೂ ಚೆನ್ನಾಗಿ ಓದಿ ನಿಮ್ಮ–ನಿಮ್ಮ ಬದುಕನ್ನು ಕಟ್ಟಿಕೊಂಡು ಉತ್ತಮ ಪ್ರಜೆಗಳಾಗಿ ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ದೇವರಾಜ ಅರಸುರವರು ಮುಖ್ಯಮಂತ್ರಿಯಾಗಿದ್ದಾಗ ತಳಮಟ್ಟದ ಜನರ ಮಕ್ಕಳು ಸಹ ಚೆನ್ನಾಗಿ ಓದಿ ಆರ್ಥಿಕವಾಗಿ ಸಬಲರಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕೆಂದು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯನ್ನು ಸ್ಥಾಪಿಸಿ, ಹಾಸ್ಟೆಲ್‌ಗಳನ್ನು ರಾಜ್ಯದ್ಯಾಂತ ನಿರ್ಮಾಣ ಮಾಡಿದ್ದಾರೆ. ಆದರೆ ಸರ್ಕಾರ ನಿಮಗೆ ಎಲ್ಲಾ ಸೌಲಭ್ಯಗಳನ್ನು ಕೊಟ್ಟರೂ ನೀವು ಉತ್ತಮ ಅಂಕಗಳನ್ನು ಪಡೆಯುತ್ತಿಲ್ಲ. ರ‍್ಯಾಂಕ್ ಪಡೆಯುತ್ತಿಲ್ಲ ವೇಕೆ? ಎಂದು ಬೇಸರ ವ್ಯಕ್ತಪಡಿಸಿದರು. ಸರ್ಕಾರ ನಿಮಗಾಗಿ ಕೊಟ್ಯಾಂತರ ರೂ. ಖರ್ಚು ಮಾಡುತ್ತಿದೆ. ನೀವು ಮುಂದಿನ ಭವ್ಯ ಭಾರತದ ಪ್ರಜೆಗಳಾಗಬೇಕು ಚೆನ್ನಾಗಿ ಓದಿ. ಕೆ.ಎ.ಎಸ್, ಐ.ಎ.ಎಸ್, ಐ.ಪಿ.ಎಸ್. ಅಧಿಕಾರಿಗಳಾಗಿ ಸಾರ್ವಜನಿಕ ಸೇವೆಗೆ ಬರಬೇಕು. ಆಗ ತಂದೆ–ತಾಯಿಗೆ ಸಂತೋಷವಾಗುತ್ತದೆ. ನೀವು ಸಮಾಜದ ಆಸ್ತಿ ಆಗುತ್ತೀರಿ ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಹೆಚ್.ಎಸ್. ಬಿಂದ್ಯಾ ಸ್ವಾಗತಿಸಿದರು. ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕ ಹೆಚ್.ಬಿ. ಸತೀಶ್, ಸಹಾಯಕ ಇಂಜಿನಿಯರ್ ಕೆ.ಎಸ್. ರಮೇಶ್, ಬೋಗಾಧಿ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಶ್ಯಾಮಸುಂದರ್, ತಾಲೂಕು ಕಲ್ಯಾಣ ಅಧಿಕಾರಿಗಳಾದ ಚಂದ್ರಕಲಾ, ವಿಶ್ವನಾಥ್, ಸ್ವರ್ಣಲತಾ, ಮಹೇಶ್, ಪ್ರೇಮ್‌ಕುಮಾರ್, ಸತೀಶ್, ಮೀನಾ, ಕಚೇರಿ ವ್ಯವಸ್ಥಾಪಕ ದೀಪಕ್ ಹಾಜರಿದ್ದರು. ಮಹಾಲಕ್ಷ್ಮಿ ನಿರೂಪಿಸಿದರು. ಎಲ್ಲಾ ನಿಲಯಪಾಲಕರು ಹಾಜರಿದ್ದರು.

ನಕಲಿ, ಕಳ್ಳ ಸಾಗಣೆ ಅರ್ಥ ವ್ಯವಸ್ಥೆಗೆ ಮಾರಕ

ಕೆಪಿಎ ನಿರ್ದೇಶಕ ಅನುಪಮ್ ಅಗರ್‌ವಾಲ್ ಆತಂಕ



ಮೈಸೂರು, ಜು.31(ಆರ್‌ಕೆ)– ನಕಲಿ ಮತ್ತು ಕಳ್ಳ ಸಾಗಣೆ ಮಾಡುವುದು ಅರ್ಥ ವ್ಯವಸ್ಥೆಗೆ ಬಹು ದೊಡ್ಡ ಮಾರಕ ಎಂದು ಕರ್ನಾಟಕ ಪೊಲೀಸ್ ಅಕಾಡೆಮಿ (ಕೆಪಿಎ) ನಿರ್ದೇಶಕ ಅನುಪಮ್ ಅಗರವಾಲ್ ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಕೆಪಿಎ ಸಭಾಂಗಣದಲ್ಲಿ ಏರ್ಪಡಿಸಿದ್ದ 'ನಕಲಿ ಮತ್ತು ಕಳ್ಳ ಸಾಗಣೆ ತಡೆಗಟ್ಟಲು ಪೊಲೀಸ್ ಅಧಿಕಾರಿಗಳ ಸಾಮರ್ಥ್ಯಾಭಿವೃದ್ಧಿ' ಎಂಬ ವಿಷಯ ಕುರಿತ ಕಾರ್ಯಾಗಾರ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ನಕಲಿ ಮತ್ತು ಕಳ್ಳ ಸಾಗಾಣಿಕೆಯು ಅಕ್ರಮ ವ್ಯಾಪಾರ ಚಟುವಟಿಕೆಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದರು.

ಅದರಿಂದಾಗಿ ಆರೋಗ್ಯ, ಶಿಕ್ಷಣ, ಮೂಲ ಸೌಕರ್ಯದಂತಹ ಸೇವೆ ಒದಗಿಸಲು ಸರ್ಕಾರಕ್ಕೆ ಆರ್ಥಿಕ ಸಂಪನ್ಮೂಲದ ಕೊರತೆ ಉಂಟಾಗುತ್ತದೆ. ನಾಗರಿಕರು ಮತ್ತು ಅವರ ಆಸ್ತಿ ರಕ್ಷಣೆ ಮಾಡುವ ಮೂಲಕ ಸಮಾಜದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದು ಮಾತ್ರ ಪೊಲೀಸ್ ಇಲಾಖೆ ಪ್ರಮುಖ ಜವಾಬ್ದಾರಿಯಾಗಿದೆ ಎಂದೂ ನುಡಿದರು. ನವದೆಹಲಿಯ ಎಫ್‌ಐಸಿಸಿಐ ಸಲಹೆಗಾರ ದೀಪಚಂದ್ ಅವರು ಮಾತನಾಡಿ, ಕಠಿಣ ಕ್ರಮ ಕೈಗೊಳ್ಳದಿರುವುದು, ದುರ್ಬಲ ಪರಿವೀಕ್ಷಣೆ ಕಾನೂನಿನ ಚೌಕಟ್ಟಿನ ಕೆಲ ಅಂಶಗಳು ಅಕ್ರಮ ವ್ಯಾಪಾರ ಚಟುವಟಿಕೆಗಳಿಗೆ ಪ್ರಮುಖವಾಗಿದ್ದು, ಅದರಿಂದ ಆರ್ಥಿಕ ನಷ್ಟ ಹಾಗೂ ಉದ್ಯೋಗಿಗಳಿಗೂ ಕಂಟಕವಾಗುತ್ತವೆ ಎಂದರು. ಐಟಿಸಿ ಲಿಮಿಟೆಡ್‌ನ ಇಂಡಸ್ಟ್ರಿ ಅಫೇರ್ ಉಪಾಧ್ಯಕ್ಷ ಪ್ರದೀಪ್ ದೀಕ್ಷಿತ್, ಅಮೆಜಾನ್ ಇಂಡಿಯಾ ಕಸ್ಟಮರ್ ಟ್ರಸ್ಟ್‌ನ ಸೀನಿಯರ್ ಪಾಲಿಸಿ ಮ್ಯಾನೇಜರ್ ನಿತಿನ್ ಸಲುಜಾ ಹಾಗೂ ಇತರರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.



ರೋಟರಿ ಕೇಂದ್ರದಲ್ಲಿ ನಡೆದ ಇನ್ನರ್ ವ್ಹೀಲ್ ಮೈಸೂರು ಉತ್ತರ ಪದಗ್ರಹಣ ಸಮಾರಂಭದಲ್ಲಿ ನೂತನ ಪದಾಧಿಕಾರಿಗಳಿಗೆ ಪುಷ್ಪ ಗುರುರಾಜ್ ಪದವಿ ಪ್ರದಾನ ಮಾಡಿದರು. ನೂತನ ತಂಡದ ರಜನಿಸ್ವಾಮಿ (ಅಧ್ಯಕ್ಷೆ), ಸುಮನ ನಟೇಶ್(ಕಾರ್ಯದರ್ಶಿ), ಅಶ್ವಿನಿ ಪ್ರಭು (ಉಪಾಧ್ಯಕ್ಷರು), ಪುಷ್ಪಲತ (ಸಂಪಾದಕಿ), ಪ್ರೇಮಾಸ್ವಾಮಿ (ಖಜಾಂಚಿ), ಚಿತ್ರ ಸುಬ್ಬಯ್ಯ (ಐಎಸ್‌ಒ), ಸದಸ್ಯರಾಗಿ ಡಾ.ವಿಮಲಾ ರಾಧಕೃಷ್ಣ ಸುಧಾ ಹರೀಶ್, ನಂದಿನಿ ಪ್ರಭು, ಸುಧಾ ಮಲ್ಲೇಶ್, ಇಂದುಮತಿ ಕುಮಾರಸ್ವಾಮಿ ಪದವಿ ಸ್ವೀಕರಿಸಿದರು.

ಶಾರದಾ ಸುತ, ಸುತೆ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು, ಜು.31– ಮೈಸೂರಿನ ವಿನೂತನ ಸಂಸ್ಥೆಯು 2022ರ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಂದ ಶಾರದಾ ಸುತ, ಸುತೆ ಪ್ರಶಸ್ತಿಗೆ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಆ.10 ಅಂತಿಮ ದಿನವಾಗಿರುತ್ತದೆ. ಮಾಹಿತಿಗೆ ಮೊ. 93422 41291 ಸಂಪರ್ಕಿಸಬಹುದು.


ಪಿಹೆಚ್.ಡಿ ಪದವಿ



ಮೈಸೂರು,ಜು.31–ಡಾ.ಸಿ.ರಾಮಸ್ವಾಮಿ ಅವರ ಮಾರ್ಗದರ್ಶನದಲ್ಲಿ ಎಸ್.ರುಕ್ಮಿಣಿ ಮನೋವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸೌದಿ ಅರೇಬಿಯಾದಲ್ಲಿ 8 ಸಾವಿರ ವರ್ಷಗಳ ಪುರಾತನ ದೇವಾಲಯ!

● ರಿಯಾದ್‌ನ ನೈಋತ್ಯ ಭಾಗದಲ್ಲಿ ಉತ್ಖನನದ ವೇಳೆ ಪತ್ತೆ ● ಹೊಸ ತಂತ್ರಜ್ಞಾನದ ಯಂತ್ರಗಳೊಂದಿಗೆ ಧಾರ್ಮಿಕ ಕೇಂದ್ರವನ್ನು ಪತ್ತೆ ಹಚ್ಚಲಾಗಿದೆ



ರಿಯಾದ್: ಸೌದಿ ಅರೇಬಿಯಾದಲ್ಲಿ ಸುಮಾರು 8000 ವರ್ಷಗಳಷ್ಟು ಹಳೆಯದಾದ ದೇವಾಲಯ ಪತ್ತೆಯಾಗಿದೆ. ರಿಯಾದ್‌ನ ನೈಋತ್ಯ ಭಾಗದಲ್ಲಿರುವ ಕರಾವಳಿ ನಗರದ ಉತ್ಖನನದಲ್ಲಿ ಈ ಐತಿಹಾಸಿಕ ದೇವಾಲಯದ ಶಾಸನಗಳು ಸೇರಿ ಅನೇಕ ಶಾಸನಗಳು ಕಂಡುಬಂದಿವೆ. ಸೌದಿ ಅರೇಬಿಯಾದ ಪುರಾತತ್ವ ಶಾಸ್ತ್ರಜ್ಞರ ತಂಡವು ಹೊಸ ತಂತ್ರಜ್ಞಾನದ ಯಂತ್ರಗಳೊಂದಿಗೆ ಅಲ್–ಫಾವ್ ಎಂಬ ಸ್ಥಳದಲ್ಲಿ ಈ ಧಾರ್ಮಿಕ ಕೇಂದ್ರವನ್ನು ಪತ್ತೆಹಚ್ಚಿದೆ.

ಈ ಸಂಶೋಧನೆಯಲ್ಲಿ ದೊರೆತ ಅವಶೇಷಗಳನ್ನು ಉನ್ನತ ಅಧ್ಯಯನಕ್ಕಾಗಿ ಕಳುಹಿಸಲಾಗಿದೆ. ಪ್ರಾಥಮಿಕ ಮಾಹಿತಿಯ ಪ್ರಕಾರ, ಈ ಸಂಶೋಧನೆಯಲ್ಲಿ ಉತ್ತಮ ಗುಣಮಟ್ಟದ ವೈಮಾನಿಕ ಛಾಯಾಗ್ರಹಣ, ನಿಯಂತ್ರಣ ಬಿಂದುಗಳೊಂದಿಗೆ ಡ್ರೋನ್ ದೃಶ್ಯಗಳು, ರಿಮೋಟ್ ಸೆನ್ಸಿಂಗ್, ಲೇಸರ್ ಸೆನ್ಸಿಂಗ್ ಮತ್ತು ಇತರ ಹಲವು ಉಪಕರಣಗಳನ್ನು ಬಳಸಲಾಗಿದೆ.

'ಸೌದಿ ಗೆಜೆಟ್'ನಲ್ಲಿ ಪ್ರಕಟವಾದ ವರದಿಯ ಪ್ರಕಾರ, ಅಲ್–ಫಾದ ಎಂಬ ಈ ಪ್ರಮುಖ ಪ್ರದೇಶವು ಕಳೆದ 40 ವರ್ಷಗಳಿಂದ ಪುರಾತತ್ವ ಇಲಾಖೆ ಜನರಿಗೆ ಹಾಟ್ ಸ್ಪಾಟ್ ಆಗಿದೆ. ಸಮೀಕ್ಷೆಯ ಸ್ಥಳದಲ್ಲಿ ಹಲವಾರು ಆವಿಷ್ಕಾರಗಳು ಕಂಡುಬಂದಿವೆ. ಅದರಲ್ಲೂ ಬಲಿಪೀಠದ ಭಾಗಗಳ ಅವಶೇಷಗಳು ಪತ್ತೆಯಾಗಿದ್ದು, ಅದು ಹೆಚ್ಚು ಆಕರ್ಷಣೀಯವಾಗಿದೆ. ಈ ಕುರುಹುಗಳು ಇಲ್ಲಿ ಜನರು ವಾಸಿಸುತ್ತಿದ್ದರು ಎಂದು ತೋರಿಸುತ್ತದೆ.

ಅವರ ಜೀವನ ಆಚರಣೆಗಳಲ್ಲಿ ಪೂಜೆ ಮತ್ತು ಯಾಗವು ಹೆಚ್ಚಿನ ಪ್ರಾಮುಖ್ಯತೆಯನ್ನು ಹೊಂದಿರಬೇಕು. ಈ ದೇವಾಲಯದ ಹೆಸರನ್ನು 'ರಾಕ್–ಕಟ್' ದೇವಾಲಯ ಎಂದು ಹೇಳಲಾಗುತ್ತದೆ. ಇದು ತುವೈಕ್ ಪರ್ವತದ ಬದಿಯಲ್ಲಿದೆ. ಇದನ್ನು ಈಗ 'ಅಲ್–ಫಾವ್' ಎಂದು ಕರೆಯಲಾಗುತ್ತದೆ. ಇಲ್ಲಿಯವರೆಗಿನ ಫಲಿತಾಂಶಗಳ ಪ್ರಕಾರ, ಅಲ್–ಫಾದ ಜನರು ತುಂಬಾ ಧಾರ್ಮಿಕರಾಗಿದ್ದರು. ಉತ್ಖನನದಲ್ಲಿ ಒಂದು ಶಾಸನವು ಕಂಡುಬಂದಿದ್ದು, ಅದರಲ್ಲಿ ಅಲ್–ಫಾ, ಕಹಲ್ ದೇವತೆಯ ಅಸ್ತಿತ್ವ ದೃಢವಾಗಿದೆ ಎಂದು ಸಂಶೋಧಕರು ತಿಳಿಸಿದ್ದಾರೆ.

ಈ ಸ್ಥಳದಲ್ಲಿ ಪ್ರಾಚೀನ ದೊಡ್ಡ ನಗರವನ್ನು ಕಂಡುಹಿಡಿಯಲಾಗಿದೆ. ಅದರ ಮೇಲೆ ಕೆಲವು ಗೋಪುರಗಳನ್ನು ನಿರ್ಮಿಸಲಾಗಿದೆ ಈ ಸಂಶೋಧನೆಯ ಸಂದರ್ಭದಲ್ಲಿ, ವಿಶ್ವದ ಅತ್ಯಂತ ಒಣ ಭೂಮಿ ಮತ್ತು ಕಠಿಣ ಮರುಭೂಮಿ ಪರಿಸರದಲ್ಲಿ ಕಾಲುವೆಗಳು, ಜಲಮೂಲಗಳು ಮತ್ತು ನೂರಾರು ಹೊಂಡಗಳನ್ನು ಒಳಗೊಂಡಂತೆ ಸಂಕೀರ್ಣವಾದ ನೀರಾವರಿ ವ್ಯವಸ್ಥೆಗಳನ್ನು ಪ್ರದೇಶದಲ್ಲಿ ಬಹಿರಂಗಪಡಿಸಲಾಗಿದೆ. ಇಲ್ಲಿ ಸಾವಿರಾರು ವರ್ಷಗಳ ಹಿಂದಿನಿಂದಲೂ ಈ ಪ್ರದೇಶದಲ್ಲಿ ದೇವಾಲಯ ಮತ್ತು ಮೂರ್ತಿ ಪೂಜೆಯ ಸಂಸ್ಕೃತಿ ಇತ್ತು ಎಂಬುದು ಸಾಬೀತಾಗಿದೆ. ಇಲ್ಲಿನ ಉತ್ಖನನದಲ್ಲಿ ದೊರೆತ ಶಾಸನಗಳ ಅಧ್ಯಯನ ನಡೆಯುತ್ತಿದೆ. ಹೊಸ ತಂತ್ರಜ್ಞಾನವು ನವಶಿಲಾಯುಗದ ಮಾನವ ವಸಾಹತುಗಳ ಅವಶೇಷಗಳ ಬಗ್ಗೆ ಸಾಕಷ್ಟು ಮಾಹಿತಿಯನ್ನು ಬಹಿರಂಗಪಡಿಸಿದೆ. ಈ ಸ್ಥಳದಲ್ಲಿ ಹೊಸ ಸಂಶೋಧನೆಯ ಸಮಯದಲ್ಲಿ, 2,807 ಸಮಾಧಿಗಳು ಈ ದೇವಾಲಯಕ್ಕೆ ಬಹಳ ಹತ್ತಿರದಲ್ಲಿವೆ.

ಒಂದನೇ ಪುಟದಿಂದ

32 ಮಸೂದೆಗಳು ಬಾಕಿ

ರಾಜ್ಯಸಭೆ ಕೇವಲ 11 ಗಂಟೆಗಳು ಕೆಲಸ ಮಾಡಿದೆ. ದಿನಂಪ್ರತಿ ಉಭಯ ಸದನಗಳು 6 ಗಂಟೆಗಳ ಕಾಲ ಕಾರ್ಯನಿರ್ವಹಿಸುವುದು ನಿಗದಿಯಾಗಿತ್ತು. ಗದ್ದಲದ ಹಿನ್ನೆಲೆಯಲ್ಲಿ ಲೋಕಸಭೆಯ ನಾಲ್ವರು ಸಂಸದರು ಹಾಗೂ 23 ರಾಜ್ಯಸಭೆ ಸದಸ್ಯರನ್ನು ಅಮಾನತುಗೊಳಿಸಲಾಗಿತ್ತು. ಇನ್ನು ರಾಷ್ಟ್ರಪತಿಗಳ ವಿಷಯದಲ್ಲಿ ವಿಪಕ್ಷಗಳ ಹೇಳಿಕೆಗೆ ಸರ್ಕಾರವೂ ತೀವ್ರ ವಾಗ್ದಾಳಿ ನಡೆಸಿತ್ತು. ಈ ಗದ್ದಲಗಳ ನಡುವೆಯೇ ಸರ್ಕಾರ ಲೋಕಸಭೆಯಲ್ಲಿ ಡೋಪಿಂಗ್ ವಿರೋಧಿ ಮಸೂದೆ ಮತ್ತು ಕೌಟುಂಬಿಕ ನ್ಯಾಯಾಲಯದ ಮಸೂದೆಯನ್ನು ಅಂಗೀಕಾರ ಪಡೆದಿದೆ. ಈಗ ಸರ್ಕಾರ ಬೆಲೆ ಏರಿಕೆ ವಿಷಯ ಚರ್ಚಿಸಲು ಸಿದ್ಧವಿದೆ ಎನ್ನುತ್ತಿದ್ದಾರೆ ಆದರೆ ವಿಪಕ್ಷಗಳು ಮಾತ್ರ ಚರ್ಚೆಗೆ ಸಿದ್ಧವಿರುವಂತೆ ತೋರುತ್ತಿಲ್ಲ ಪರಿಣಾಮ ಉಳಿದ ಅವಧಿಗೂ ಸಂಸತ್ ಸುಗಮವಾಗಿ ಕಾರ್ಯನಿರ್ವಹಿಸುವ ಲಕ್ಷಣಗಳು ಕಾಣಿಸುತ್ತಿಲ್ಲ. ಬೆಲೆ ಏರಿಕೆ ವಿರೋಧಿಸಿ ಆಗಸ್ಟ್ 5 ರಂದು ಕಾಂಗ್ರೆಸ್ ರಾಷ್ಟ್ರವ್ಯಾಪಿ ಪ್ರತಿಭಟನೆಗೆ ಕರೆ ನೀಡಿದ್ದು, ಪ್ರಧಾನಿ ನಿವಾಸಕ್ಕೆ ಮುತ್ತಿಗೆ ಹಾಕುವ ಯೋಜನೆಯನ್ನೂ ಹೊಂದಿದೆ.

ಒಳಚರಂಡಿ ಕಣ್ಗಾವಲು

ಕಣ್ಗಾವಲು ಪ್ರಾರಂಭಿಸಲು ಟಿಎಸಿ ಶಿಫಾರಸು ಮಾಡಿದೆ. BMRCIಯ ವೈರಸ್ ಸಂಶೋಧನೆ ಮತ್ತು ರೋಗನಿರ್ಣಯ ಪ್ರಯೋಗಾಲಯದಿಂದ ತಾಂತ್ರಿಕ ಬೆಂಬಲ ದೊಂದಿಗೆ ಪ್ರಸ್ತುತ ಬೆಂಗಳೂರು ನಗರದಲ್ಲಿ ಕೋವಿಡ್–19ಗಾಗಿ ಒಳಚರಂಡಿ ಕಣ್ಗಾವಲು ನಡೆಸುತ್ತಿರುವ ಸಾಂಕ್ರಾಮಿಕ ರೋಗ ಸಂಶೋಧನಾ ಪ್ರತಿಷ್ಠಾನದ (IDRFRF) ಮೂಲಕ ಇದನ್ನು ಮಾಡಬೇಕು ಎಂದು ಹೇಳಿದೆ. ಜುಲೈನಲ್ಲಿ, IDRF KIA, ಅಪಾರ್ಟ್ಮೆಂಟ್ ಸಂಕೀರ್ಣಗಳು ಮತ್ತು ನಗರದ ಇತರೆಡೆಗಳಲ್ಲಿ 10 ಸೈಟ್‌ಗಳಲ್ಲಿ 56 ಮಾದರಿಗಳನ್ನು ಪರೀಕ್ಷಿಸಿತ್ತು.ಈ ಪೈಕಿ 46 ಮಾದರಿಗಳಲ್ಲಿ SARS-CoV-2 ಅನ್ನು ಪತ್ತೆಹಚ್ಚಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಕಾಲೇಜುಗಳ ವೈದ್ಯಕೀಯ ಮತ್ತು ಅರೆವೈದ್ಯಕೀಯ ಸಿಬ್ಬಂದಿಗಳಿಗೆ ಮಂಗನ ಕಾಯಿಲೆಯ ನಿರ್ವಹಣೆ ಕುರಿತು RGUHSನಿಂದ ಶೀಘ್ರದಲ್ಲೇ ತರಬೇತಿ ಕಾರ್ಯಕ್ರಮವನ್ನು ನಡೆಸಲು TAC ಆರೋಗ್ಯ ಇಲಾಖೆಗೆ ಶಿಫಾರಸು ಮಾಡಿದೆ.

ವೀರಶೈವ–ಲಿಂಗಾಯಿತ ಸಮುದಾಯವನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸಲು ಆಗ್ರಹಿಸಿ

ಇಂದು ಮಡಿಕೇರಿಯಲ್ಲಿ ಮೆರವಣಿಗೆ



ಕುಶಾಲನಗರ, ಜು.31– ಕೇಂದ್ರದ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಗೆ ವೀರಶೈವ –ಲಿಂಗಾಯಿತ ಸಮುದಾಯವನ್ನು ಸೇರ್ಪಡೆಗೊಳಿಸುವಂತೆ ಒತ್ತಾಯಿಸಿ ಅಖಿಲ ಭಾರತ ವೀರಶೈವ–ಲಿಂಗಾಯಿತ ಮಹಾಸಭಾ ಕೊಡಗು ಜಿಲ್ಲಾ ಘಟಕದ ವತಿಯಿಂದ ನಾಳೆ (ಸೋಮವಾರ) ಬೆಳಗ್ಗೆ 11 ಗಂಟೆಗೆ ಮಡಿಕೇರಿಯಲ್ಲಿ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ಜಿಲ್ಲಾ ಘಟಕದ ಅಧ್ಯಕ್ಷ ಎಚ್.ವಿ.ಶಿವಪ್ಪ ತಿಳಿಸಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕರ್ನಾಟಕ ರಾಜ್ಯದಲ್ಲಿ ಕಳೆದ 60 ವರ್ಷಗಳಿಂದ ವೀರಶೈವ–ಲಿಂಗಾಯಿತ ಸಮುದಾಯವು ರಾಜ್ಯದ ಇತರೇ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿದ್ದರೂ ಈ ವರ್ಗವನ್ನು ಕೇಂದ್ರದ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಗೆ ಸೇರಿಸದೇ ಇರುವುದು ದುರದೃಷ್ಟಕರ ಸಂಗತಿಯಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಹಿನ್ನೆಲೆಯಲ್ಲಿ ಸೋಮವಾರ ಮಡಿಕೇರಿಯ ಗಾಂಧಿ ಮೈದಾನದಲ್ಲಿ ಐದು ತಾಲೂಕಿನಿಂದ ಸುಮಾರು 200 ಮಂದಿ ಸಮುದಾಯ ಬಾಂಧವರು ಮಹಾಸಭಾದ ಗೌರವಾಧ್ಯಕ್ಷ ಕೊಡ್ಲಿಪೇಟೆ ಕಿರಿಕೊಡ್ಲಿ ಮಠದ ಶ್ರೀ ಸದಾಶಿವ ಸ್ವಾಮೀಜಿ ಮತ್ತು ಕಲ್ಲಮಠದ ಮಹಾಂತ ಸ್ವಾಮೀಜಿ, ವಿರಾಜಪೇಟೆ ಅರಕೇರಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಹಾಗೂ ಮಹಾಸಭಾದ ರಾಜ್ಯ ಕಾರ್ಯದರ್ಶಿ ರಾಜೇಶ್ವರಿ ನಾಗರಾಜು ನೇತೃತ್ವದಲ್ಲಿ ಶಾಂತಿಯುತವಾಗಿ ಮೆರವಣಿಗೆ ಮೂಲಕ ಜಿಲ್ಲಾಧಿಕಾರಿಗಳ ಕಚೇರಿಗೆ ತೆರಳಿ ಜಿಲ್ಲಾಧಿಕಾರಿ ಡಾ.ಸತೀಶ್ ಅವರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಪತ್ರ ಸಲ್ಲಿಸಿ ಒಬಿಸಿ ಪಟ್ಟಿಗೆ ಸೇರಿಸುವಂತೆ ಒತ್ತಾಯಿಸಲಾಗುವುದು ಎಂದರು.

ಕೇಂದ್ರದ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಲ್ಲಿ ಸೇರಿರುವ ತಿಗಳ, ಈಡಿಗ, ಒಕ್ಕಲಿಗ, ದೇವಾಂಗ ಮತ್ತು ಬಲಿಜ ಸಮುದಾಯಗಳಿಗಿಂತ ವೀರಶೈವ–ಲಿಂಗಾಯಿತ ಸಮುದಾಯವು ಹಿಂದುಳಿದಿದ್ದರೂ ಕೇಂದ್ರದ ಒಬಿಸಿ ಪಟ್ಟಿಯಿಂದ ಹೊರಗಿಟ್ಟಿರುವುದಕ್ಕೆ ಯಾವುದೇ ಕಾರಣಗಳನ್ನು ನೀಡಿಲ್ಲ. ಸಮುದಾಯ ಪ್ರತಿಭಾವಂತರು ಅನೇಕ ದಶಕಗಳಿಂದ ಹತ್ತಾರು ಅವಕಾಶಗಳಿಂದ ವಂಚಿತರಾಗುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಕಾರ್ಯಕ್ರಮಕ್ಕೆ ಸಮಾಜದ ಎಲ್ಲ ಮುಖಂಡರು ಸಹಸ್ರಾರು ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ಈ ಮೂಲಕ ಮನವಿ ಮಾಡುತ್ತೇನೆ ಎಂದರು. ಗೋಷ್ಠಿಯಲ್ಲಿ ವೀರಶೈವ ಮಹಾಸಭಾದ ಕೊಡಗು ಘಟಕದ ಪ್ರಧಾನ ಕಾರ್ಯದರ್ಶಿ ಶಾಂಭಶಿವಮೂರ್ತಿ, ಖಜಾಂಚಿ ಉದಯಕುಮಾರ್ ಇದ್ದರು.

ತೆರಮೆಕಾಡು ಪೈಸಾರಿ ತೆರವಿಗೆ ಭಾರೀ ವಿರೋಧ

ಕಾರ್ಯಾಚರಣೆ ನಿಲ್ಲಿಸದಿದ್ದರೆ ಕಾನೂನು ಹೋರಾಟ: ಹೈಕೋರ್ಟ್ ಹಿರಿಯ ವಕೀಲ ಎ.ಎಸ್.ಪೊನ್ನಣ್ಣ ಎಚ್ಚರಿಕೆ



ಪೊನ್ನಪೇಟೆ, ಜು.31– ವಿರಾಜಪೇಟೆ ಸಮೀಪದ ಆರ್ಜಿ ಗ್ರಾಪಂ ವ್ಯಾಪ್ತಿಯ ತೆರಮೆಕಾಡು ಪೈಸಾರಿ ತೆರವು ಕಾರ್ಯಾಚರಣೆಯನ್ನು ತಾಲೂಕು ಆಡಳಿತ ಕೂಡಲೇ ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿರುವ ಕೆಪಿಸಿಸಿ ಕಾನೂನು ಮತ್ತು ಮಾನವ ಹಕ್ಕು ಘಟಕದ ಅಧ್ಯಕ್ಷ ಹಾಗೂ ಹೈಕೋರ್ಟ್ ಹಿರಿಯ ವಕೀಲ ಎ.ಎಸ್.ಪೊನ್ನಣ್ಣ ಜನ ವಸತಿ ಪ್ರದೇಶದಲ್ಲಿರುವವರನ್ನು ಒಕ್ಕಲೆಬ್ಬಿಸುವ ಹುನ್ನಾರವಿದು ಎಂದು ಆರೋಪಿಸಿದ್ದಾರೆ.

ಸ್ಥಳೀಯ ನಿವಾಸಿಗಳ ಕೋರಿಕೆಯ ಮೇರೆಗೆ ತೆರಮೆಕಾಡು ಕಾರ್ಯಾಚರಣೆ ಸ್ಥಳಕ್ಕೆ ಭೇಟಿ ನೀಡಿ ಸ್ಥಳೀಯರ ಅಹವಾಲುಗಳನ್ನು ಆಲಿಸಿದ ಪೊನ್ನಣ್ಣ, ಒಂದು ವೇಳೆ ತಾಲೂಕು ಆಡಳಿತ ಒತ್ತಡಕ್ಕೆ ಮಣಿದು ಮತ್ತೆ ಕಾರ್ಯಾಚರಣೆ ಮುಂದುವರಿಸಿದರೆ ಕಾನೂನು ಹೋರಾಟ ಅನಿವಾರ್ಯವೆಂದು ಎಚ್ಚರಿಕೆ ನೀಡಿದ್ದಾರೆ.

ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ಈ ಕಾರ್ಯಾಚರಣೆ ಕಾನೂನಾತ್ಮಕವಾಗಿಲ್ಲ ಎಂಬುದು ತಿಳಿದು ಬರುತ್ತದೆ. ತೆರವು ಮಾಡುವ ಕುರಿತು ಯಾವುದೇ ಸ್ಪಷ್ಟ ಆದೇಶವಿಲ್ಲ ಹೀಗಿರುವಾಗ ತಾಲೂಕು ಆಡಳಿತ ಈ ಕಾರ್ಯಾಚರಣೆಗೆ ಮುಂದಾಗಿರುವುದು ಸರಿಯಲ್ಲ. ಯಾವುದೇ ಕಾನೂನು ಕ್ರಮಗಳನ್ನು ಪಾಲಿಸದೆ ಏಕಾಏಕಿ ತೆರವುಗೊಳಿಸುವ ಕಾರ್ಯಾಚರಣೆಯ ಹಿಂದಿರುವ ಉದ್ದೇಶ ನಿಗೂಢವಾಗಿದೆ. ಇದೀಗ ಈ ಪ್ರದೇಶದಲ್ಲಿ ನೂರಾರು ಸಂಖ್ಯೆಯ ಬಡಜನರು ಮನೆ ನಿರ್ಮಿಸಿ ವಾಸಿಸುತ್ತಿದ್ದು, ಅವರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗಬಾರದು. ಇವರಿಗೆ ಕಾನೂನು ಹೋರಾಟದ ಮೂಲಕ ರಕ್ಷಣೆ ನೀಡಲು ಬದ್ಧರಾಗಿರುವುದಾಗಿ ಎ.ಎಸ್. ಪೊನ್ನಣ್ಣ ಅವರು ಇದೇ ವೇಳೆ ತಿಳಿಸಿದರು.

ಈ ಪ್ರದೇಶ ನಿವಾಸಿಗಳನ್ನು ತೆರವುಗೊಳಿಸಬೇಕೆಂಬ ಯಾವುದೇ ಆದೇಶ ಮೇಲ್ನೋಟಕ್ಕೆ ಕಂಡು ಬರುತ್ತಿಲ್ಲ. ಆದರೂ ಈ ಕುರಿತು ಮತ್ತಷ್ಟು ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಲಾಗುವುದು. ಈ ಪ್ರಕರಣವನ್ನು ಯಾವ ರೀತಿಯಾಗಿ ನ್ಯಾಯಾಲಯದ ಮುಂದೆ ತರಬಹುದು ಎಂಬುದರ ಕುರಿತು ಚಿಂತನೆ ನಡೆಸಿ ಶೀಘ್ರದಲ್ಲೇ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು. ನ್ಯಾಯಾಂಗ ಹೋರಾಟದಿಂದ ಸ್ಥಳೀಯರಿಗೆ ಖಂಡಿತವಾಗಿ ನ್ಯಾಯ ದೊರಕುವ ವಿಶ್ವಾಸವಿದೆ ಎಂದು ಹೇಳಿದಲ್ಲದೆ, ನ್ಯಾಯ ಪಡೆಯುವುದಕ್ಕಾಗಿ ಅಂತಃಕಲಹಗಳು, ಗುಂಪುಗಾರಿಕೆ ಮತ್ತು ಸಂಘಟನಾತ್ಮಕ ಭಿನ್ನಾಭಿಪ್ರಾಯಗಳನ್ನು ಮರೆತು ಒಗ್ಗಟ್ಟಿನಿಂದ ಸಂಘಟಿತರಾಗುವಂತೆ ಸ್ಥಳೀಯರಿಗೆ ಸಲಹೆ ನೀಡಿದರು.

ಈ ಸಂದರ್ಭ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ವಿರಾಜಪೇಟೆ ನಗರ ಕಾಂಗ್ರೆಸ್ ಅಧ್ಯಕ್ಷ ಎಂ.ಪಿ. ತಿಮ್ಮಯ್ಯ, ಜಿ.ಪಂ. ಮಾಜಿ ಸದಸ್ಯ ಬಿ.ಎನ್ ಪ್ರಥ್ಯು, ವಕೀಲ ಬೋಪಣ್ಣ ದಸಂಸ ಮುಖಂಡ ಶಿವಣ್ಣ, ನಾಗೇಶ್, ಗಾಯತ್ರಿ, ಸ್ಥಳೀಯ ಮುಖಂಡರಾದ ಗಿರಿ, ಅನಿಲ್ ಉಪಸ್ಥಿತರಿದ್ದರು.

ಪೇರೂರು ಸುತ್ತ–ಮುತ್ತ ಕಾಡಾನೆಗಳ ಹಾವಳಿ

ನಾಪೋಕ್ಲು, ಜು.31– ಸಮೀಪದ ಪೇರೂರು ಸುತ್ತಮುತ್ತಲಿನ ಭಾಗದಲ್ಲಿ ನಿರಂತರವಾಗಿರುವ ಕಾಡಾನೆ ಹಾವಳಿಯಿಂದ ಮಕ್ಕಳೂ ಹಾಗೂ ವಯೋವೃದ್ಧರು ಭಯದಿಂದ ಬದುಕುತ್ತಿದ್ದು ಗ್ರಾಮದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿದೆ.

ಬೆಳೆಗಾರರು ಕಷ್ಟಪಟ್ಟು ಬೆಳೆಸಿದ ಬೆಳೆಗಳನ್ನು ಆನೆಗಳು ಮನಸೋ ಇಚ್ಛೆ ನಾಶಪಡಿಸುತ್ತಿದ್ದು ಬೆಳೆಗಾರರು ನೊಂದು, ಆತಂಕದಲ್ಲಿ ಜೀವನ ಮಾಡುವಂತಾಗಿದೆ. ಅರಣ್ಯ ಇಲಾಖೆ, ಆನೆ ಹಾವಳಿ ತಡೆಗೆ ಮುಂದಾಗದಿದ್ದಲ್ಲಿ ಮುಂದಿನ ದಿನಗಳಲ್ಲಿ ಇತರ ಸಂಘಟನೆಗಳೊಂದಿಗೆ ಸೇರಿ ಉಗ್ರ ಹೋರಾಟ ರೂಪಿಸಲಾಗುವುದು ಎಂದು ಬೆಳೆಗಾರರ ಒಕ್ಕೂಟದ ಅಧ್ಯಕ್ಷ ಅಪ್ಪಚೀರ ನಂದಕುಮಾರ್ ಪೇರೂರು ಇಗ್ಗುತ್ತಪ್ಪ ದೇವಸ್ಥಾನದಲ್ಲಿ ಕರೆಯಲಾಗಿದ್ದ ಪೇರೂರು ಬೆಳೆಗಾರರ ಒಕ್ಕೂಟದ ಸಭೆಯಲ್ಲಿ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯ ಮಚ್ಚುರ ರವೀಂದ್ರ ಗ್ರಾಮ ಪಂಚಾಯತ್ ನಿಕಟಪೂರ್ವ ಸದಸ್ಯ ಚಂಗೇಟಿರ ಸೋಮಣ್ಣ, ಪೇರೂರು ದವಸ ಭಂಡಾರದ ಅಧ್ಯಕ್ಷ ಮೂವೇರ ಪೆಮ್ಮಯ್ಯ ಪೇರೂರು ಕೈಲ್ ಪೊಳ್ದ್ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷರಾದ ಬೊಟ್ಟೋಳಂಡ ರವಿ ಕರುಂಬಯ್ಯ, ಮೂವೇರ ಕಾವೇರಪ್ಪ ಮಾತನಾಡಿ, ಕಾಡು ಪ್ರಾಣಿಗಳಿಂದ ಆಗುತ್ತಿರುವ ತೊಂದರೆಗಳ ಬಗ್ಗೆ ವಿವರಿಸಿದರು.

ಪೊನ್ನಡ್ ರೈತ ಉತ್ಪಾದಕ ಸಂಸ್ಥೆಯ ನಿರ್ದೇಶಕ ಮಚ್ಚುರ ಯದುಕುಮಾರ್, ದವಸ ಭಂಡಾರ ನಿರ್ದೇಶಕ ಪಾಲೆಯಡ ದೇವಯ್ಯ, ಇಗ್ಗುತ್ತಪ್ಪ ದೇವಸ್ಥಾನ ಸಮಿತಿ ತಾಪಂಡ ಗಣೇಶ್, ತೆಕ್ಕಡ ಬೀಮಯ್ಯ, ಕೊಡಿಯಂಡ ಶಶಿಕಾಂತ್, ತೆಕ್ಕಡ ದೊರೆ ಇತರರು ಭಾಗವಹಿಸಿದ್ದರು.

ಜಿಎಸ್‌ಟಿ ಕೈಬಿಡದಿದ್ದರೆ ಹೋರಾಟ

ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಕೆ



ವಿರಾಜಪೇಟೆ, ಜು.31– ಕೇಂದ್ರ ಸರ್ಕಾರ ಆಹಾರ ಪದಾರ್ಥಗಳ ಮೇಲೆ ಜಿಎಸ್‌ಟಿ ವಿಧಿಸಿರುವುದರ ಜೊತೆಗೆ ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ದರವನ್ನು ನಿರಂತರವಾಗಿ ಏರಿಕೆ ಮಾಡಿ ಸಾರ್ವಜನಿಕರನ್ನು ಲೂಟಿ ಮಾಡಲು ಹೊರಟಿರುವುದನ್ನು ರದ್ದುಗೊಳಿಸದಿದ್ದರೆ ಸಿಪಿಐಎಂಎಲ್ ಲಿಬರೇಷನ್ ಸಂಘಟನೆಯಿಂದ ಹೋರಾಟ ನಡೆಸುವುದಾಗಿ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಎಂ.ಕೆ.ಮೋಹನ್ ನೇತೃತ್ವದಲ್ಲಿ ತಹಶಿಲ್ದಾರ್ ಡಾ. ಆರ್.ಯೋಗನಂದ ಅವರ ಮೂಲಕ ಸರಕಾರಕ್ಕೆ ಮನವಿ ಸಲ್ಲಿಸಿದರು.

ಕಾರ್ಪೊರೇಟ್ ಕಂಪೆನಿಗಳ ಏಜೆಂಟರಂತೆ ವರ್ತಿಸುತ್ತಿರುವ ಕೇಂದ್ರ ಸರ್ಕಾರ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆಯಾಗಿದೆಯೆಂದು ಹೇಳಿ ಬಡ ಕಾರ್ಮಿಕರ ಹೊಟ್ಟೆಯ ಮೇಲೆ ಬರೆ ಎಳೆದಿದೆ. ಬಡ ಜನರು ಕಟ್ಟಿಗೆ ಒಲೆಯಿಂದ ಅಡುಗೆ ಮಾಡುವುದು ಬೇಡ ಎಂದ ಕೇಂದ್ರ ಸರ್ಕಾರ ಉಜ್ವಲ್ ಯೋಜನೆ ಜಾರಿಗೆ ತಂದಿರುವುದಾಗಿ ಹೇಳಿ ಅಡುಗೆ ಅನಿಲ ಬೆಲೆಯನ್ನು 1065 ಕ್ಕೆ ಏರಿಕೆ ಮಾಡಿ ಜನರಿಂದ ಸುಲಿಗೆ ಮಾಡುವ ಮೂಲಕ ಕೇಂದ್ರದ ವೈಫಲ್ಯವನ್ನು ಎತ್ತಿಹಿಡಿದಿದೆ. ಕಳೆದ ಎರಡು ವರ್ಷಗಳಿಂದಲೂ ಕೋವಿಡ್‌ನಿಂದ ಆರ್ಥಿಕ ಸಂಕಷ್ಟಕ್ಕೀಡಾಗಿರುವ ಜನತೆ ಚೇತರಿಸಿ ಕೊಳ್ಳುವ ಮುನ್ನವೇ ಬೆಲೆ ಏರಿಕೆ ಮಾಡಿರುವ ಕೇಂದ್ರದ ಜನವಿರೋಧಿ ನೀತಿಯನ್ನು ಖಂಡಿಸುವುದಾಗಿ ಮೋಹನ್ ಮನವಿಯಲ್ಲಿ ತಿಳಿಸಿದ್ದಾರೆ.

ಮನವಿ ಸಲ್ಲಿಸುವ ಸಂದರ್ಭ ಸಿಪಿಐಎಂಎಲ್ ಲಿಬರೇಷನ್ ಸಂಘಟನೆಯ ವಿರಾಜಪೇಟೆ ಅಧ್ಯಕ್ಷ ಸುಬ್ಬ, ಹಾಗೂ ಗೌರಿ, ಬಸವ, ತೋಲ, ರವಿ, ಇತರರು ಉಪಸ್ಥಿತರಿದ್ದರು.

ಕುಶಾಲನಗರ ವೃತ್ತ ನಿರೀಕ್ಷಕ ಎಂ.ಮಹೇಶ್ ದೇವ್ರು ವರ್ಗಾವಣೆ

ಪ್ರತಿಭಟನೆಗೆ ಮಣಿದ ಸರ್ಕಾರ



ಮಡಿಕೇರಿ,ಜು.31– ಕುಶಾಲನಗರ ವೃತ್ತ ನಿರೀಕ್ಷಕ ಎಂ.ಮಹೇಶ್ ದೇವ್ರು ಅವರನ್ನು ರಾಜ್ಯ ಆಂತರಿಕ ಭದ್ರತಾ ವಿಭಾಗಕ್ಕೆ ವರ್ಗಾವಣೆ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ತೆರವಾದ ಸ್ಥಾನಕ್ಕೆ ಸೋಮವಾರಪೇಟೆ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜೆ. ಮಹೇಶ್ ಅವರನ್ನು ನಿಯುಕ್ತಿಗೊಳಿಸಲಾಗಿದೆ. ಸೋಮವಾರಪೇಟೆಗೆ ಸರ್ಕಲ್ ಇನ್ಸ್‌ಪೆಕ್ಟರ್ ಆಗಿ ರಾಮಚಂದ್ರ ನಾಯಕ್ ಅವರನ್ನು ವರ್ಗಾವಣೆ ಮಾಡಲಾಗಿದೆ. ರಮೇಶ್ ನಾಯಕ್ ಈ ಹಿಂದೆ ಆಂತರಿಕ ಭದ್ರತಾ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಕುಶಾಲನಗರ ವೃತ್ತ ನಿರೀಕ್ಷಕ ಎಂ.ಮಹೇಶ್ ದೇವ್ರು ಅವರನ್ನು ತಕ್ಷಣವೇ ಜಿಲ್ಲೆಯಿಂದ ವರ್ಗಾವಣೆ ಮಾಡುವಂತೆ ಆಗ್ರಹಿಸಿ ಜು.29ರಂದು ಹಿಂದೂಪರ ಸಂಘಟನೆಗಳು ಮಡಿಕೇರಿಯಲ್ಲಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಗೆ ಮುತ್ತಿಗೆ ಹಾಕಿ ಅಹೋರಾತ್ರಿ ಪ್ರತಿಭಟನೆಗೆ ಮುಂದಾಗಿದ್ದವು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್ ವೃತ್ತ ನಿರೀಕ್ಷಕರನ್ನು ವರ್ಗಾವಣೆ ಮಾಡುವುದಾಗಿ ಖಚಿತ ಭರವಸೆ ನೀಡಿದ್ದ ಹಿನ್ನೆಲೆಯಲ್ಲಿ ಅಹೋರಾತ್ರಿ ಪ್ರತಿಭಟನೆಯನ್ನು ಹಿಂಪಡೆ ಯಲಾಗಿತ್ತು. ಇದೀಗ ಸರ್ಕಾರ ಪ್ರತಿಭಟನೆಗೆ ಮಣಿದು ಕುಶಾಲನಗರ ವೃತ್ತ ನಿರೀಕ್ಷಕ ಎಂ. ಮಹೇಶ್ ದೇವ್ರು ಅವರನ್ನು ಸರ್ಕಾರ ವರ್ಗಾವಣೆ ಮಾಡಿದೆ. ಇದರಿಂದ ಪ್ರತಿಭಟನಾಕಾರರಿಗೆ ಗೆಲುವು ಸಿಕ್ಕಿದಂತಾಗಿದೆ.

ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ಸುಂಟಿಕೊಪ್ಪದಲ್ಲಿ ಪ್ರತಿಭಟನೆ



ಸುಂಟಿಕೊಪ್ಪ,ಜು.31– ಇಲ್ಲಿನ ಕನ್ನಡ ವೃತ್ತದಲ್ಲಿ ಸುಂಟಿಕೊಪ್ಪ ಹೋಬಳಿ ಶ್ರೀ ನಾರಾಯಣ ಗುರು ಬಿಲ್ಲವ ಸೇವಾ ಸಂಘದ ವತಿಯಿಂದ ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ಪ್ರತಿಭಟನೆ ನಡೆಸಲಾಯಿತು.

ಹತ್ಯೆ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು. ಶ್ರೀ ನಾರಾಯಣ ಗುರು ಬಿಲ್ಲವ ಸಂಘ ಸಮಾಜ ಮತ್ತು ದೇಯಿಬೈದೇದಿ ಸಂಘದ ಸದಸ್ಯರು ಮಾನವ ಸರಪಳಿ ರಚಿಸಿ ರಸ್ತೆ ತಡೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರಲ್ಲದೇ, ಸರಕಾರ, ಜನಪ್ರತಿನಿಧಿಗಳು, ಸಚಿವರುಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ಇದೇ ಸಂದರ್ಭ ಪ್ರವೀಣ್ ನೆಟ್ಟಾರು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಸಂತಾಪ ಸೂಚಿಸಲಾಯಿತು.

ಬಳಿಕ ಮಾತನಾಡಿದ ಪುತ್ತೂರು ಬಿಲ್ಲವ ಸಮಾಜದ ಖಜಾಂಜಿ ಮಹೇಶ್ ಸಾಲಿಯಾನ್, ಪ್ರವೀಣ್ ಹತ್ಯೆಯ ಆರೋಪಿಗಳನ್ನು ಮಂಪರು ಪರೀಕ್ಷೆಗೆ ಒಳಪಡಿಸಿ ಹತ್ಯೆಯ ಹಿಂದಿನ ಜಾಲವನ್ನು ಬಯಲಿಗೆಳೆಯಬೇಕೆಂದು ಆಗ್ರಹಿಸಿದರು. ವೈಯಕ್ತಿಕ ನೆಲೆಯಲ್ಲಿ ಪ್ರವೀಣ್ ನೆಟ್ಟಾರು ಅವರನ್ನು ಬಹು ವರ್ಷಗಳಿಂದ ಒಡನಾಡಿಯಾಗಿದ್ದರು. ತಮಗೆ ವಹಿಸಿದ ಜವಾಬ್ದಾರಿಯನ್ನು ಅತ್ಯಂತ ಪ್ರಾಮಾಣಿಕತೆ ನಿಷ್ಠೆಯಿಂದ ಮಾಡುತ್ತಿದ್ದ ಪ್ರವೀಣ್ ಅವರನ್ನು ಕಳೆದುಕೊಂಡು ಬಿಲ್ಲವ ಸಮಾಜ ಅನಾಥವಾಗಿದೆ ಎಂದು ವಿಷಾದಿಸಿದರು. ಪ್ರವೀಣ್ ಅವರ ಕುಟುಂಬಕ್ಕೆ 1 ಕೋಟಿ ರೂ. ಪರಿಹಾರ ಮತ್ತು ಪ್ರವೀಣ್ ಪತ್ನಿಗೆ ಸೂಕ್ತ ಸರಕಾರಿ ಉದ್ಯೋಗ ನೀಡಬೇಕೆಂದು ಆಗ್ರಹಿಸಿದರು. ಬಳಿಕ ಸುಂಟಿಕೊಪ್ಪ ಆರಕ್ಷಕ ಉಪನಿರೀಕ್ಷಕರ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಾಯಿತು.

ಬಿಲ್ಲವ ಸಂಘದ ಅಧ್ಯಕ್ಷ ಮಣಿ ಮುಖೇಶ್, ಕಾರ್ಯದರ್ಶಿ ವೆಂಕಪ್ಪ, ದೇಯಿಬೈದೇದಿ ಸಂಘದ ಅಧ್ಯಕ್ಷೆ ಮಧು ನಾಗಪ್ಪ, ಕಾರ್ಯದರ್ಶಿ ಮಹಿಮಾ ಸತ್ಯ, ಬಿಲ್ಲವ ವಿದ್ಯಾರ್ಥಿ ಪರಿಷತ್ ಅಧ್ಯಕ್ಷ ಪ್ರೀತಮ್, ಕಾರ್ಯದರ್ಶಿ ಯಕ್ಷಿತ್, ರಮೇಶ್ ಕರಾವಳಿ, ಪ್ರಶಾಂತ್, ಹರೀಶ್ ಕೊಟ್ಯಾನ್, ಇಂದಿರಾ ಮೊಣ್ಣಪ್ಪ, ಇಂದಿರಾ ರಮೇಶ್, ಮಂಜು, ಪದಾಧಿಕಾರಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸೇವಾ ಕಾರ್ಯಗಳೊಂದಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ್ ಹುಟ್ಟುಹಬ್ಬ ಆಚರಣೆ



ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಹುಟ್ಟುಹಬ್ಬ ಹಿನ್ನೆಲೆ ಚಾ.ನಗರದಲ್ಲಿ ನಡೆದ ರಕ್ತದಾನ ಶಿಬಿರ.

ಚಾಮರಾಜನಗರ, ಜು.31–ವಿವಿಧ ಸೇವಾ ಕಾರ್ಯಗಳ ಮೂಲಕ ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ 61ನೇ ಹುಟ್ಟುಹಬ್ಬವನ್ನು ಜಿಲ್ಲಾದ್ಯಂತ ವಿಭಿನ್ನವಾಗಿ ಆಚರಿಸಲಾಯಿತು.

ನಗರದ ಮಾಂಗಲ್ಯ ಕನ್ವೆನ್ಷನ್ ಹಾಲ್‌ನಲ್ಲಿ ಧ್ರುವನಾರಾಯಣ್ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನ ಬಳಗ ಆಯೋಜಿಸಿದ್ದ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಹಾಗೂ ಕಣ್ಣಿನ ಉಚಿತ ತಪಾಸಣಾ ಶಿಬಿರ ಯಶಸ್ವಿಯಾಯಿತು.

ಉಚಿತ ಕಣ್ಣಿನ ತಪಾಸಣಾ ಶಿಬಿರದಲ್ಲಿ 700ಕ್ಕೂ ಹೆಚ್ಚು ಜನರು ಪಾಲ್ಗೊಂಡು ಶಿಬಿರದ ಸದುಪಯೋಗ ಪಡೆದುಕೊಂಡರು. ಈ ಪೈಕಿ ಸುಮಾರು 200 ಮಂದಿಯನ್ನು ಶಸ್ತ್ರ ಚಿಕಿತ್ಸೆಗಾಗಿ ತುವಿಳುನಾಡಿನ ಕೊಯಮತ್ತೂರು ಸಮೀಪದ ಆಸ್ಪತ್ರೆಗೆ ಕಳುಹಿಸಿಕೊಡಲಾಯಿತು. 50ಕ್ಕೂ ಹೆಚ್ಚು ಮಂದಿ ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡಲು ಮುಂದಾದರೂ ಸಹ ಇವರಲ್ಲಿ ಕೆಲವರ ರಕ್ತ ಪಡೆಯಲು ನಾನಾ ಕಾರಣಗಳಿಂದ ಸಾಧ್ಯವಾಗಲಿಲ್ಲ. ಹೀಗಾಗಿ 27 ಮಂದಿ ರಕ್ತದಾನ ಮಾಡಿದರು.

ಉದ್ಘಾಟನೆ: ಇದಕ್ಕೂ ಮುನ್ನ ನಡೆದ ಶಿಬಿರ ಉದ್ಘಾಟನಾ ಕಾರ್ಯಕ್ರಮದಲ್ಲಿ ಸರ್ವ ಧರ್ಮಗುರುಗಳು ಭಾಗವಹಿಸಿದ್ದರು. ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅಂತಾರಾಷ್ಟ್ರೀಯ ಬೌದ್ಧಬಿಕ್ಕು ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ನಗರದ ನಳಂದ ವಿಶ್ವ ವಿದ್ಯಾನಿಲಯದ ಸಂಸ್ಥಾಪಕ ಬಂತೆ ಬೋಧಿದತ್ತ ತೇರಾ ಅವರು, ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿರುವ ಆರ್. ಧ್ರುವನಾರಾಯಣ್ ಅವರು ಮೇರು ವ್ಯಕ್ತಿತ್ವದ ರಾಜಕಾರಣಿ. ಅವರು ಮುಂದಿನ ದಿನಗಳಲ್ಲಿ ರಾಜ್ಯದ ಮುಖ್ಯಮಂತ್ರಿ ಆಗಬಹುದು ಎಂದು ಆಶಯ ವ್ಯಕ್ತಪಡಿಸಿದರು.

ನಗರದ ಸಿಎಸ್‌ಪಿ ಚರ್ಚ್ ಪಾದ್ರಿಗಳಾದ ರೇ.ಪುಟ್ಟರಾಜು ಅವರು ಅಧ್ಯಕ್ಷತೆ ವಹಿಸಿದ್ದರು. ಏಹಸಾನೀಯ ಅರಬ್ಬಿ ಕಾಲೇಜು ಮೌಲ್ವಿಗಳಾದ ಜನಾಬ್ ಮೌಲಾನ್ ಮೊಹಮ್ಮದ್ ಇಸ್ಮಾಯಿಲ್ ರಜ್ವಿ, ನಗರದ ಶ್ರೀ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವ ಸ್ವಾಮೀಜಿ ಅವರು ಸಾನ್ನಿಧ್ಯ ವಹಿಸಿದ್ದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ, ಜಿಪಂ ಮಾಜಿ ಸದಸ್ಯರಾದ ಕೆ.ಪಿ.ಸದಾಶಿವ ಮೂರ್ತಿ, ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿ ಮಾಜಿ ಅಧ್ಯಕ್ಷ ಆರ್.ಉಮೇಶ್, ಧ್ರುವನಾರಾಯಣ್ ಅಭಿಮಾನಿ ಬಳಗದ ಅಧ್ಯಕ್ಷ ಕಾಗಾಲವಾಡಿ ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ನಾಗನಾಯಕ, ಖಜಾಂಚಿ ರಾಜು, ಮುಖಂಡರಾದ ಪು.ಶ್ರೀನಿವಾಸ ನಾಯಕ, ಸಿ.ಎ.ಮಹದೇವಶಟ್ಟಿ, ಸೈಯದ್ ರಫಿ, ಬಿ.ಕೆ.ರವಿಕುಮಾರ್, ಕೆರಹಳ್ಳಿ ನವೀನ್, ಸುಹೇಲ್ ಆಲಿಖಾನ್, ಎ.ಎಸ್.ಗುರುಸ್ವಾಮಿ, ಮಹಮದ್ ಆಸ್ಗರ್(ಮುನ್ನ) ಡಿ.ನಾಗೇಂದ್ರ, ಆಲೂರು ಪ್ರದೀಪ್, ಕೊತ್ತಲವಾಡಿ ಸೋಮಲಿಂಗಪ್ಪ, ಮಹೇಶಕುದರ್, ಶ್ರೀಕಾಂತ, ವಕೀಲ ಅರುಣ್‌ಕುಮಾರ್, ರೋಟರಿ ಅಧ್ಯಕ್ಷ ಮಹದೇವಸ್ವಾಮಿ, ಯೋಗೇಶ್, ರಮೇಶ್, ನಟರಾಜು, ಚಿಕ್ಕಮಹದೇವು, ಕೆ.ಎಸ್.ಮಹೇಶ್, ಎಂ.ನಂಜುಂಡಸ್ವಾಮಿ, ಆರ್.ಮಹದೇವು, ಹೊಗನೂರು ಚಂದ್ರು, ಚಿನ್ನಮ್ಮ, ಕಲಾವತಿ, ಭಾಗ್ಯಮ್ಮ ನೀಲಮ್ಮ ಇತರರಿದ್ದರು.

ಕೊಳ್ಳೇಗಾಲದ ಯೂನಿಯನ್ ಕ್ಲಬ್‌ನಲ್ಲಿ ರಕ್ತದಾನ ಹಾಗೂ ಕಣ್ಣಿನ ತಪಾಸಣಾ ಶಿಬಿರ ಜರುಗಿತು. ಗುಂಡ್ಲುಪೇಟೆಯ ಪೃಥ್ವಿ ಬುದ್ಧಿಮಾಂದ್ಯ ಶಾಲಾ ಮಕ್ಕಳಿಗೆ ಊಟದ ವ್ಯವಸ್ಥೆ ಹಾಗೂ ಸರ್ಕಾರಿ ಆಸ್ಪತ್ರೆ ರೋಗಿಗಳಿಗೆ ಹಣ್ಣು–ಹಂಪಲು ವಿತರಿಸಲಾಯಿತು. ಹನೂರು ತಾಲೂಕಿನ ಕೌದಳ್ಳಿಯ ವೃದ್ಧಾಶ್ರಮ ವಾಸಿಗಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಬಿಳಿಗಿರಿರಂಗನಬೆಟ್ಟ ಸೋಲಿಗರಿಗೆ ಕಂಬಳಿ ವಿತರಣೆ



ಯಳಂದೂರು, ಜು.31–ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ ಹುಟ್ಟುಹಬ್ಬವನ್ನು ತಾಲೂಕಿನ ಬಿಳಿಗಿರಿ ರಂಗನ ಬೆಟ್ಟದಲ್ಲಿ ಸೋಲಿಗ, ದೇಗುಲದ ಬಳಿ ಹೂವು ಹಾಗೂ ಧೂಪ ಮಾರಾಟ ಮಾಡುವ ಕುಟುಂಬಗಳಿಗೆ ಯಳಂದೂರು ಯುವ ಬ್ಲಾಕ್ ಕಾಂಗ್ರೆಸ್ ಘಟಕದಿಂದ ಕಂಬಳಿಗಳನ್ನು ವಿತರಿಸಿ, ಸಿಹಿ ಹಂಚಿ ವಿಭಿನ್ನವಾಗಿ ಆಚರಿಸ ಲಾಯಿತು.

ಈ ಸಂದರ್ಭದಲ್ಲಿ ಯುವ ಬ್ಲಾಕ್ ಕಾಂಗ್ರೆಸ್ ಜಿಲ್ಲಾ ಕಾರ್ಯದಶಿ ಕೆಸ್ತೂರು ಗುರು ಮಾತನಾಡಿ, ಮಾಜಿ ಸಂಸದರಾಗಿರುವ ಆರ್.ಧ್ರುವ ನಾರಾಯಣ್ ದೇಶ ಕಂಡ ಅತ್ಯಂತ ಸರಳ ಸಜ್ಜನಿಕೆಯ ಅಷ್ಟೇ ಜನಪರ ಕೆಲಸ ಮಾಡಿದ ಸಂಸದ ಎಂಬ ಹೆಗ್ಗಳಿಕೆ ಪಡೆದಿದ್ದಾರೆ. ಈ ಬಾರಿ ತಾವು ಸೋತಿದ್ದರೂ ಸಹ ಅವರು ಫಲಿತಾಂಶ ಬಂದ ಮಾರನೇ ದಿನದಿಂದಲೇ ಮತ್ತೆ ಪ್ರತಿ ಗ್ರಾಮಗಳಿಗೂ ತೆರಳಿ ಅಲ್ಲಿನ ಜನರ ಸಮಸ್ಯೆಗಳನ್ನು ಆಲಿಸಿ, ತಮ್ಮ ಕೈಲಾದಷ್ಟು ಕೆಲಸವನ್ನು ಮಾಡಿಸುವ ಕಾರ್ಯದಲ್ಲೇ ಸದಾ ತಲ್ಲೀನರಾಗಿದ್ದಾರೆ. ಇವರ ಅವಧಿಯಲ್ಲಿ ಕೇಂದ್ರ ಸರ್ಕಾರದಿಂದ ಸಾವಿರಾರು ಕೋಟಿ ಅನುದಾನಗಳನ್ನು ತರುವ ಮೂಲಕ ಈ ಕ್ಷೇತ್ರವನ್ನು ಮಾದರಿ ಮಾಡುವ ನಿಟ್ಟಿನಲ್ಲಿ ಟೊಂಕ ಕಟ್ಟಿ ನಿಂತಿದ್ದ ಸಂಸದರಾಗಿದ್ದರು. ಎಲ್ಲಾ ಸಮುದಾಯಗಳನ್ನೂ ಜತೆಗೆ ಕರೆದು ಕೊಂಡು ಹೋಗುವ ಎಲ್ಲರಿಗೂ ಸಮಾನತೆ ಯನ್ನು ಒದಗಿಸುವ ಜಾತ್ಯತೀತ ನಿಲುವನ್ನು ಪಡೆದ ನಾಯಕರಾಗಿದ್ದಾರೆ. ಇಂತಹ ವ್ಯಕ್ತಿಯ ಹುಟ್ಟುಹಬ್ಬವನ್ನು ಜಿಲ್ಲೆ ಸೇರಿದಂತೆ ರಾಜ್ಯದ ಇತರೆ ಜಿಲ್ಲೆಗಳಲ್ಲೂ ವಿವಿಧ ಸಾಮಾಜಿಕ ಸೇವೆಗಳನ್ನು ಮಾಡುವ ಮೂಲಕ ಆಚರಿಸಲಾಗುತ್ತಿರುವುದು ಸ್ತುತ್ಯರ್ಹ ಕಾಯಕವಾಗಿದೆ ಎಂದರು.

ಜಿಪಂ ಮಾಜಿ ಉಪಾಧ್ಯಕ್ಷೆ ಕೇತಮ್ಮ ಮಾತನಾಡಿದರು. ಯುವ ಕಾಂಗ್ರೆಸ್‌ನ ಜಿಲ್ಲಾ ಕಾರ್ಯದರ್ಶಿ ವೆಂಕಟೇಶ್ ಯುವ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಡಗಲಮೋಳೆ ಚೇತನ್, ಮಾಜಿ ತಾಪಂ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷ ವೈ.ಕೆ. ಮೋಳೆ ನಾಗರಾಜು, ಗ್ರಾಪಂ ಮಾಜಿ ಅಧ್ಯಕ್ಷ ರವಿ, ಟಿಎಪಿಸಿಎಂಎಸ್ ನಿರ್ದೇಶಕ ಪ್ರತಾಪ್, ಬೊಮ್ಮಯ್ಯ ಸೇರಿದಂತೆ ಹಲವರಿದ್ದರು.

ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಆಸ್ತಿ



ಚಾಮರಾಜನಗರ, ಜು.31–ಉಪ್ಪಾರ ಸಮುದಾಯಕ್ಕೆ ಶಿಕ್ಷಣವೇ ಆಸ್ತಿ ಎಂದು ಮಾಜಿ ಸಚಿವ ಹಾಗೂ ಹಾಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಪ್ರಾಯಪಟ್ಟರು.

ನಗರದ ರಕ್ಷಿತ ಮಹಲ್‌ನಲ್ಲಿ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಉಪ್ಪಾರ ನೌಕರರ ಅಭಿವೃದ್ಧಿ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಮತ್ತು ಅಭಿನಂದನಾ ಸಮಾರಂಭ ಉದ್ಘಾಟಿಸಿ, ಮಾತನಾಡಿದರು.

ಉಪ್ಪಾರ ಸಮುದಾಯದವರಿಗೆ ಯಾವುದೇ ಆಸ್ತಿ ಇಲ್ಲ. ಶ್ರೀಮಂತರು ಇಲ್ಲ. ಸಮಾಜ ಅಭಿವೃದ್ಧಿಯಾಗಬೇಕಾದರೆ ಶಿಕ್ಷಣವೇ ಅಸ್ತ್ರವಾಗಿದ್ದು, ಅದೇ ಆಸ್ತಿಯಾಗಿದೆ. ಆದ್ದರಿಂದ ಉಪ್ಪಾರ ಸಮುದಾಯ ಶಿಕ್ಷಣಕ್ಕೆ ಆದ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ನಗರದ ಜಿಲ್ಲಾ ಉಪ್ಪಾರ ಭವನದಲ್ಲಿ ಸಂಘಕ್ಕೆ ಒಂದು ಕೊಠಡಿ ಕೊಡಿಸುವುದಾಗಿ ಭರವಸೆ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷ ರವಿ, ಮಾತನಾಡಿದರು. ಇದೇ ಸಂದರ್ಭದಲ್ಲಿ ಸಂಘದಿಂದ ನಿವೃತ್ತ ಹಾಗೂ ಮುಂಬಡ್ತಿ ಹೊಂದಿದ ನೌಕರರು, ವಿಶೇಷ ಸಾಧಕರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ಬಿ.ಮಹದೇವ, ಪ್ರಾಂಶುಪಾಲ ಎಂ.ಸೋಮಣ್ಣ, ಕೆನರಾ ಬ್ಯಾಂಕ್ ವ್ಯವಸ್ಥಾಪಕ ನಂಜುಂಡಸ್ವಾಮಿ, ಪ್ರಾಂಶುಪಾಲರಾದ ಚಿಕ್ಕಣ್ಣಸ್ವಾಮಿ, ಟಿ.ಎಂ.ರಂಗಸ್ವಾಮಿ, ಸಿಟಿಓ ಕಳಸೇಗೌಡ, ಕೆಇಇ ಮಹೇಶ್, ಕೆಪಿಟಿಸಿಎಲ್ ವೆಂಕಟೇಶ್ ಕುಮಾರ್, ಉಪನ್ಯಾಸಕ ಗೋವಿಂದರಾಜು, ಪೊಲೀಸ್ ಮುಖ್ಯಪೇದೆ ಮಹದೇವಶೆಟ್ಟಿ, ಕೊಳ್ಳೇಗಾಲ ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿ ಮಾದೇಶ್, ಮಾದಶೆಟ್ಟಿ, ಹೆಚ್.ಜಿ.ಗೋವಿಂದ, ಎನ್.ನಂಜುಂಡಸ್ವಾಮಿ, ಸಿದ್ದರಾಜು, ಕೆಸತೀಶ್, ಸಿದ್ದರಾಜು, ಎಸ್. ರೇಚಣ್ಣ, ಕೆ.ಟಿ.ನಾರಾಯಣ್, ಸಿ.ಶಿವಯ್ಯ, ಶಿವ, ಸೋಮಣ್ಣ, ನಟರಾಜು, ಪಿ.ಮಹದೇವಸ್ವಾಮಿ, ಮಂಜು, ಶಶಿ ರೇಖಾ, ಉಪ್ಪಾರ ಯುವಕರ ಸಂಘದ ಜಿಲ್ಲಾಧ್ಯಕ್ಷ ಜಯಕುಮಾರ್ ಇತರರಿದ್ದರು.

ದೇಶ ಸದೃಢಗೊಳಿಸುವಲ್ಲಿ ಮಾಧ್ಯಮಗಳ ಪಾತ್ರ ಹಿರಿದು



ಕೊಳ್ಳೇಗಾಲ,ಜು.31–ದೇಶವನ್ನು ಸುಭದ್ರಹಾಗೂ ಸದೃಢಗೊಳಿಸುವಲ್ಲಿ ಮಾಧ್ಯಮಗಳ ಪಾತ್ರ ಮಹತ್ತರವಾದುದು ಎಂದು ಶಾಸಕ ಎನ್.ಮಹೇಶ್ ಅಭಿಪ್ರಾಯಪಟ್ಟರು.

ನಗರದ ತಾಪಂ ಕಚೇರಿಯಲ್ಲಿ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಏರ್ಪಡಿಸಿದ್ದ ಪತ್ರಿಕಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪತ್ರಿಕೆ ಸೃಷ್ಟಿ ಮಾಡಿದವರು ಸಹ ಪತ್ರಕರ್ತರೇ ಆದ್ದರಿಂದ ಇಂದಿನ ಕಾರ್ಯಕ್ರಮವನ್ನು ಪತ್ರಿಕಾ ದಿನಾಚರಣೆ ಎನ್ನುವ ಬದಲು ಪತ್ರಕರ್ತರ ದಿನಾಚರಣೆ ಎನ್ನುವುದು ಸೂಕ್ತ ಎಂದು ವ್ಯಾಖ್ಯಾನಿಸಿದರಲ್ಲದೆ, ಪತ್ರಕರ್ತರು ಸಕಾರಾತ್ಮಕ ಚಿಂತನೆಗಳನ್ನು ರೂಡಿಸಿ ಕೊಳ್ಳಬೇಕು ಎಂದು ಸಲಹೆ ನೀಡಿದರು.

ಉಪವಿಭಾಗಾಧಿಕಾರಿ ಗೀತಾ ಹುಡೇದ್ ಮಾತನಾಡಿದರು. ಸಮಾರಂಭದಲ್ಲಿ ನಗರಸಭೆ ಅಧ್ಯಕ್ಷೆ ಸುಶೀಲ ಶಾಂತರಾಜು, ತಹಸೀಲ್ದಾರ್ ಮಂಜುಳಾ, ತಾಪಂ ಇಓ ಮಹೇಶ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ದೇವರಾಜ ಕಪ್ಪಸೋಗೆ, ಪ್ರಧಾನ ಕಾರ್ಯದರ್ಶಿ ಗೌಡಳ್ಳಿ ಮಹೇಶ್, ಜಿಲ್ಲಾ ಗ್ರಾಮಾಂತರ ಕಾರ್ಯದರ್ಶಿ ಡಿ.ನಟರಾಜು, ನಿರ್ದೇಶಕ ನಿಂಪು ರಾಜೇಶ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಮಂಜುನಾಥ್, ಚೇತನ್, ಗಾಯಕ ಮಾಂಬಳ್ಳಿ ಅರುಣ್, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ಡಿ.ಸಿದ್ದರಾಜು, ಮಾಜಿ ಅಧ್ಯಕ್ಷ ನಾಗೇಂದ್ರಸ್ವಾಮಿ, ಚಿಕ್ಕಮಾಳಿಗೆ, ಪ್ರಧಾನ ಕಾರ್ಯದರ್ಶಿ ಸೋಮು(ಮರಿಸ್ವಾಮಿ), ಉಪಾಧ್ಯಕ್ಷ ಮರಿಸ್ವಾಮಿ ಇದ್ದರು.

ಪ್ರವೀಣ್ ಹತ್ಯೆ ಖಂಡಿಸಿ; ಸಾಮೂಹಿಕ ರಾಜೀನಾಮೆ

ಚಾಮರಾಜನಗರ, ಜು.31–ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ ಖಂಡಿಸಿ ಬಿಜೆಪಿ ಯುವ ಮೋರ್ಚಾ ಹಾಗೂ ಎಸ್ಟಿ ಮೋರ್ಚಾದ ಅನೇಕ ಪದಾಧಿಕಾರಿಗಳು, ಕಾರ್ಯಕರ್ತರು ಸಾಮೂಹಿಕವಾಗಿ ರಾಜೀನಾಮೆ ಸಲ್ಲಿಸಿದ್ದಾರೆ.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಬಿಜೆಪಿ ಯುವ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಶಿವು ವಿರಾಟ್, ಎಸ್‌ಟಿ ಮೋರ್ಚಾದ ಜಿಲ್ಲಾ ಉಪಾಧ್ಯಕ್ಷ ಸಿ.ಕಿರಣ್‌ನಾಯಕ್, ನಗರ ಮಂಡಲ ಕಾರ್ಯದರ್ಶಿ ಮಹೇಶ್, ಯುವ ಮೋರ್ಚಾ ನಗರ ಮಂಡಲ ಪ್ರಧಾನ ಕಾರ್ಯದರ್ಶಿ ಪೃಥ್ವಿ, ಯುವ ಮೋರ್ಚಾ ನಗರ ಮಂಡಲ ಉಪಾಧ್ಯಕ್ಷ ಪ್ರವೀಣ್, ನಗರ ಮಂಡಲ ಕಾರ್ಯದರ್ಶಿ ರಾಜು, ಯುವ ಮೋರ್ಚಾ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಶೇಖರ್ ನಾಯಕ, ನಗರ ಮಂಡಲ ಮಾಧ್ಯಮ ಪ್ರಮುಖ್ ಸಂತೋಷ್‌ನಾಯಕ, ಸಹ ಪ್ರಮುಖ್ ಜಿ.ಹರೀಶ್, ಯುವ ಮೋರ್ಚಾ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ನಾಗಚೇತನ್ ಅವರು ಸಾಮೂಹಿಕವಾಗಿ ರಾಜೀನಾಮೆ ನೀಡಿದ್ದು, ರಾಜೀನಾಮೆ ಪತ್ರವನ್ನು ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್, ನಗರ ಮಂಡಲ ಅಧ್ಯಕ್ಷ ರಾಜು ಅವರಿಗೆ ಸಲ್ಲಿಸಿದ್ದಾರೆ.

ಮೈಸೂರಿನ ಆಯಿಶ್ ಆಡಳಿತ ಮಂಡಳಿ ಸದಸ್ಯರಾಗಿ ಡಾ.ಎ.ಆರ್ ಬಾಬು ನೇಮಕ



ಚಾಮರಾಜನಗರ, ಜು.31– ಮೈಸೂರಿನ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಆಡಳಿತ ಮಂಡಳಿ ಸದಸ್ಯರಾಗಿ ಚಾಮರಾಜನಗರ ದವರಾದ ಮೈಸೂರಿನ ಜೆಎಸ್‌ಎಸ್ ಮೆಡಿಕಲ್ ಕಾಲೇಜಿನ ಕಿವಿ– ಮೂಗು–ಗಂಟಲು ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಎ.ಆರ್.ಬಾಬು ಅವರನ್ನು ನೇಮಕ ಮಾಡಿ ಆದೇಶ ಹೊರಡಿಸಿದೆ. ಡಾ.ಎ.ಆರ್ ಬಾಬು ಅವರು ಚಾಮರಾಜನಗರ ಜಿಲ್ಲಾ ಬಿಜೆಪಿ ವೈದ್ಯಕೀಯ ಪ್ರಕೋಷ್ಠಕ ಸಂಚಾಲಕರಾಗಿ ಸೇವೆ ಸಲ್ಲಿಸಿದ್ದು, ಈಗ ಜಿಲ್ಲಾ ಕೋರ್ ಕಮಿತಿ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಒಂದನೇ ಪುಟದಿಂದ

ಹುಲಿ ದಾಳಿ: ಓರ್ವ ಸಾವು

ಒಳಗಾಗಿದ್ದಾರೆ. ಒಡೆಯನಪುರದ ನಿವಾಸಿಗಳಾದ ಪುಟ್ಟಸ್ವಾಮಿಗೌಡ, ಸುನೀಲ್‌ಕುಮಾರ್ ಹಾಗೂ ನಾಗರಾಜೇಗೌಡ ಗ್ರಾಮಕ್ಕೆ ಹೊಂದಿಕೊಂಡಂತಿರುವ ನಂಜನದೇವರ ಬೆಟ್ಟದ ಸಮೀಪದ ಜಮೀನಿನಲ್ಲಿ ಹಸು ಮೇಯಿಸುತ್ತಿದ್ದಾಗ ತಂಬಾಕು ಬೆಳೆದಿದ್ದ ಹೊಲದಲ್ಲಿ ಅಡಗಿ ಕುಳಿತಿದ್ದ ಹುಲಿಯ ದಾಳಿಗೆ ಒಳಗಾಗಿದ್ದಾರೆ. ಮೊದಲು ಪುಟ್ಟಸ್ವಾಮಿಗೌಡ ಮೇಲೆರಗಿದ ಹುಲಿಯನ್ನು ಕಂಡ ಸುನೀಲ್‌ಕುಮಾರ್ ಹಾಗೂ ನಾಗರಾಜೇಗೌಡ ಗಾಬರಿಯಿಂದ ಕಿರುಚಿ ಓಡಲಾರಂಭಿಸಿದ್ದಾರೆ. ಇದರಿಂದ ಆ ಹುಲಿ ಓಡುತ್ತಿದ್ದವರ ಮೇಲೂ ಎರಗಲು ಮುಂದಾಗಿದೆ. ಆದರೆ ಅಷ್ಟರಲ್ಲಿ ಇಬ್ಬರು ಬೇರೆ ಬೇರೆ ದಿಕ್ಕಿನತ್ತ ಓಡಿದ್ದರಿಂದ ಹುಲಿ ಸಮೀಪದಲ್ಲೇ ಮೇಯುತ್ತಿದ್ದ ಹಸುವಿನ ಮೇಲೆ ದಾಳಿ ನಡೆಸಿ ಕೊಂದು ಹಾಕಿದೆ. ಒಂದೆಡೆ ಹುಲಿ ದಾಳಿಗೆ ತುತ್ತಾಗಿ ಸ್ಥಳದಲ್ಲೇ ಮೃತಪಟ್ಟ ಪುಟ್ಟಸ್ವಾಮೀಗೌಡರ ದೇಹ ಭಕ್ಷಿಸದೇ ಹಸುವಿನ ಕಳೆಬರದಲ್ಲಿ ಮಾಂಸ ಭಕ್ಷಿಸಿದೆ. ಹುಲಿ ದಾಳಿ ವಿಷಯ ತಿಳಿದು ಗ್ರಾಮಸ್ಥರು ಸ್ಥಳಕ್ಕೆ ಬಂದು ಹುಲಿ ಕಂಡು ಗಾಬರಿಯಾಗಿದ್ದ ಇಬ್ಬರಿಗೆ ಸಮಾಧಾನ ಮಾಡಿ ನೀರು ಕುಡಿಸಿದ್ದಾರೆ. ಅಲ್ಲದೆ ಮೃತಪಟ್ಟಿದ್ದ ಪುಟ್ಟಸ್ವಾಮಿಗೌಡ ಶವದ ಸುತ್ತ ಕಾವಲಿದ್ದಾರೆ. ಹಸುವನ್ನು ತಿಂದು ಕಾಡಿನತ್ತ ಹುಲಿ ಹೋಗಿರುವುದರಿಂದ ಹುಲಿ ಇರುವಿಕೆ ಬಗ್ಗೆ ಅರಣ್ಯ ಸಿಬ್ಬಂದಿಗೆ ಖಚಿತವಾಗಿ ಕಂಡು ಬಂದಿಲ್ಲ. ಆದರೆ ಹುಲಿ ಹೆಜ್ಜೆ ಗುರುತು ಹಾಗೂ ಮೃತನ ತಲೆ ಮೇಲೆ ಇದ್ದ ಹಲ್ಲಿನ ಗುರುತಿನಿಂದಾಗಿ ಹುಲಿ ದಾಳಿಯನ್ನು ಖಚಿತಪಡಿಸಿಕೊಂಡಿದ್ದಾರೆ.

ಪರಿಶೀಲನೆ: ಹುಲಿ ದಾಳಿ ಹಿನ್ನೆಲೆಯಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕ ಡಾ.ರಮೇಶ್‌ಕುಮಾರ್, ಹೆಡಿಯಾಲ ವಲಯದ ಆರ್‌ಎಫ್‌ಓ ಮಂಜುನಾಥ್ ಸೇರಿದಂತೆ ಇನ್ನಿತರರು ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಗ್ರಾಮಸ್ಥರು ಅರಣ್ಯ ಇಲಾಖೆ ವಿರುದ್ಧ ಕಿಡಿಕಾರಿದರು. ಅಂತಿಮವಾಗಿ ಹುಲಿಯಿಂದ ರಕ್ಷಣೆ ನೀಡುವುದಾಗಿ ಅರಣ್ಯ ಸಿಬ್ಬಂದಿಗಳು ನೀಡಿದ ಭರವಸೆ ಮೇರೆಗೆ ಗ್ರಾಮಸ್ಥರು ಸಮಾದಾನಗೊಂಡರು. ಬಳಿಕ ಮಹಜರು ನಡೆಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಿದರು. ಬಳಿಕ ಮೃತರ ಕುಟುಂಬಕ್ಕೆ ಪರಿಹಾರ ನೀಡಲು ದಾಖಲೆಗಳಿಗೆ ಸಹಿ ಮಾಡಿಸಿಕೊಳ್ಳಲಾಯಿತು. ಈ ವೇಳೆ ಪಶುವೈದ್ಯ ಡಾ.ರಮೇಶ್‌ಕುಮಾರ್, ಹುಲ್ಲಹಳ್ಳಿ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಕೃಷ್ಣಕಾಂತ್ ಇನ್ನಿತರರು ಉಪಸ್ಥಿತರಿದ್ದರು.

ಪಹರೆ: ಹುಲಿ ದಾಳಿ ಹಿನ್ನೆಲೆಯಲ್ಲಿ ಎಸ್‌ಟಿಪಿಎಫ್ ಸಿಬ್ಬಂದಿ, ವಿವಿಧ ವಲಯಗಳ ಅರಣ್ಯ ಸಿಬ್ಬಂದಿ, ವಾಚರ್ ಸೇರಿದಂತೆ ವಿವಿಧ ಸಿಬ್ಬಂದಿಗಳನ್ನು ಘಟನಾ ಸ್ಥಳದಲ್ಲಿ ರಾತ್ರಿಯಿಡೀ ಪಹರೆಗೆ ನಿಯೋಜಿಸಲಾಗಿದೆ. ಅಲ್ಲದೆ ಹುಲಿಯ ಚಲನವನ ಗಮನಿಸಲು ಹಾಗೂ ದಾಳಿ ನಡೆಸಲು ಕಾರಣ ಕಂಡು ಹಿಡಿಯಲು ಆಯ್ದ ಸ್ಥಳದಲ್ಲಿ ಕ್ಯಾಮರಾ ಟ್ರ್ಯಾಪ್ ಅಳವಡಿಸಲಾಗಿದೆ. ಗಾಯಗೊಂಡು ಬೇಟೆಯಾಡಲು ಶಕ್ತಿಹೀನವಾಗಿದ್ದರೆ ಹುಲಿ ಕಾಡಂಚಿನ ಗ್ರಾಮಗಳತ್ತ ಬಂದು ಜಾನುವಾರುಗಳ ಮೇಲೆ ದಾಳಿ ನಡೆಸುತ್ತದೆ. ಇಲ್ಲದಿದ್ದರೆ ವಯಸ್ಸಿನ ಕಾರಣದಿಂದ ಕಾಡಿನಿಂದ ಹೊರಗೆ ಬರುತ್ತದೆ. ಈ ಎಲ್ಲಾ ಆಯಾಮಗಳಲ್ಲಿ ಹುಲಿ ದಾಳಿಗೆ ನಿಖರ ಕಾರಣ ಪತ್ತೆ ಮಾಡಲು ತಜ್ಞರ ತಂಡವನ್ನು ನಿಯೋಜಿಸಲಾಗಿದೆ.

ತಿರಂಗ ಬಳಸಿ

ನಿಮಗೆ ತಿಳಿದಿಲ್ಲದ ಸ್ವಾತಂತ್ರ್ಯ ಚಳವಳಿಯ ಅಂತಹ ಅಂಶಗಳ ಬಗ್ಗೆ ನೀವು ವಿವರವಾಗಿ ತಿಳಿದುಕೊಳ್ಳುತ್ತೀರಿ ಎಂದು 91ನೇ ಆವೃತ್ತಿಯ ಮನ್ ಕಿ ಬಾತ್‌ನಲ್ಲಿ ಪ್ರಧಾನಿ ಹೇಳಿದ್ದಾರೆ.

"ಜಾರ್ಖಂಡ್‌ನ ಗೊಮೊಹ್ ಜಂಕ್ಷನ್ ಕುರಿತು ಮಾತನಾಡಿದ ಪ್ರಧಾನಿ ಮೋದಿ ಅವರು, ಈ ನಿಲ್ದಾಣವನ್ನು ಅಧಿಕೃತವಾಗಿ ನೇತಾಜಿ ಸುಭಾಸ್ ಚಂದ್ರ ಬೋಸ್ ಜಂಕ್ಷನ್ ಗೊಮೊಹ್ ಎಂದು ಕರೆಯಲಾಗುತ್ತದೆ, ಏಕೆಂದರೆ ಈ ನಿಲ್ದಾಣದಲ್ಲಿ ನೇತಾಜಿ ಸುಭಾಷ್ ಅವರು ಕಲ್ಕಾ ಮೇಲ್ ಹತ್ತಿ ಬ್ರಿಟಿಷ್ ಅಧಿಕಾರಿಗಳನ್ನು ತಪ್ಪಿಸುವಲ್ಲಿ ಯಶಸ್ವಿಯಾಗಿದ್ದರು. ಅಂತೆಯೇ ಲಕ್ನೋ ಬಳಿಯ ಕಾಕೋರಿ ರೈಲು ನಿಲ್ದಾಣದ ಹೆಸರನ್ನು ನೀವೆಲ್ಲರೂ ಕೇಳಿರಬೇಕು. ರಾಮ್ ಪ್ರಸಾದ್ ಬಿಸ್ಮಿಲ್ ಮತ್ತು ಅಶ್ಫಾಕ್ ಉಲ್ಲಾ ಖಾನ್ ಅವರಂತಹ ವೀರರ ಹೆಸರುಗಳು ಈ ನಿಲ್ದಾಣದೊಂದಿಗೆ ಸಂಬಂಧ ಹೊಂದಿವೆ. ವೀರ ಕ್ರಾಂತಿಕಾರಿಗಳು ಬ್ರಿಟಿಷರ ಖಜಾನೆಯನ್ನು ಲೂಟಿ ಮಾಡುವ ಮೂಲಕ ತಮ್ಮ ಶಕ್ತಿಯನ್ನು ಪ್ರದರ್ಶಿಸಿದ್ದರು ಎಂದು ಹೇಳಿದರು.

ಇದಲ್ಲದೆ, ತಮಿಳುನಾಡಿನ ತೂತುಕುಡಿ ಜಿಲ್ಲೆಯ ವಾಂಚಿ ಮಣಿಯಾಚ್ಚಿ ಜಂಕ್ಷನ್ ಬಗ್ಗೆ, ಅವರು 25 ವರ್ಷ ವಯಸ್ಸಿನಲ್ಲಿ ಒಬ್ಬ ಬ್ರಿಟಿಷ್ ಕಲೆಕ್ಟರ್‌ಗೆ ಶಿಕ್ಷೆ ವಿಧಿಸಿದ ತಮಿಳು ಸ್ವಾತಂತ್ರ್ಯ ಹೋರಾಟಗಾರ ವಾಂಚಿನಾಥನ್ ಅವರ ಹೆಸರನ್ನು ಈ ನಿಲ್ದಾಣಕ್ಕೆ ಇಡಲಾಗಿದೆ ಎಂದು ಜನರಿಗೆ ನೆನಪಿಸಿದರು. "ಸ್ನೇಹಿತರೇ, ಈ ಪಟ್ಟಿ ಬಹಳ ದೊಡ್ಡದಾಗಿದೆ. ದೇಶಾದ್ಯಂತ 24 ರಾಜ್ಯಗಳಲ್ಲಿ 75 ಅಂತಹ ರೈಲು ನಿಲ್ದಾಣಗಳನ್ನು ಗುರುತಿಸಲಾಗಿದೆ. ಈ 75 ನಿಲ್ದಾಣಗಳನ್ನು ಬಹಳ ಅಲಂಕೃತವಾಗಿ ಅಲಂಕರಿಸಲಾಗಿದೆ. ಇವುಗಳಲ್ಲಿ ಹಲವಾರು ರೀತಿಯ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗಿದೆ. ನೀವು ಸಮಯ ಮೀಸಲಿಡಬೇಕು. ನಿಮ್ಮ ಸುತ್ತಮುತ್ತಲಿನ ಅಂತಹ ಒಂದು ಐತಿಹಾಸಿಕ ನಿಲ್ದಾಣವನ್ನು ಭೇಟಿ ಮಾಡುವಂತೆ ಪ್ರಧಾನಿ ಮೋದಿ ಹೇಳಿದರು.

'ಹರ್ ಘರ್ ತಿರಂಗ' ಉಪಕ್ರಮದ ಕುರಿತು ಮಾತನಾಡಿದ ಅವರು, ಆಗಸ್ಟ್ 13–15ರ ಅವಧಿಯಲ್ಲಿ ಜನರು ತಮ್ಮ ಮನೆಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವ ಮೂಲಕ ಚಳುವಳಿಯನ್ನು ಮತ್ತಷ್ಟು ಹೆಚ್ಚಿಸುವಂತೆ ಕೇಳಿಕೊಂಡರು. "ತ್ರಿವರ್ಣ ಧ್ವಜವು ನಮ್ಮನ್ನು ಸಂಪರ್ಕಿಸುತ್ತದೆ, ದೇಶಕ್ಕಾಗಿ ಏನನ್ನಾದರೂ ಮಾಡಲು ನಮಗೆ ಸ್ಫೂರ್ತಿ ನೀಡುತ್ತದೆ. ಆಗಸ್ಟ್ 2–15ರ ಅವಧಿಯಲ್ಲಿ ಜನರು ತಮ್ಮ ಸಾಮಾಜಿಕ ಮಾಧ್ಯಮ ಪ್ರೊಫೈಲ್ ಚಿತ್ರಗಳಾಗಿ ರಾಷ್ಟ್ರಧ್ವಜವನ್ನು ಇರಿಸಿಕೊಳ್ಳೋಣ. ಆಗಸ್ಟ್ 13ರಿಂದ 15ರವರೆಗೆ 'ಸ್ವಾತಂತ್ರ್ಯೋತ್ಸವದ ಅಮೃತಮಹೋತ್ಸವ'ದ ಅಡಿಯಲ್ಲಿ 'ಹರ್ ಘರ್ ತಿರಂಗ' ಎಂಬ ವಿಶೇಷ ಆಂದೋಲನವನ್ನು ಆಯೋಜಿಸಲಾಗುತ್ತಿದೆ. ನಮ್ಮ ಮನೆಗಳಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವ ಮೂಲಕ ಈ ಆಂದೋಲನವನ್ನು ಮತ್ತಷ್ಟು ವ್ಯಾಪಕವಾಗಿಸೋಣ ಮೋದಿ ಸಲಹೆ ನೀಡಿದರು.

ಕನ್ನಡದಾರತಿಗೆ ಶ್ಲಾಘನೆ

ಕೃಷಿಕರ ವಿಶೇಷ ಹವ್ಯಾಸವಾಗಿದೆ. ಜೇನು ಸಾಕಣೆಯಲ್ಲಿ ಸಾಧನೆ ಮಾಡಿದ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಮಧುಕೇಶ್ವರ ಹೆಗಡೆ ಅವರನ್ನು ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ಮೋದಿ ಶ್ಲಾಘಿಸಿದ್ದಾರೆ. ಮಧುಕೇಶ್ವರ ಹೆಗಡೆ ಅವರು ಕೇಂದ್ರ ಸರ್ಕಾರದ ಸಬ್ಸಿಡಿ ಪಡೆದು 50 ಪೆಟ್ಟಿಗೆ ಜೇನು ಹುಳಗಳ ಸಾಕಾಣಿಕೆ ಪ್ರಾರಂಭಿಸಿದರು. ಇಂದು 800ಕ್ಕೂ ಹೆಚ್ಚು ಪೆಟ್ಟಿಗೆಗಳು ಅವರ ಬಳಿ ಇವೆ. ಮಧು ಅಂದರೆ ಜೇನು ಕೆಲಸದಲ್ಲಿ ಕೆಲಸದಲ್ಲಿ ಹಲವು ಆವಿಷ್ಕಾರಗಳನ್ನು ಮಾಡಿ ತಮ್ಮ ಹೆಸರನ್ನು ಸಾರ್ಥಕಗೊಳಿಸಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಮನ್ ಕಿ ಬಾತ್‌ನಲ್ಲಿ ಪ್ರಶಂಸಿಸಿದ್ದಾರೆ.

ಮೈಸೂರಲ್ಲಿ ಹೈಅಲರ್ಟ್

ಮುಂದುವರೆಯುವುದಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವುದು ಸೂಕ್ತ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಿಂದ ವ್ಯಕ್ತವಾಗಿದೆ.

10 ದಿನಗಳ ವಿಶೇಷ ಅಭಿಯಾನಕ್ಕೆ ಹೆಚ್ಚುವರಿ ಸಿಬ್ಬಂದಿ: ಮಂಗಳೂರಲ್ಲಿ ಕೈಗೊಂಡಿರುವ ಬಿಗಿ ನಿಲುವಿನಿಂದಾಗಿ ಕಿಡಿಗೇಡಿಗಳು ಮೈಸೂರಿಗೆ ಬಂದು ದುಷ್ಕೃತ್ಯಗಳಲ್ಲಿ ಪಾಲ್ಗೊಳ್ಳಬಹುದೆಂಬ ಮುಂದಾಲೋಚನೆಯಿಂದ ಪೊಲೀಸರ ತಪಾಸಣೆಯನ್ನು ಚುರುಕುಗೊಳಿಸಿದ್ದಾರೆ. ಮುಂದಿನ 10 ದಿನಗಳಲ್ಲಿ ಮೈಸೂರಿನ ವಿವಿಧ ರಸ್ತೆಗಳಲ್ಲಿ ನಿರ್ಮಿಸಿರುವ ಚೆಕ್‌ಪೋಸ್ಟ್‌ನಲ್ಲಿ ಮೂರು ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು ಹೆಚ್ಚುವರಿ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ.

ಮುನ್ನೆಚ್ಚರಿಕೆಯಿಂದ ತಪಾಸಣೆ: ಮೈಸೂರು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಮಂಗಳೂರಲ್ಲಿ ನಡೆದ ಘಟನೆ ಹಿನ್ನೆಲೆಯಲ್ಲಿ ಮೈಸೂರಲ್ಲಿ ವಿಶೇಷ ಅಭಿಯಾನ ನಡೆಸುವ ಮೂಲಕ ಕಟ್ಟೆಚ್ಚರ ವಹಿಸಲಾಗಿದೆ. ಕೇವಲ ವಾಹನ ತಪಾಸಣೆ ನಡೆಯುವುದಕ್ಕೆ ಮಾತ್ರ ಸೀಮಿತಗೊಳಿಸದೇ ಸೂಕ್ಷ್ಮ ಪ್ರದೇಶದ ಮೇಲೂ ಗಮನ ಇಡಲಾಗಿದೆ. ಮೈಸೂರಲ್ಲಿ ಶಾಂತಿ ಕದಡಲು ಅವಕಾಶ ಮಾಡಿಕೊಡದೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಹಗಲು–ರಾತ್ರಿ ತಪಾಸಣೆ ನಡೆಸಲು ಕ್ರಮ ಕೈಗೊಳ್ಳಲಾಗಿದೆ. ಹೊರಗಿನಿಂದ ಮೈಸೂರಿಗೆ ಬರುವವರ ಮೇಲೆ ಹದ್ದಿನ ಕಣ್ಣಿಡಲಾಗಿದೆ. ಆಯ್ದ ರಸ್ತೆಗಳಲ್ಲಿ ನಾಕಾಬಂದಿ ರಚಿಸಲಾಗಿದೆ. ಚೆಕ್‌ಪೋಸ್ಟ್‌ಗಳ ಮೂಲಕ ನಗರ ಪ್ರವೇಶಿಸುವ ಎಲ್ಲಾ ವಾಹನಗಳನ್ನು ಪರಿಶೀಲಿಸಲು ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಅಹಿತಕರ ಘಟನೆಗಳಿಗೆ ಅವಕಾಶ ನೀಡದಿರಲು ಕಣ್ಗಾವಲು ಮತ್ತು ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದರು.

ಪ್ರಮುಖವಾಗಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ವಿಶೇಷ ಅಭಿಯಾನ ಹಮ್ಮಿಕೊಳ್ಳಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಡೆದಿರುವಂತಹ ಪರಿಸ್ಥಿತಿ ಮರಕಳಿಸಬಾರದೆಂಬ ಉದ್ದೇಶದಿಂದ ತಪಾಸಣೆ ಅಗತ್ಯವಾಗಿದೆ. ಗುಪ್ತಚರ ಸಿಬ್ಬಂದಿಯನ್ನು ಸಕ್ರಿಯಗೊಳಿಸಲಾಗಿದೆ. ಅನುಮಾನಾಸ್ಪದ ಹುಟ್ಟುಹಾಕುವ ವಾಹನ ಹಾಗೂ ಅದರಲ್ಲಿರುವ ಸವಾರರನ್ನು ವಿಚಾರಣೆಗೊಳಪಡಿಸಲಾಗುತ್ತದೆ. ಅಲ್ಲದೆ ಅವರ ಚಲನವಲನಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತದೆ. ಶಾಂತಿ ಕದಡುವವರ ಮೇಲೆ ಗಮನ ಹರಿಸುವಂತೆ ಎಲ್ಲಾ ಠಾಣೆಯ ಸಿಬ್ಬಂದಿಗಳಿಗೆ ಸೂಚನೆ ನೀಡಲಾಗಿದೆ. ಮೈಸೂರು–ಬೆಂಗಳೂರು ರಸ್ತೆಯ ಕಳಸ್ತವಾಡಿ ಜಂಕ್ಷನ್‌ನಲ್ಲಿ, ಕೆಆರ್‌ಎಸ್ ರಸ್ತೆಯಲ್ಲಿರುವ ಕುಸುಮಾ ಚಂದ್ರಶೇಖರ ಕಲ್ಯಾಣ ಮಂಟಪ, ಹುಣಸೂರು ರಸ್ತೆಯ ಲಿಂಗದೇವರಕೊಪ್ಪಲು, ಬೋಗಾದಿ ರಿಂಗ್ ರಸ್ತೆ ಜಂಕ್ಷನ್, ಹೆಚ್.ಡಿ. ಕೋಟೆ–ಮಾನಂದವಾಡಿ ಜಂಕ್ಷನ್ ಮತ್ತು ಬನ್ನೂರು ರಸ್ತೆಯ ದೇವೇಗೌಡ ವೃತ್ತದಲ್ಲಿ ತಪಾಸಣಾ ಮಾಡಿ ಮೈಸೂರಿನತ್ತ ವಾಹನ ಸಂಚಾರಕ್ಕೆ ಅವಕಾಶ ನೀಡಲಾಗುತ್ತಿದೆ ಎಂದು ಡಾ.ಚಂದ್ರಗುಪ್ತ ತಿಳಿಸಿದರು.

ಶಿಕ್ಷಣ, ಸಂಘಟನೆಯಿಂದ ಮಾತ್ರ ಕಾಯಕ ಸಮಾಜದ ಅಭಿವೃದ್ಧಿ ಸಾಧ್ಯ

ಶಾಸಕ ಎಲ್.ನಾಗೇಂದ್ರ ಅಭಿಮತ



ಮೈಸೂರು, ಜು.31(ಎಸ್‌ಬಿಡಿ)– ಶಿಕ್ಷಣ ಮತ್ತು ಸಂಘಟನೆಯಿಂದ ಮಾತ್ರ ಹಿಂದುಳಿದ ಕಾಯಕ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಹೇಳಿದರು.

ಮೈಸೂರಿನ ಬೃಂದಾವನ ಬಡಾವಣೆಯಲ್ಲಿ ಭಾನುವಾರ 'ಶ್ರೀ ವೀರ ಮಡಿವಾಳ ಮಾಚಿದೇವರ ಸಂಘ'ವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಡಿವಾಳ ಸೇರಿದಂತೆ ಎಲ್ಲಾ ಹಿಂದುಳಿದ ಕಾಯಕ ಸಮುದಾಯಗಳು ಸಂಘಟಿತವಾಗಬೇಕು. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುವ ಮೂಲಕ ಸಮುದಾಯವನ್ನು ಬಲಪಡಿಸಬೇಕು. ನಂತರದಲ್ಲಿ ಎಲ್ಲಾ ಕ್ಷೇತ್ರದಲ್ಲೂ ತಾನಾಗಿಯೇ ಅವಕಾಶಗಳು ಸೃಷ್ಟಿಯಾಗುತ್ತವೆ ಎಂದು ಸಲಹೆ ನೀಡಿದರು.

ಯಾವುದೇ ಸಂಘ ಅಥವಾ ಸಂಘಟನೆ ಜವಾಬ್ದಾರಿ ಸಮುದಾಯ ಮಹನೀಯರ ಜಯಂತಿ ಇನ್ನಿತರ ಕಾರ್ಯಕ್ರಮಗಳಿಗೆ ಸೀಮಿತವಾಗಬಾರದು. ಸಮಾಜದಲ್ಲಿ ಸಾಮರಸ್ಯದೊಂದಿಗೆ ಮುನ್ನಡೆದು ಸಮುದಾಯದ ಅಭಿವೃದ್ಧಿಗೆ ಸಂಕಲ್ಪ ತೊಡಬೇಕು. ಸರ್ಕಾರಗಳ ಯೋಜನೆಗಳು, ಸೌಲಭ್ಯಗಳ ಬಗ್ಗೆ ಪ್ರತಿಯೊಬ್ಬರಿಗೂ ಅರಿವು ಮೂಡಿಸಿ, ಅರ್ಹರಿಗೆ ಸೌಲಭ್ಯ ತಲುಪಿಸುವ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ಕ್ಷೇತ್ರದ ಶಾಸಕನಾಗಿ ನಾನೂ ನಿಮ್ಮೊಡನಿರುತ್ತೇನೆ. ಈಗಾಗಲೇ ಕುಕ್ಕರಹಳ್ಳಿ ಕೆರೆ ಬಳಿ ಮಡಿಕಟ್ಟೆ ಸೇರಿದಂತೆ ಮಡಿವಾಳ ಸಮುದಾಯಕ್ಕೆ ಸಾಕಷ್ಟು ಪ್ರಯೋಜನ ಕಲ್ಪಿಸಿದ್ದೇನೆ. ನನ್ನ ಸೇವೆ ಹೀಗೆಯೇ ಮುಂದುವರೆಯಲಿದೆ ಎಂದು ಭರವಸೆ ನೀಡಿದರು.

ಮಾಜಿ ಶಾಸಕ ವಾಸು ಅವರು ಮಾತನಾಡಿ, ಎಲ್ಲಾ ಸಮಸ್ಯೆಗಳಿಗೂ ಶಿಕ್ಷಣವೇ ಪರಿಹಾರ. ಆದ್ದರಿಂದ ಮಡಿವಾಳ ಸಮುದಾಯದ ಪೋಷಕರು ಜೀವನದಲ್ಲಿ ಎಷ್ಟೇ ಕಷ್ಟ ಬಂದರೂ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ, ಅವರ ಉತ್ತಮ ಭವಿಷ್ಯಕ್ಕೆ ಶ್ರಮಿಸಬೇಕು ಎಂದು ಕಿವಿಮಾತು ಹೇಳಿದರು.


ರಾಜ್ಯ ಮಡಿವಾಳರ ಸಂಘದ ನಂಜಪ್ಪ ಮಾತನಾಡಿ, ಸ್ಥಳೀಯ ಸಂಘ ಸಂಸ್ಥೆಗಳು ಸಮುದಾಯಕ್ಕೆ ಪೂರಕವಾಗಿ ಕೆಲಸ ಮಾಡಬೇಕು. ಸಮುದಾಯದ ಮಕ್ಕಳನ್ನು ವಿದ್ಯಾವಂತರನ್ನಾಗಿಸಲು ಆದ್ಯತೆ ನೀಡಬೇಕು. ಮಡಿವಾಳ ಸಮುದಾಯದ ಮೀಸಲಾತಿಗಾಗಿ ರಾಜ್ಯ ಸಂಘ ನಿರಂತರ ಪ್ರಯತ್ನ ನಡೆಸುತ್ತಿದ್ದು, ಇದಕ್ಕೆ ಎಲ್ಲರ ಸಹಕಾರ ಅತ್ಯಗತ್ಯವಿದೆ ಎಂದರು.

ಇದೇ ವೇಳೆ ಬೃಂದಾವನ ಬಡಾವಣೆಯ ನೂತನ 'ಶ್ರೀ ವೀರ ಮಡಿವಾಳ ಮಾಚಿದೇವರ ಸಂಘ'ದ ಗೌರವಾಧ್ಯಕ್ಷರಾದ ಪುಟ್ಟಸ್ವಾಮಿ, ಅಧ್ಯಕ್ಷ ಮಹೇಶ್, ಉಪಾಧ್ಯಕ್ಷ ನಾಗರಾಜು, ಕಾರ್ಯಾಧ್ಯಕ್ಷ ರಂಗರಾಜು, ಪ್ರಧಾನ ಕಾರ್ಯದರ್ಶಿ ಲೋಕೇಶ್, ಸಹ ಕಾರ್ಯದರ್ಶಿ ರಂಗಸ್ವಾಮಿ, ಖಜಾಂಜಿ ಉಮೇಶ್, ಕಾರ್ಯದರ್ಶಿ ರುದ್ರಶೆಟ್ಟಿ, ಸಂಘಟನಾ ಕಾರ್ಯದರ್ಶಿ ತಮ್ಮಣ್ಣ, ಲೆಕ್ಕ ಪರಿಶೋಧಕ ಶಿವಮಾದಶೆಟ್ಟಿ, ಸಾಂಸ್ಕೃತಿಕ ಕಾರ್ಯದರ್ಶಿ ಮಹದೇವ್, ನಿರ್ದೇಶಕರಾದ ಗೋವಿಂದರಾಜು, ವೀರಭದ್ರ, ಕಾಳಶೆಟ್ಟಿ ಹಾಗೂ ಸುಂದರ ಅವರನ್ನು ಶಾಸಕ ಎಲ್.ನಾಗೇಂದ್ರ ಅಭಿನಂದಿಸಿದರು.

ನಗರಪಾಲಿಕೆ ಸದಸ್ಯ ರಮೇಶ್, ಮಾಜಿ ಸದಸ್ಯ ದೇವರಾಜು, ರಾಜ್ಯ ಮಡಿವಾಳ ಸಂಘದ ನಿರ್ದೇಶಕ ರವಿಕುಮಾರ್, ಜಿಲ್ಲಾ ಮಡಿವಾಳರ ಸಂಘದ ಅಧ್ಯಕ್ಷ ರವಿನಂದನ, ಜಿಲ್ಲಾ ಮುಖಂಡರಾದ ಚಂದ್ರಶೇಖರ ಭೈರಿ, ಕುರುಬೂರು ಮಾದೇವಸ್ವಾಮಿ, ಧರ್ಮರಾಜು, ವೆಂಕಟೇಶ್, ನಾಗರಾಜು, ನಿವೃತ್ತ ಇಂಜಿನಿಯರ್ ಹರೀಶ್, ಹೆಬ್ಬಾಳು ಸ್ವಾಮಿ, ಉಪನ್ಯಾಸಕ ಶ್ರೀಧರ್ ಸೇರಿದಂತೆ ಮಡಿವಾಳ ಸಮುದಾಯದ ನೂರಾರು ಮಂದಿ ಉಪಸ್ಥಿತರಿದ್ದರು.

ಕಾಮನ್ವೆಲ್ತ್ ಗೇಮ್ಸ್

ಭಾರತಕ್ಕೆ 5ನೇ ಪದಕ, ಚಿನ್ನ ಗೆದ್ದ ಜೆರೆಮಿ ಲಾಲ್ರಿನ್ನುಂಗಾ



ಬರ್ಮಿಂಗ್ಹ್ಯಾಮ್: ಕಾಮನ್‌ವೆಲ್ತ್ ಗೇಮ್ಸ್ 2022ರಲ್ಲಿ ಅದ್ಭುತ ಪ್ರದರ್ಶನ ನೀಡುವ ಮೂಲಕ ಜೆರೆಮಿ ಲಾಲ್ರಿನ್ನುಂಗಾ ಚಿನ್ನದ ಪದಕವನ್ನು ಗೆದ್ದಿದ್ದಾರೆ. ಈ ಮೂಲಕ ಭಾರತಕ್ಕೆ 5ನೇ ಪದಕ ಲಭಿಸಿದೆ. 67ಕೆಜಿ ವಿಭಾಗದ ಭಾರ ಎತ್ತುವ ಸ್ಪರ್ಧೆಯಲ್ಲಿ 19 ವರ್ಷದ ಜೆರೆಮಿ ಲಾಲ್ರಿನ್ನುಂಗಾ 300 ಕೆಜಿ ಭಾರತ ಎತ್ತುವ ಮೂಲಕ ಚಿನ್ನದ ಪದಕಕ್ಕೆ ಮುತ್ತಿಟ್ಟರು. ಇನ್ನು 300 ಕೆಜಿ ತೂಕ ಎತ್ತುವ ಮೂಲಕ ಗೇಮ್ಸ್ ಇತಿಹಾಸದಲ್ಲೇ ಹೊಸ ದಾಖಲೆ ಬರೆದಿದ್ದಾರೆ. ಕ್ಲೀನ್ ಅಂಡ್ ಜೆರ್ಕ್ ವಿಭಾಗದಲ್ಲಿ ಜೆರೆಮಿ ಬರೋಬ್ಬರಿ 160 ಕೆಜಿ ಭಾರವನ್ನು ಎತ್ತಿದ್ದರು. ಇನ್ನು 293 ಕೆಜಿ ಭಾರ ಎತ್ತುವ ಮೂಲಕ ವೈಪವಾ ಅಯೋನೆ ಬೆಳ್ಳಿ ಪದಕ ಹಾಗೂ 290 ಕೆಜಿ ಭಾರ ಎತ್ತುವ ಮೂಲಕ ನೈಜೀರಿಯಾದ ಎಡಿಡಿಯಾಂಗ್ ಉಮೊಫಿಯಾ ಕಂಚಿನ ಪದಕ ಗೆದ್ದಿದ್ದಾರೆ.

ಮೈಸೂರಿನ ರೈತರಿಂದ 'ದ್ರೋಹ ದಿವಸ್' ಆಚರಣೆ



ಮೈಸೂರು,ಜು.31(ಎಂಟಿವೈ)– ಕೃಷಿಗೆ ಮಾರಕವಾಗಿದ್ದ ಮೂರು ತಿದ್ದುಪಡಿ ಕಾಯ್ದೆ ಹಾಗೂ ರೈತ ಮುಖಂಡರ ಮೇಲೆ ದಾಖಲಿಸಿದ್ದ ಪ್ರಕರಣ ಹಿಂಪಡೆಯುವಾಗಿ ನೀಡಿದ್ದ ಭರವಸೆ ಈಡೇರಿಸದ ಹಿನ್ನೆಲೆಯಲ್ಲಿ ಮೈಸೂರಲ್ಲಿ ರೈತ ಸಂಘಟನೆಗಳ ಕಾರ್ಯಕರ್ತರು ದ್ರೋಹ ದಿವಸ್ ಆಚರಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿದ 'ದ್ರೋಹ ದಿವಸ' ಕಾರ್ಯಕ್ರಮದ ಅಂಗವಾಗಿ ಮೈಸೂರಿನ ನ್ಯಾಯಾಲಯದ ಮುಂಭಾಗ ಮಹಾತ್ಮಗಾಂಧಿ ಪುತ್ಥಳಿ ಮುಂಭಾಗ ನಡೆದ ಪ್ರತಿಭಟನೆಯಲ್ಲಿ ವಿವಿಧ ರೈತ ಸಂಘಟನೆಗಳ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ಮಲ್ಟಿನ್ಯಾಷನಲ್ ಕಂಪನಿಗಳ ಪರವಾಗಿ ನಿಯಮಗಳನ್ನು ಜಾರಿಗೊಳಿಸುತ್ತಿದ್ದು, ಅದಕ್ಕಾಗಿ ರೈತರನ್ನು ಬಲಿಪಶುಗಳಾಗಿ ಮಾಡುತ್ತಿದೆ. ಕೇವಲ ಉಳ್ಳವರಿಗೆ ಮಣೆ ಹಾಕುವುದಕ್ಕಾಗಿ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಕಾನೂನಿಗೆ ತಿದ್ದುಪಡಿ ತಂದಿದೆ. ತಿದ್ದುಪಡಿ ತಂದಿರುವ ಕಾನೂನು ಮರಣ ಶಾಸನವಾಗಿ ಮಾರ್ಪಟ್ಟಿತ್ತು. ದೇಶದಾದ್ಯಂತ ನಡೆದ ಉಗ್ರ ಹೋರಾಟದಿಂದಾಗಿ ತಿದ್ದುಪಡಿ ಕಾಯ್ದೆಯನ್ನು ಹಿಂಪಡೆಯಲಾಯಿತು. ಆದರೆ, ರಾಜ್ಯ ಸರ್ಕಾರ ಇದುವರೆಗೂ ಹಿಂಪಡೆದಿಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಹಿತ ಕಾಪಾಡಲು ವಿಫಲವಾಗಿದೆ. ಉದ್ದೇಶಪೂರ್ವಕವಾಗಿ ಮಸೂದೆಗಳಿಗೆ ತಿದ್ದುಪಡಿ ತಂದು ದೌರ್ಜನ್ಯ ಎಸಗಿದೆ. ಉಗ್ರ ಹೋರಾಟದ ಹಿನ್ನೆಲೆಯಲ್ಲಿ ತಿದ್ದುಪಡಿ ಮಸೂದೆಯನ್ನು ಹಿಂಪಡೆಯುವುದಾಗಿ ಘೋಷಿಸಿದ್ದ ಕೇಂದ್ರ ಸರ್ಕಾರ, ರೈತರ ಮೇಲೆ ಹೂಡಲಾಗಿದ್ದ ಸುಳ್ಳು ಪ್ರಕರಣವನ್ನು ಹಿಂಪಡೆಯುವುದಾಗಿ ಭರವಸೆ ನೀಡಿತ್ತು. ಆದರೆ ಇದುವರೆಗೂ ನೀಡಿದ್ದ ಭರವಸೆ ಈಡೇರಿಸಲು ಮುಂದಾಗಿಲ್ಲ. ಅದಕ್ಕಾಗಿ ಕೇಂದ್ರ ಸರ್ಕಾರದ ವಿರುದ್ಧ ದ್ರೋಹ ದಿವಸ್ ಕಾರ್ಯಕ್ರಮದ ಅಂಗವಾಗಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಸರ್ಕಾರ ನೀಡಿದ್ದ ಭರವಸೆ ಮೇರೆಗೆ ದೇಶದಾದ್ಯಂತ ಹೋರಾಟ ಸ್ಥಗಿತಗೊಳಿಸಲಾಗಿತ್ತು. ಆದರೆ, ಕೇಂದ್ರ ಮತ್ತು ರಾಜ್ಯ ಸರ್ಕಾರ ಉದ್ದೇಶಪೂರ್ವಕವಾಗಿಯೇ ರೈತರನ್ನು ಹತ್ತಿಕ್ಕುವ ಸಂಚು ನಡೆಸುತ್ತಿರುವುದರಿಂದ ಇನ್ನು ಮುಂದೆ ಹೋರಾಟದಿಂದ ದೂರವುಳಿಯದೇ ಮತ್ತೆ ಹೋರಾಟ ನಡೆಸಲೇಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಹಂತ ಹಂತವಾಗಿ ಉಗ್ರ ಹೋರಾಟ ಹಮ್ಮಿಕೊಳ್ಳಬೇಕಾಗಿದೆ. ಅದಕ್ಕೆ ಅವಕಾಶ ಮಾಡಿಕೊಡದೆ ರಾಜ್ಯ ಸರ್ಕಾರ ಕೃಷಿ ಕ್ಷೇತ್ರಕ್ಕೆ ಮಾರಕವಾಗಿರುವ ತಿದ್ದುಪಡಿ ಕಾಯ್ದೆಯನ್ನು ಹಿಂಪಡೆಬೇಕು. ಕೇಂದ್ರ ಸರ್ಕಾರ ರೈತ ಮುಖಂಡರ ಮೇಲೆ ಹೂಡಿರುವ ಸುಳ್ಳು ಪ್ರಕರಣವನ್ನು ರದ್ದು ಮಾಡಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ರಾಜ್ಯ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಹೊಸಕೋಟೆ ಬಸವರಾಜ್, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಜಗದೀಶ್ ಸೂರ್ಯ, ವಿಜಯ್ ಕುಮಾರ್, ಪ್ರಸನ್ನ ಗೌಡ, ಮರಂಕಯ್ಯ, ಅನೀಲ್, ಮಂಡಕಳ್ಳಿ ಮಹೇಶ, ಬಸವರಾಜ್, ಶಿವರಾಜ್ ಮುಂತಾದವರು ಭಾಗವಹಿಸಿದ್ದರು.

ಗ್ರಾಹಕರು, ವ್ಯಾಪಾರಿಗಳಿಗೆ ಜನಜಾಗೃತಿ

ಪ್ಲಾಸ್ಟಿಕ್ ಬಳಕೆ ಬಿಡಿ..., ಬಟ್ಟೆ ಬ್ಯಾಗ್ ಬಳಸಿ...



ಮೈಸೂರು, ಜು.31(ಆರ್‌ಕೆಬಿ)–ವಿಶ್ವ ಪರಿಸರ ಸಂರಕ್ಷಣಾ ದಿನದ ಅಂಗವಾಗಿ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್ ನಿಷೇಧ ಕುರಿತು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ವಿಭಾಗದ ಆಶ್ರಯದಲ್ಲಿ ಗುರುವಾರ ಮೈಸೂರಿನ ವಿವಿಧೆಡೆ ಗ್ರಾಹಕರು ಹಾಗೂ ವ್ಯಾಪಾರಸ್ಥರಿಗೆ ಬಟ್ಟೆ ಬ್ಯಾಗ್ ಹಾಗೂ ಜಾಗೃತಿ ಕರಪತ್ರ ವಿತರಿಸಿ, ಜನಜಾಗೃತಿ ಮೂಡಿಸಲಾಯಿತು. ನಗರಪಾಲಿಕೆ ಆರೋಗ್ಯಾಧಿಕಾರಿ ಡಾ.ನಾಗರಾಜ್ ನೇತೃತ್ವದಲ್ಲಿ ಎಂ.ಜಿ. ರಸ್ತೆ ತರಕಾರಿ ಮಾರುಕಟ್ಟೆಯಲ್ಲಿ ಗ್ರಾಹಕರು, ವ್ಯಾಪಾರಸ್ಥರನ್ನು ಉದ್ದೇಶಿಸಿ ಮಾತನಾಡಿ, ಹಿಂದಿನ ಕಾಲದಂತೆ ಈ ಕಾಲದಲ್ಲೂ ನಾವು ಬಟ್ಟೆಯಲ್ಲಿ ಮಾಡಿದ ಕೈ ಚೀಲಗಳನ್ನು ಹಿಡಿದು ಮಾರುಕಟ್ಟೆಗೆ ಹೋಗುವುದನ್ನು ರೂಢಿಸಿಕೊಳ್ಳಬೇಕು. ಆ ಮೂಲಕ ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ಬಳಕೆ ನಿಲ್ಲಿಸಬೇಕು ಎಂದು ಕರೆ ನೀಡಿದರು.

ಅತಿಯಾದ ಪ್ಲಾಸ್ಟಿಕ್ ಬಳಕೆಯಿಂದಾಗಿ ಪರಿಸರ ಸಮತೋಲನಕ್ಕೆ ಧಕ್ಕೆಯಾಗುತ್ತಿದೆ. ಪ್ಲಾಸ್ಟಿಕ್ ಬ್ಯಾಗ್ ಬಳಕೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ನಿಷೇಧಿಸಿ ಆದೇಶ ಹೊರಡಿಸಿವೆ. ಬಟ್ಟೆ ಕೈ ಚೀಲಗಳನ್ನು ಬಳಕೆ ಮಾಡಿ ಪರಿಸರದ ಜತೆಗೆ ಜೀವ ವೈವಿಧ್ಯತೆ ಸಂರಕ್ಷಿಸಲು ಜನರು ಮುಂದಾಗಬೇಕು. ಪರಿಸರ ಸಂರಕ್ಷಣಾ ಕಾನೂನು 1986ರ ಅಡಿಯಲ್ಲಿ 40 ಮೈಕ್ರಾನ್ ಕಡಿಮೆ ದಪ್ಪವಿರುವ ಪ್ಲಾಸ್ಟಿಕ್ ಬ್ಯಾಗ್‌ಗಳ ಬಳಕೆ ನಿಷೇಧವಿದ್ದು, ಇದನ್ನು ಎಲ್ಲರೂ ಕಡ್ಡಾಯವಾಗಿ ಪಾಲಿಸಬೇಕು ಎಂದು ಮನವಿ ಮಾಡಿದರು.

ನಂತರ ಮಾತನಾಡಿದ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ರವಿಶಂಕರ್, ನಿಷೇಧಿತ ಪ್ಲಾಸ್ಟಿಕ್ ಬ್ಯಾಗ್‌ಗಳ ಬಳಕೆಯನ್ನು ನಾವೆಲ್ಲರೂ ಹಂತ ಹಂತವಾಗಿ ಕಡಿಮೆ ಮಾಡಬೇಕಾದ ತುರ್ತು ಸ್ಥಿತಿಯಲ್ಲಿದ್ದೇವೆ. ನಿರ್ಲಕ್ಷ್ಯ ಮಾಡಿದರೆ ಪರಿಸರ ನಾಶವಾಗಿ, ಮುಂದಿನ ಪೀಳಿಗೆ ಸಂಕಷ್ಟ ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಕೆ.ಆರ್.ಪೊಲೀಸ್ ಠಾಣೆ ಸಬ್‌ಇನ್ಸ್‌ಪೆಕ್ಟರ್ ರಾಚಯ್ಯ, ದೇವರಾಜ ಮಾರುಕಟ್ಟೆಯ ಆರೋಗ್ಯ ಅಧಿಕಾರಿ ತೇಜಸ್ವಿನಿ, ನಗರಪಾಲಿಕೆ ಸದಸ್ಯ ಜಗದೀಶ, ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಪ್ರಚಾರ ಪ್ರಮುಖ್ ಸುಮಾ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅಪೂರ್ವ ಸುರೇಶ್, ಸುರೇಶ್ ಗೋಲ್ಡ್, ಶಿವರಾಜ್, ಸುಚೀಂದ್ರ, ಬಸವರಾಜ್ ಬಸಪ್ಪ ಇನ್ನಿತರರು ಉಪಸ್ಥಿತರಿದ್ದರು.



ಮಳೆ ಕಾರಣಗಳಿಂದಾಗಿ ಚನ್ನಪಟ್ಟಣ ಬಳಿ ಇರುವ ಹಿಲ್‌ಕಟ್ಟಿಂಗ್ ಮಾಡಲು ಸಾಧ್ಯವಾಗದೆ ಮೈಸೂರು–ಬೆಂಗಳೂರು ದಶಪಥ ಹೆದ್ದಾರಿ ಕಾಮಗಾರಿ ವಿಳಂಬವಾಗಿತ್ತು. ಭಾನುವಾರ ಹಿಲ್‌ಕಟ್ಟಿಂಗ್ ಕಾಮಗಾರಿ ಮುಗಿಯುವ ಹಂತಕ್ಕೆ ಬಂದಿದ್ದು, ಅದರ ಪ್ರಗತಿಯನ್ನು ಸಂಸದ ಪ್ರತಾಪ್‌ಸಿಂಹ ವೀಕ್ಷಿಸಿದರು. ಆ.15ಕ್ಕೆ ಈ ರಸ್ತೆಯನ್ನು ಸಂಚಾರಕ್ಕೆ ತೆರವುಗೊಳಿಸಲು ಪ್ರಯತ್ನ ನಡೆಯುತ್ತಿದೆ ಎಂದು ಅವರು ತಿಳಿಸಿದರು.



ಮೈಸೂರು ಅಂಬಾರಿ ರೋಟರಿ ಕ್ಲಬ್ ಜಿಲ್ಲಾಧ್ಯಕ್ಷರಾಗಿ ಆಯ್ಕೆಗೊಂಡ ಬಿಜೆಪಿ ಮುಖಂಡ, ವಕೀಲ ಹಾಗೂ ಮೈಸೂರು ವಿವಿಯ ಸಿಂಡಿಕೇಟ್ ಸದಸ್ಯ ಎಂ.ಶಿವಕುಮಾರ್ ಅವರನ್ನು ಶಾಸಕ ಎಲ್.ನಾಗೇಂದ್ರ ಸನ್ಮಾನಿಸಿದರು. ಈ ಸಂದರ್ಭದಲ್ಲಿ ನಗರ ಪಾಲಿಕೆ ಸದಸ್ಯರಾದ ವೇದಾವತಿ, ಚಿಕ್ಕವೆಂಕಟು, ರವೀಂದ್ರ ಬಿಜೆಪಿ ಪ್ರಧಾನ ಕಾರ್ಯದರ್ಶಿ ರಮೇಶ್, ಮುಖಂಡರಾದ ದಿನೇಶ್ ಗೌಡ, ಸ್ವಾಮಿ, ರವಿಕುಮಾರ್, ಗಿರೀಶ್, ನಾಗ, ವಿನೋದ, ದಾಸ್, ಹೇಮಂತ್, ರಾಮಣ್ಣ ಮುಂತಾದವರಿದ್ದರು.

ಖಾದಿ ಬಟ್ಟೆಯಿಂದ ತಯಾರಾದ ರಾಷ್ಟ್ರಧ್ವಜ ಬಳಸುವಂತೆ ಆಗ್ರಹ



ಮೈಸೂರು, ಜು.31(ಎಂಟಿವೈ)– ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಕಾರ್ಯಕ್ರಮದಲ್ಲಿ ಖಾದಿ ಬಟ್ಟೆಯಿಂದ ಕೈಮಗ್ಗದಲ್ಲಿ ತಯಾರಾದ ಬಾವುಟವನ್ನೇ ಬಳಸುವಂತೆ ನಾಗರಿಕ ಸಮಿತಿಯಿಂದ ಮೈಸೂರಿನ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನದಲ್ಲಿ ಪ್ರತಿಭಟನಾ ಸಭೆ ನಡೆಯಿತು.

ಹಿರಿಯ ರಂಗಕರ್ಮಿ ಪ್ರಸನ್ನ, ನಿವೃತ್ತ ಪ್ರಾಧ್ಯಾಪಕ ಪ್ರೊ.ಕಾಳಚನ್ನೇಗೌಡ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ಟಿ.ಪುಟ್ಟಣ್ಣ, ಕೆ.ಸಿ.ರೇವಣ್ಣ, ಸಿ.ಆರ್.ರಂಗಶೆಟ್ಟಿ, ನಿಂಗಯ್ಯ, ವಿವಿಧ ಸಂಘ ಸಂಸ್ಥೆಗಳ ಮುಖಂಡರು ಪಾಲ್ಗೊಂಡು ಬೆಂಬಲ ಸೂಚಿಸಿದರು.


ಇದೇ ವೇಳೆ ರಂಗಕರ್ಮಿ ಪ್ರಸನ್ನ ಮಾತನಾಡಿ, ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲೇ ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಚಳುವಳಿ ನಡೆದಾಗ ಪ್ರತಿಯೊಂದು ಮನೆಯ ಮೇಲೂ ಖಾದಿ ಬಟ್ಟೆ ಬಳಸಿ, ಕೈಮಗ್ಗದಿಂದ ತಯಾರಿಸಿದ ಬಾವುಟವನ್ನು ಹಾರಿಸುವ ಮೂಲಕ ವಿದೇಶಿ ನೀತಿಯನ್ನು ಪ್ರಬಲವಾಗಿ ಖಂಡಿಸಲಾಗಿತ್ತು. ಆದರೆ, ಪ್ರಸ್ತುತ ಕೇಂದ್ರ ಸರ್ಕಾರ ಕರೆ ನೀಡಿರುವ 'ಹರ್ ಘರ್ ತಿರಂಗಾ' ಕಾರ್ಯಕ್ರಮದಲ್ಲಿ ವಿದೇಶದಲ್ಲಿ ತಯಾರಾದ ಬಾವುಟ ಬಳಕೆಗೆ ಉತ್ತೇಜನ ನೀಡಲಾಗುತ್ತಿದೆ. ಖಾದಿ ಗ್ರಾಮೋದ್ಯೋಗದಿಂದ ತಯಾರಿಸಿದ ಬಾವುಟ ಬಳಕೆಗೆ ಕ್ರಮ ಕೈಗೊಂಡಿಲ್ಲ. ಸರ್ಕಾರದ ಈ ನಿರ್ಲಕ್ಷ್ಯದ ಧೋರಣೆಯಿಂದಾಗಿ ಗ್ರಾಮೀಣ ಪ್ರದೇಶದಲ್ಲಿದ್ದ ಕೈಮಗ್ಗಗಳು ನಶಿಸುತ್ತಿವೆ ಎಂದು ಆರೋಪಿಸಿದರು.

ಪ್ರತಿ ಮನೆಯಲ್ಲಿ ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆ ಸಂದರ್ಭ ರಾಷ್ಟ್ರ ಧ್ವಜವನ್ನು ಹಾರಿಸಬೇಕು ಎಂದು ಕೇಂದ್ರ ಸರ್ಕಾರ ಕರೆ ನೀಡಿದೆ. ಆದರೆ, ಇದಕೋಸ್ಕರ ವಿದೇಶದಿಂದ ಧ್ವಜವನ್ನು ಆಮದು ಮಾಡುತ್ತಿರುವುದು ಸರಿಯಲ್ಲ. ದೇಶದಲ್ಲಿಯೇ ಉತ್ಪಾದನೆಯಾದ ಖಾದಿ ಬಟ್ಟೆಯನ್ನು ಬಳಕೆ ಮಾಡಿಕೊಂಡು ಧ್ವಜ ತಯಾರು ಮಾಡಬೇಕು. ಸ್ವದೇಶಿ ಉತ್ಪನ್ನಗಳಿಗೆ ಉತ್ತೇಜನ ನೀಡುವ ಮಾತುಗಳನ್ನು ಆಡುವ ಕೇಂದ್ರ ಸರ್ಕಾರ, ಮತ್ತೊಂದೆಡೆ ಧ್ವಜವನ್ನು ಆಮದು ಮಾಡಿಕೊಳ್ಳುತ್ತಿರುವುದು ಸರಿಯಲ್ಲ. ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದಲ್ಲಿ ಸ್ವದೇಶಿ ಖಾದಿ ಬಟ್ಟೆಯಿಂದ ತಯಾರಿಸಿದ ಬಟ್ಟೆ ಬಾವುಟವನ್ನು ಹಾರಿಸುವಂತೆ ಕೇಂದ್ರ ಸರ್ಕಾರದ ವಿರುದ್ಧ ರಾಜಕೀಯ ಪಕ್ಷಗಳು ಧ್ವನಿ ಎತ್ತಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಮಿತಿ ಪದಾಧಿಕಾರಿಗಳಾದ ಜಿ.ಪಿ.ಬಸವರಾಜು, ಜಿ.ಪ್ರಕಾಶ್, ಲೀಲಾ ಪ್ರಕಾಶ್, ಉಗ್ರನರಸಿಂಹೇಗೌಡ, ರಾಜ್ ಕಿಶೋರ್ ಇತರರು ಪಾಲ್ಗೊಂಡಿದ್ದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಅವ್ಯವಸ್ಥೆಗಳ ತಾಣ

- ಲಿಫ್ಟ್ ಇಲ್ಲ, ಶೌಚಾಲಯಗಳಂತೂ ಇಲ್ಲವೇ ಇಲ್ಲ.
- ಕುಡಿಯುವ ನೀರಿಗೆ ಹಾಹಾಕಾರ, ಮುಂಕಾದ ಫಲಕಗಳು



ಮೈಸೂರು, ಜು.31(ಎಸ್‌ಪಿಎನ್)–ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ಲಿಫ್ಟ್ ವ್ಯವಸ್ಥೆ ಇಲ್ಲದ ಕಾರಣ ಜನರು ಪರಿತಪ್ಪಿಸುವಂತಾಗಿದೆಯಲ್ಲದೆ ಅವ್ಯವಸ್ಥೆಯಿಂದ ಕೂಡಿದೆ. ದಿನನಿತ್ಯ ಒಂದಲ್ಲೊಂದು ಕೆಲಸ ಕಾರ್ಯಗಳಿಗೆ ಬರುವ ಹಿರಿಯರು, ಮಹಿಳೆಯರು ಮತ್ತು ಜನ ಸಾಮಾನ್ಯರು ಮೊದಲನೇ ಮಹಡಿಯಲ್ಲಿರುವ ಅಧಿಕಾರಿಗಳ ಕೊಠಡಿಗೆ ತಲುಪಲು ಹರಸಾಹಸ ಪಡಬೇಕಾಗಿದೆ.

ಜಿಲ್ಲಾಧಿಕಾರಿ ಕಚೇರಿಗಳಲ್ಲಿ ಡಿಸಿ, ಎಡಿಸಿ ಹಾಗೂ ಎಸಿ ಕಚೇರಿಗಳು ಮೊದಲನೇ ಮಹಡಿಯಲ್ಲಿರುವುದರಿಂದ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು ಬರುವ ಹಿರಿಯರು ಮೆಟ್ಟಿಲು ಹತ್ತಿ ಸುಸ್ತಾಗಿ ಸುಧಾರಿಸಿಕೊಂಡು ಅಧಿಕಾರಿಗಳನ್ನು ಭೇಟಿ ಮಾಡಬೇಕಾಗಿದೆ.

ಅದರಲ್ಲೂ ಡಿಸಿ ಮತ್ತು ಎಸಿ ಕೋರ್ಟ್‌ಗಳಲ್ಲಿ ಭೂವ್ಯಾಜ್ಯ ವಿಚಾರಣೆ ನಡೆಯುವ ಸಂದರ್ಭದಲ್ಲಿ ಮೆಟ್ಟಿಲು ಹತ್ತಲು ಸಾಧ್ಯವಾಗದ ಹಿರಿಯರು ಬರುತ್ತಾರೆ. ಇನ್ನಿಲ್ಲದಂತೆ ಕಷ್ಟಪಡಬೇಕಾಗಿದೆ. ಈಗಿನ ಜಿಲ್ಲಾಧಿಕಾರಿ ಕಚೇರಿಗೆ ಲಿಫ್ಟ್ ವ್ಯವಸ್ಥೆ ಕಲ್ಪಿಸುವಂತೆ ಅನೇಕ ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಈಗಿನ ಜಿಲ್ಲಾಧಿಕಾರಿ ಕಚೇರಿ ಪಾರಂಪರಿಕ ಕಟ್ಟಡವಾದ್ದರಿಂದ ಲಿಫ್ಟ್ ವ್ಯವಸ್ಥೆ ಕಲ್ಪಿಸಲು ಕಾನೂನು ತೊಡಕಿದೆ ಎಂಬ ಹೇಳಿಕೆ ಅಧಿಕಾರಿಗಳ ವಲಯದಿಂದ ಕೇಳಿ ಬರುತ್ತಿದೆ. ಹಾಗಾದರೆ, ಈ ಸಮಸ್ಯೆಗೆ ಮುಕ್ತಿಯೇ ಇಲ್ಲವೇ ಎಂದು ಪ್ರಶ್ನೆ ಕಾಡುತ್ತಿದೆ.

ಈ ಆವರಣದಲ್ಲಿ ಸಾರ್ವಜನಿಕರ ಬಳಕೆ(ಪುರುಷ ಮತ್ತು ಮಹಿಳೆಯರಿಗೆ)ಗೆ ಶೌಚಾಲಯ ವ್ಯವಸ್ಥೆ ಇಲ್ಲ. ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಇದರೊಂದಿಗೆ ಪ್ರವೇಶ ದ್ವಾರದಲ್ಲಿ ಅಧಿಕಾರಿಗಳು ಕರ್ತವ್ಯ ನಿರ್ವಹಿಸುವ ಕೊಠಡಿ ಸಂಖ್ಯೆ ಇರುವ ಸೂಚನಾ ಫಲಕ ಹಳೆಯದಾಗಿದ್ದು, ಅದನ್ನು ಓದಲು ಕಣ್ಣಿಗೆ ತ್ರಾಸವಾಗುತ್ತಿದೆ.

ಅರ್ಜಿ ಆಹ್ವಾನ

ಮೈಸೂರು, ಜು. 31– ಮೈಸೂರಿನ ಎನ್.ಆರ್. ಮೊಹಲ್ಲಾದಲ್ಲಿರುವ ಮಸ್ಜಿದ್–ಇ–ಮುಬೀನ್ ವತಿಯಿಂದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲು ತೀರ್ಮಾನಿಸಿದೆ. ಆ. 15ರಂದು ಸ್ವಾತಂತ್ರ್ಯ ದಿನಾಚರಣೆಯಂದು ಧ್ವಜಾರೋಹಣ ನಂತರ ಅಂದು ಬೆಳಗ್ಗೆ 10 ಗಂಟೆಗೆ ಮಸ್ಜಿದ್ ಆವರಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಈ ಪ್ರತಿಭಾ ಪುರಸ್ಕಾರ ನೀಡುವ ಕಾರ್ಯಕ್ರಮ ನಡೆಯಲಿದೆ.

ಶೇ. 85ರಷ್ಟು ಅಂಕ ಪಡೆದಿರುವ ಎನ್.ಆರ್. ಮೊಹಲ್ಲಾ ವ್ಯಾಪ್ತಿಯ ಎಸ್‌ಎಸ್‌ಎಲ್‌ಸಿ, ಪಿಯುಸಿ ವಿದ್ಯಾರ್ಥಿಗಳು ಅಂಕಪಟ್ಟಿಯ ನಕಲು, ಭಾವಚಿತ್ರದೊಂದಿಗೆ ಕಾರ್ಯದರ್ಶಿ, ಮಸ್ಜಿದ್–ಇ–ಮುಬೀನ್, ಎನ್.ಆರ್. ಮೊಹಲ್ಲಾ, ಮೈಸೂರು ಇವರಿಗೆ ಆ. 10ರೊಳಗೆ ಅರ್ಜಿ ಸಲ್ಲಿಸು ಸಂಸ್ಥೆಯ ಪ್ರಕಟಣೆ ಕೋರಿದೆ. ವಿವರಗಳಿಗೆ ಮೊ.: 9663394372, 9448342503, 997249895 ಮೂಲಕ ಸಂಪರ್ಕಿಸಲು ಕೋರಲಾಗಿದೆ.

ಕೆ.ಆರ್.ನಗರದಲ್ಲಿ ನಾಡಪ್ರಭು ಕೆಂಪೇಗೌಡರ ಜಯಂತಿ

ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಒಕ್ಕಲಿಗರ ಕೊಡುಗೆ ಅಪಾರ

ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ, ಶಾಸಕ ಸಿ.ಎನ್.ಬಾಲಕೃಷ್ಣ



ಕೆ.ಆರ್.ನಗರ, ಜು.31– ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಒಕ್ಕಲಿಗ ಸಮಾಜದ ಕೊಡುಗೆ ಅಪಾರ. ಮುಂದಿನ ದಿನಗಳಲ್ಲಿ ನಮ್ಮ ಸಮಾಜದ ಮುಖಂಡರನ್ನು ಪಕ್ಷಾತೀತವಾಗಿ ಎಲ್ಲರೂ ಬೆಂಬಲಿಸಬೇಕು ಎಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರೂ ಆದ ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಪಟ್ಟಣದ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ಭಾನುವಾರ ನಡೆದ ನಾಡಪ್ರಭು ಕೆಂಪೇಗೌಡರ 513ನೇ ಜಯಂತ್ಯುತ್ಸವ, ಪ್ರತಿಭಾ ಪುರಸ್ಕಾರ ಮತ್ತು ಸಮಾಜದ ಗಣ್ಯರ ಸನ್ಮಾನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಒಕ್ಕಲಿಗ ಸಮಾಜದ ಹೆಮ್ಮೆಯ ಪ್ರತೀಕವಾಗಿರುವ ನಾಡಪ್ರಭು ಕೆಂಪೇಗೌಡರು ಧಾರ್ಮಿಕ, ಶೈಕ್ಷಣಿಕ ಮತ್ತು ಉತ್ತಮ ಆಡಳಿತಕ್ಕೆ ನೀಡಿದ ಕೊಡುಗೆಯನ್ನು ಪ್ರತಿಯೊಬ್ಬರೂ ಸ್ಮರಿಸಬೇಕು ಎಂದರು.

ಬೆಂಗಳೂರು ನಗರಕ್ಕೆ ಸೀಮಿತವಾಗಿದ್ದ ರಾಜ್ಯ ಒಕ್ಕಲಿಗರ ಸಂಘದ ಕಾರ್ಯ ಚಟುವಟಿಕೆಗಳನ್ನು ರಾಜ್ಯದ ಜಿಲ್ಲೆ ಮತ್ತು ತಾಲೂಕು ಕೇಂದ್ರ ಹಾಗೂ ಗ್ರಾಮಾಂತರ ಪ್ರದೇಶಗಳಿಗೂ ವಿಸ್ತರಿಸಿ ಸಂಘದಿಂದ ದೊರೆಯುವ ಎಲ್ಲಾ ಅನುಕೂಲಗಳನ್ನು ಒಕ್ಕಲಿಗರ ಮನೆ ಬಾಗಿಲಿಗೆ ತಲುಪಿಸುವ ಕೆಲಸವನ್ನು ರಾಜ್ಯ ಸಂಘ ಮಾಡುತ್ತಿದೆ ಎಂದರು.

ಒಕ್ಕಲಿಗರ ಸಂಘದ ಸದಸ್ಯತ್ವವನ್ನು ಆಸಕ್ತಿಯುಳ್ಳ ಸಮಾಜದ ಎಲ್ಲರಿಗೂ ನೀಡಲು ಸಂಘ ನಿರ್ಧರಿಸಿದ್ದು, ಸಮಾಜದ ಬಾಂಧವರು 1,600 ರೂ. ಪಾವತಿಸುವ ಮೂಲಕ ಕಡ್ಡಾಯವಾಗಿ ಸದಸ್ಯತ್ವ ಪಡೆದುಕೊಳ್ಳುವ ಮೂಲಕ ನಾವು ಮಾಡುವ ಸಮಾಜಮುಖಿ ಕೆಲಸಗಳಿಗೆ ಬೆಂಬಲ ನೀಡಬೇಕೆಂದು ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷರು ಕೋರಿದರು.

ಮೈಸೂರು ಜಿಲ್ಲಾ ಕೇಂದ್ರದಲ್ಲಿ ಒಕ್ಕಲಿಗರ ಸಂಘದಿಂದ ಕೇಂದ್ರ ಪಠ್ಯಕ್ರಮದ ಪ್ರೌಢಶಾಲೆ ಮತ್ತು ಕಾಲೇಜು ಆರಂಭಿಸಲು ಉದ್ದೇಶಿಸಲಾಗಿದ್ದು, ಜಾಗ ಖರೀದಿಸಿದ ನಂತರ ಕಾಮಗಾರಿ ಆರಂಭಿಸಲಾಗುತ್ತಿದೆ ಎಂದವರು ಪ್ರಕಟಿಸಿದರು.

ಶಾಸಕ ಸಾ.ರಾ.ಮಹೇಶ್ ಮಾತನಾಡಿ, ಕೆ.ಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ ಒಕ್ಕಲಿಗ ಜನಾಂಗ ಸರ್ವ ಜನಾಂಗದವರನ್ನು ಪ್ರೀತಿ ವಿಶ್ವಾಸದಿಂದ ಕಾಣುತ್ತಿರುವುದರಿಂದ ಕೆ.ಆರ್.ನಗರ ವಿಧಾನ ಸಭಾ ಕ್ಷೇತ್ರದ ಜನತೆ ನನ್ನನ್ನು 3 ಬಾರಿ ಶಾಸಕರನ್ನಾಗಿ ಆಯ್ಕೆ ಮಾಡಿದ್ದಾರೆ ಎಂದರು.

ಸರ್ವರನ್ನು ಪ್ರೀತಿ ವಿಶ್ವಾಸದಿಂದ ಕಾಣುವ ಒಕ್ಕಲಿಗ ಸಮಾಜ ಇತರರಿಗೆ ಮಾದರಿಯಾಗಿದೆ ಎಂದು ಪ್ರಶಂಸೆ ವ್ಯಕ್ತಪಡಿಸಿದ ಅವರು, ಒಕ್ಕಲಿಗ ಸಮಾಜ ನಾಡಿಗೆ ಮತ್ತು ರಾಷ್ಟ್ರಕ್ಕೆ ಹಲವು ಮಹನೀಯರು ಮತ್ತು ಸಾಧಕರನ್ನು ಕೊಡುಗೆ ನೀಡಿದ್ದು ವೀರ ಕನ್ನಡಿಗ ಇಮ್ಮಡಿ ಪುಲಿಕೇಶಿ ರಾಷ್ಟ್ರವನ್ನು ಆಳಿದ್ದನ್ನು ಬಿಟ್ಟರೆ ನಾಡಿನ ಮಣ್ಣಿನ ಮಗ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ದೇಶದ ಚುಕ್ಕಾಣಿ ಹಿಡಿದು ನಮ್ಮ ಗೌರವವನ್ನು ಮುಗಿಲೆತ್ತರಕ್ಕೆ ಏರಿಸಿದ್ದಾರೆಂದು ಶ್ಲಾಘನೆ ವ್ಯಕ್ತಪಡಿಸಿದರು.

ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ, ಒಕ್ಕಲಿಗ ಸಮಾಜದ ಹಿರಿಯ ಮುಖಂಡರಾದ ಮಿರ್ಲೆ ಲೋಕನಾಥ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಭಿನಂದಿಸಿ ವಿಧಾನ ಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ರಾಜ್ಯ ಉದ್ಯಮಿ ಮಿರ್ಲೆ ವರದರಾಜು, ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್.ಬಾಲಕೃಷ್ಣ, ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ, ನಿರ್ದೇಶಕರಾದ ಡಾ.ಎಂ.ಬಿ.ಮಂಜೇಗೌಡ, ಕೆ.ವಿ.ಶ್ರೀಧರ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಮಿರ್ಲೆ ಅಣ್ಣೇಗೌಡ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ, ನಿರ್ದೇಶಕರಾದ ಡಾ.ಎ.ಬಿ.ಮಂಜೇಗೌಡ, ಕೆ.ವಿ.ಶ್ರೀಧರ, ಜಿಲ್ಲಾ ಅಧ್ಯಕ್ಷ ಪಿ. ಮರಿಸ್ವಾಮಿ, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ತಾಲೂಕು ಜೆಡಿಎಸ್ ವಕ್ತಾರ ಕೆ. ಎಲ್.ರಮೇಶ್, ಸಂಘದ ಹಿರಿಯ ಉಪಾಧ್ಯಕ್ಷ ಹೆಚ್.ಪಿ. ಪರಶುರಾಮ್, ಕಾರ್ಯದರ್ಶಿ ಬಿ.ಅಣ್ಣಾಜಿಗೌಡ, ಖಜಾಂಚಿ ಹೆಚ್.ಪಿ.ಶಿವಣ್ಣ, ನಿರ್ದೇಶಕರಾದ ಕೆಆರ್.ಲಕ್ಕೇಗೌಡ, ಎಸ್.ಪಿ. ತಮ್ಮಯ್ಯ, ಎ.ಟಿ.ಸೋಮಶೇಖರ್, ಎಸ್.ಎಂ. ಸೋಮಣ್ಣ, ಎಸ್.ಟಿ.ಕೀರ್ತಿ, ಬಿ.ಸಿದ್ದೇಗೌಡ, ಎಸ್.ಪಿ. ಆನಂದ್, ಎಂ.ಕೆ.ಮಹದೇವ, ಎಚ್.ಸಿ.ಜವರೇಗೌಡ, ಎಸ್.ಬಿ.ಚಂದ್ರೇಗೌಡ, ಕೆ.ಎಸ್.ಸೋಮಶೇಖರ್, ಜೆ.ಎಂ. ಕುಮಾರ್ ಮತ್ತಿತರರಿದ್ದರು.

3ಎಗೆ ಸೇರಿಸಲು ಹೋರಾಟ

ಉತ್ತರ ಕರ್ನಾಟಕದಲ್ಲಿರುವ 40 ಲಕ್ಷ ಕೂಡು ಒಕ್ಕಲಿಗರನ್ನು ಪ್ರವರ್ಗ '3ಎ'ಗೆ ಸೇರಿಸಬೇಕೆಂದು ರಾಜ್ಯ ಒಕ್ಕಲಿಗರ ಸಂಘ ಹೋರಾಟ ಕೈಗೊಳ್ಳಲಿದ್ದು, ಸರ್ಕಾರ ಈ ಬಗ್ಗೆ ಗಮನಹರಿಸಿ ಕೂಡಲೇ ಅವರನ್ನು ಆ ವರ್ಗಕ್ಕೆ ಸೇರಿಸಲು ಸಮಾಜದ ಎಲ್ಲಾ ಶಾಸಕರು ಪಕ್ಷಾತೀತವಾಗಿ ಸರ್ಕಾರದ ಮೇಲೆ ಒತ್ತಡ ಹಾಕಬೇಕು, ಹೋರಾಟ ಮಾಡಬೇಕು.

- ಸಿ.ಎನ್.ಬಾಲಕೃಷ್ಣ, ಶಾಸಕ.

ಆವಾಸ ಸ್ಥಾನಕ್ಕಾಗಿ ವ್ಯಾಘ್ರಗಳ ಕಾದಾಟ: ಗಂಡು ಹುಲಿ ಸಾವು



ಹುಣಸೂರು, ಜು.31– ನಾಗರಹೊಳೆ ರಾಷ್ಟ್ರೀಯ ಉದ್ಯಾನವನದಲ್ಲಿ ಆವಾಸ ಸ್ಥಾನಕ್ಕಾಗಿ ನಡೆದ ಕಾದಾಟದಲ್ಲಿ ಸುಮಾರು 7–8 ವರ್ಷದ ಗಂಡು ಹುಲಿ ಸಾವನ್ನಪ್ಪಿದೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಆನೆ ಚೌಕೂರು ವನ್ಯಜೀವಿ ವಲಯದ ಚೆನ್ನಂಗಿ ಶಾಖೆಯ ಅಬ್ಲೂರು ಉಪ ಅರಣ್ಯಾಧಿಕಾರಿ ಮತ್ತು ಸಿಬ್ಬಂದಿ ಗಸ್ತು ಮಾಡುತ್ತಿದ್ದ ವೇಳೆ ಹುಲಿ ಸಾವನ್ನಪ್ಪಿರುವುದು ಪತ್ತೆಯಾಗಿದೆ.

ಸಿಬ್ಬಂದಿ ಮಾಹಿತಿ ಮೇರೆಗೆ ನಾಗರಹೊಳೆ ಹುಲಿ ಯೋಜನೆ ನಿರ್ದೇಶಕ ಹರ್ಷಕುಮಾರ್ ಚಿಕ್ಕನರಗುಂದ, ಎಸಿಎಫ್ ಎ.ವಿ.ಸತೀಶ್ ಆರ್‌ಎಫ್‌ಓ ಗಣರಾಜ್ ಪಟಗಾರ್, ಆನೆಚೌಕೂರು ವನ್ಯಜೀವಿ ವಲಯ ಹಾಗೂ ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರಕ್ಕೆ ನಿರ್ದೇಶನಗೊಂಡ ಬೋಸ್ ಮಾದಪ್ಪ, ಮುಖ್ಯ ವನ್ಯಜೀವಿ ಪರಿಪಾಲಕರಾಗಿ ನಿರ್ದೇಶಿತರಾದ ಶರೀನ್ ಸುಬ್ಬಯ್ಯ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ನಾಗರಹೊಳೆ ಪಶುವೈದ್ಯ ಡಾ.ರಮೇಶ್ ಮತ್ತು ಪಾಲಿಬೆಟ್ಟ ಪಶು ವೈದ್ಯಾಧಿಕಾರಿ ಡಾ.ವಿ.ಎಸ್. ನವೀನ್ ಕುಮಾರ್ ಹುಲಿಯ ಮರಣೋತ್ತರ ಪರೀಕ್ಷೆ ನಡೆಸಿದರು. ಅಂದಾಜು ಏಳರಿಂದ ಎಂಟು ವರ್ಷದ ಗಂಡು ಹುಲಿಯಾಗಿದ್ದು, ತನ್ನ ಆವಾಸ ಸ್ಥಾನದ ಅಧಿಪತ್ಯಕ್ಕಾಗಿ ಬೇರೊಂದು ಹುಲಿಯೊಂದಿಗೆ ಕಾದಾಟದಲ್ಲಿ ಉಂಟಾದ ಗಾಯದಿಂದ ಮೃತಪಟ್ಟಿದೆ ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ.

ಹೆಚ್ಚಿನ ಪರೀಕ್ಷೆಗಾಗಿ ಹುಲಿ ಕಳೇಬರದ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ವರದಿ ಬಂದ ನಂತರವಷ್ಟೆ ನಿಖರ ಮಾಹಿತಿ ತಿಳಿಯಲಿದೆ. ಹುಲಿಯ ಕಳೇಬರವನ್ನು ಪಂಚಾಯಿತಿದಾರರ ಸಮಕ್ಷಮ ಸುಡಲಾಯಿತೆಂದು ಹುಲಿ ಯೋಜನೆ ನಿರ್ದೇಶಕ ಹರೀಶ್ ಕುಮಾರ್ ನರಗುಂದ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ರಾಜ್ಯದ ಜನರ ನೆಮ್ಮದಿ ಜೀವನಕ್ಕೆ ಸಿದ್ದರಾಮಯ್ಯಗೆ ಅಧಿಕಾರ ನೀಡಿ



ತಿ.ನರಸೀಪುರ, ಜು.31– ಕೋಮು ಸಾಮರಸ್ಯ ಹಾಳಾಗಿ, ಆರ್ಥಿಕತೆ ಪಾತಾಳಕ್ಕೆ ಕುಸಿದಿರುವ ಸಂಕಷ್ಟದ ಕಾಲದಲ್ಲಿ ರಾಜ್ಯದ ಜನರು ನೆಮ್ಮದಿ ಜೀವನ ನಡೆಸುವಂತಾಗಲು ಮತ್ತೊಮ್ಮೆ ಸಿದ್ದರಾಮಯ್ಯ ಅವರಿಗೆ ಅಧಿಕಾರ ನೀಡಬೇಕಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ಮತ್ತೊಂದು ಅವಕಾಶ ನೀಡಬೇಕು ಎಂದು ಪುರಸಭಾ ಸದಸ್ಯ ಬಾದಾಮಿ ಮಂಜು ಹೇಳಿದರು.

ಪಟ್ಟಣದ ಕಡ್ಲೆ ರಂಗಮ್ಮನ ಬೀದಿಯಲ್ಲಿ ಭಾನುವಾರ ದಾವಣಗೆರೆಯಲ್ಲಿ ಆ.3ರಂದು ನಡೆಯುವ ಮಾಜಿ ಸಿಎಂ, ವಿಧಾನಸಭೆ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರ 75ನೇ ಹುಟ್ಟುಹಬ್ಬದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ರಾಜ್ಯವಲ್ಲದೆ ದೇಶವೇ ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ನಗುತ್ತಿರುವ ಈ ಸಮಯದಲ್ಲಿ ಬಡವರು ಮತ್ತು ರೈತ ಪರ ಕಾಳಜಿಯುಳ್ಳ ಸಿದ್ದರಾಮಯ್ಯ ಅವರಂತಹವರಿಗೆ ಅಧಿಕಾರ ನೀಡಬೇಕಾದ ಅಗತ್ಯವಿದೆ ಎಂದರು.

ಹಿರಿಯ ಮುಖಂಡ ಗುರುಮಲ್ಲ ಮಾತನಾಡಿ, ಆ.3 ರಂದು ನಡೆಯುತ್ತಿರುವ ಅಮೃತ ಮಹೋತ್ಸವದಲ್ಲಿ ಸಿದ್ದರಾಮಯ್ಯ ಅವರಿಗೆ ಶಕ್ತಿ ತುಂಬಲು ಲಕ್ಷ ಸಂಖ್ಯೆಯಲ್ಲಿ ಜನರು ಭಾಗವಹಿಸಬೇಕಿದೆ. ನರಸೀಪುರ ವಿಧಾನಸಭಾ ಕ್ಷೇತ್ರದಿಂದಲೂ 5ಸಾವಿರಕ್ಕೂ ಹೆಚ್ಚು ಜನರನ್ನು ಕರದೊಯ್ಯಲು ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಹಾಗೂ ವಸತಿ ಯೋಜನೆ ಸಮಿತಿ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ನೇತೃತ್ವದಲ್ಲಿ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಕುರುಬರ ಸಂಘದ ಕಾರ್ಯಾಧ್ಯಕ್ಷ ಪುಳ್ಳಾರಿ ಮಾದೇಶ್, ಮುಖಂಡರಾದ ನಾಗರಾಜು, ಎಸ್.ಮನು, ಸಿದ್ದು, ವಿನೋದ, ಮಧುಸೂದನ, ಗ್ಯಾಸ್ ಉಮೇಶ್, ಮದನ ಕುಮಾರ, ರವಿ, ಮಹದೇವಸ್ವಾಮಿ, ಸಿದ್ಧ, ಭರತ, ಡಿಕ್ಕಿ ಮಂಜು, ಬೆಂತಕ್ಕಿ ಮಂಜು, ಶಶಿಕುಮಾರ್, ಮೊಟ್ಟೆ ಮಹೇಶ ಹಾಗೂ ಇನ್ನಿತರರಿದ್ದರು.

ಕೆ.ಈ.ರುದ್ರಪ್ಪ ನಿಧನ



ಹುಣಸೂರು, ಜು.31– ಕೊಡಗು ಜಿಲ್ಲೆ ಕುಶಾಲನಗರ ಸಮೀಪದ ಕೂಡಿಗೆ ಗ್ರಾಮದ ನಿವಾಸಿ ಹಾಗೂ ಆರೋಗ್ಯ ಇಲಾಖೆ ನಿವೃತ್ತ ಕಚೇರಿ ಅಧಿಕ್ಷಕ ಕೆ.ಈ.ರುದ್ರಪ್ಪ (66) ಭಾನುವಾರ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಕೂಡಿಗೆಯ ಮೃತರ ತೋಟದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವೆಂಕಟೇಶ್



ಕಡಕೊಳ, ಜು.31– ಗ್ರಾಮದ ಈಡಿಗ ಸಮುದಾಯದ ಮುಖಂಡ ವೆಂಕಟೇಶ್(55) ಶನಿವಾರ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ತೋಟದಲ್ಲಿ ಭಾನುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಾರ್ವಜನಿಕ ಸೇವೆಗೆ ಜೀವನ ಮುಡಿಪಾಗಿಟ್ಟ ಧ್ರುವನಾರಾಯಣ್

ಶಾಸಕ ಯತೀಂದ್ರ



ನಂಜನಗೂಡು, ಜು.31– ಮಾಜಿ ಸಂಸದ ಆರ್.ಧ್ರುವನಾರಾಯಣ್ ಸಾರ್ವಜನಿಕ ಸೇವೆಗಾಗಿಯೇ ತಮ್ಮ ಜೀವನ ಮುಡಿಪಾಗಿಟ್ಟವರು. ಅವರು ಯುವಕರ ಸ್ಫೂರ್ತಿದಾಯಕ ನಾಯಕ ಎಂದು ಶಾಸಕ ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ನಗರದ ಮಹದೇಶ್ವರ ಯಾತ್ರಿ ನಿವಾಸದಲ್ಲಿ ಆಯೋಜಿಸಿದ್ದ ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ 61ನೇ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಸಾಹಿತಿ ದೇವನೂರ ಮಹದೇವ ಅವರ 'ಆರ್‌ಎಸ್‌ಎಸ್ ಆಳ ಮತ್ತು ಅಗಲ ಕೃತಿ' ವಿತರಿಸಿ ಮಾತನಾಡಿದರು. ಧ್ರುವನಾರಾಯಣ್ ಅವರು ಎಲ್ಲರನ್ನೂ ಪ್ರೀತಿ ವಿಶ್ವಾಸದಿಂದ ಕಾಣುವ ವ್ಯಕ್ತಿತ್ವವುಳ್ಳವರು. ನನ್ನಂತಹ ಯುವ ನಾಯಕರಿಗೆ ಮಾರ್ಗದರ್ಶನ ನೀಡಿ ಒಟ್ಟಾಗಿ ಕರೆದುಕೊಂಡು ಹೋಗುವ ಅಪರೂಪದ ರಾಜಕಾರಣಿ. ಪಕ್ಷ ಸಂಘಟನೆಯಲ್ಲಿ ಸಕ್ರೀಯವಾಗಿರುವ ಅವರಿಗೆ ದೇವರು ಆಯಸ್ಸು, ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಶುಭ ಹಾರೈಸಿದರು.

ಫ್ಯಾಸಿಸ್ಟ್ ಶಕ್ತಿಗಳು ದೇಶದಲ್ಲಿ ಸಮಾಜ ಒಡೆಯುವಂತಹ ದೊಡ್ಡ ಶಕ್ತಿಗಳಾಗಿ ಅಪಾಯವೆನಿಸಿವೆ. ವಿಶಿಷ್ಟವೆಂದರೆ ಶೋಷಣೆಗೆ ಒಳಗಾದವರೇ ಈ ಸಿದ್ಧಾಂತಕ್ಕೆ ಬಲಿಯಾಗುತ್ತಿದ್ದಾರೆ. ಈ ಶಕ್ತಿಗಳನ್ನು ಕಟ್ಟಿ ಹಾಕದಿದ್ದಲ್ಲಿ ದೇಶದಲ್ಲಿ ಗುಲಾಮಗಿರಿಯಲ್ಲಿ ಬದುಕುವ ಸನ್ನಿವೇಶ ನಿರ್ಮಾಣವಾಗಲಿದೆ. ಆದ್ದರಿಂದ ಕಾರ್ಯಕರ್ತರು ಇಂತಹ ಶಕ್ತಿ ವಿರುದ್ಧ ಎಚ್ಚರವಾಗಿರಬೇಕು. ದೇವನೂರು ಮಹದೇವರ ಆರ್‌ಎಸ್‌ಎಸ್ ಆಳ ಮತ್ತು ಅಗಲ ಕೃತಿ ಅಪರೂಪದ ಕೃತಿ ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಕ್ಷೇತ್ರದಲ್ಲಿ ಮೊದಲ ಬಾರಿಗೆ 53 ಹಳ್ಳಿಗಳಿಗೆ ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಜಾರಿಗೊಳಿಸಿದ ಕೀರ್ತಿ ಧ್ರುವನಾರಾಯಣ್‌ಗೆ ಸಲ್ಲುತ್ತದೆ. ಕೇಂದ್ರ ಅನುದಾನ ತಂದು ಹುಲ್ಲಹಳ್ಳಿ ರಸ್ತೆ, ರಾಷ್ಟ್ರೀಯ, ರಾಜ್ಯ ರಸ್ತೆಗಳ ಅಭಿವೃದ್ಧಿಪಡಿಸುವ ಜೊತೆಗೆ ಕಾರ್ಖಾನೆಯ ಸಿಎಸ್‌ಆರ್ ಅನುದಾನವನ್ನೂ ಸಹ ಶಾಲೆ ನಿರ್ಮಾಣಕ್ಕೆ ಬಳಸುವ ಮೂಲಕ ಅಭಿವೃದ್ಧಿಗೆ ಮುನ್ನುಡಿ ಬರೆದ ನಾಯಕ. ಅವರ ಅವಧಿಯಲ್ಲಿ ಚಾಮರಾಜನಗರದಲ್ಲಿ ಮೆಡಿಕಲ್ ಕಾಲೇಜು, ಕೃಷಿ, ಪದವಿ ಕಾಲೇಜುಗಳು, ಇಂಜಿನಿಯರಿಂಗ್ ಕಾಲೇಜುಗಳನ್ನು ತಂದು ರಾಜ್ಯದಲ್ಲಿ ಮೊದಲಿಗರಾಗಿ ದೇಶಕ್ಕೆ 4ನೇ ಯವರಾಗಿ ಅಭಿವೃದ್ಧಿಯ ಹರಿಕಾರ ಎನಿಸಿದ್ದಾರೆ.

ಇದಕ್ಕೂ ಮುನ್ನ ನಗರದ ಸಾರ್ವಜನಿಕ ಆಸ್ಪತ್ರೆ, ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಕೃಷ್ಣ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು, ಬಿಸ್ಕಟ್, ಬ್ರೆಡ್ ಹಂಚಿಕೆ ಮಾಡುವ ಮೂಲಕ ವಿನೂತನವಾಗಿ ಹುಟ್ಟುಹಬ್ಬ ಆಚರಿಸಲಾಯಿತು.

ಸಮಾರಂಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಕುರಹಟ್ಟಿ ಮಹೇಶ್, ವಾಲ್ಮಿಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಕಾಂಗ್ರೆಸ್ ಹಿಂದುಳಿದ ವರ್ಗ ವಿಭಾಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಎಸ್ಸಿ ಘಟಕ ಅಧ್ಯಕ್ಷ ಶಿವಣ್ಣ, ತಾಪಂ ಮಾಜಿ ಅಧ್ಯಕ್ಷ ಬಿ.ಎಂ.ನಾಗೇಶ್ ರಾಜ್, ಜಿಪಂ ಮಾಜಿ ಸದಸ್ಯೆ ಲತಾಸಿದ್ದಶೆಟ್ಟಿ, ತಾಪಂ ಮಾಜಿ ಅಧ್ಯಕ್ಷ ಶಂಕರಪ್ಪ, ನಗರಸಭಾ ಸದಸ್ಯರಾದ ಗಂಗಾಧರ್, ಎಸ್.ಪಿ. ಮಹೇಶ್, ಶ್ರೀಕಂಠಸ್ವಾಮಿ, ಸಿದ್ದಿಖ್, ಪ್ರದೀಪ್, ಮಾಜಿ ನಗರಸಭಾ ಸದಸ್ಯ ಮಂಜುನಾಥ್, ಎಪಿಎಂಸಿ ಮಾಜಿ ಸದಸ್ಯ ಮುದ್ದುಮಾದಶೆಟ್ಟಿ, ಯುವ ಘಟಕ ಅಧ್ಯಕ್ಷ ಅಶೋಕ್, ದೊರೆಸ್ವಾಮಿ ನಾಯಕ, ಶಿವಪ್ಪದೇವರು, ಎಂ.ಮಾದಪ್ಪ, ವಿಜಯ್‌ಕುಮಾರ್, ಸೋಮು ಸೇರಿದಂತೆ ಕಾರ್ಯಕರ್ತರಿದ್ದರು.

ಕೋಟೆಯಲ್ಲಿ ಸೇವಾ ಕಾರ್ಯಗಳೊಂದಿಗೆ ಧ್ರುವನಾರಾಯಣ್ ಹುಟ್ಟುಹಬ್ಬ ಆಚರಣೆ

● ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ 12 ಮಂದಿಗೆ ಸಹಾಯಧನ ● ಸಾವಿರ ತೆಂಗಿನ ಸಸಿ ವಿತರಣೆ ● ಆಹಾರ ಕಿಟ್, ಸಾರ್ವಜನಿಕರಿಗೆ ಸಂವಿಧಾನ ಓದು ಪುಸ್ತಕ ವಿತರಣೆ







ಧ್ರುವನಾರಾಯಣ್ ಅವರ 61ನೇ ಹುಟ್ಟುಹಬ್ಬ ಅಂಗವಾಗಿ ಹೆಚ್.ಡಿ.ಕೋಟೆ ಅಂಬೇಡ್ಕರ್ ಭವನದಲ್ಲಿ ಕೇಕ್ ಕತ್ತರಿಸಿ ಸಂಭ್ರಮಾಚರಣೆ ಮಾಡಲಾಯಿತು. ಮತ್ತೊಂದು ಚಿತ್ರದಲ್ಲಿ ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ 12 ಮಂದಿಗೆ ಶಾಸಕ ಅನಿಲ್ ಚಿಕ್ಕಮಾದು ತಲಾ 5 ಸಾವಿರ ರೂ. ಧನ ಸಹಾಯ ವಿತರಿಸಿದರು. ಇನ್ನೊಂದು ಚಿತ್ರದಲ್ಲಿ ಸಾರ್ವಜನಿಕ ಆಸ್ಪತ್ರೆ ರೋಗಿಗಳಿಗೆ ಶಾಸಕ ಅನಿಲ್ ಚಿಕ್ಕಮಾದು ಹಣ್ಣು ಹಂಪಲು ವಿತರಣೆ ಮಾಡಿದರು. ಈ ವೇಳೆ ಸತೀಶ್‌ಗೌಡ, ಹಿರೇಹಳ್ಳಿ ಸೋಮೇಶ್ ಇನ್ನಿತರರಿದ್ದರು.

ಹೆಚ್.ಡಿ.ಕೋಟೆ, ಜು.31– ವಿವಿಧ ಸೇವಾ ಕಾರ್ಯಗಳೊಂದಿಗೆ ಪಟ್ಟಣದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರ 61ನೇ ಹುಟ್ಟುಹಬ್ಬವನ್ನು ಭಾನುವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮುಂಜಾನೆಯೇ ಪಟ್ಟಣದ ಚಾಮುಂಡೇಶ್ವರಿ ದೇವಾಲಯಕ್ಕೆ ತೆರಳಿದ ಶಾಸಕ ಅನಿಲ್ ಚಿಕ್ಕಮಾದು, ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಹಾಗೂ ಹೆಚ್.ಡಿ.ಕೋಟೆ ಧ್ರುವನಾರಾಯಣ್ ಅಭಿಮಾನಿ ಬಳಗದ ಸದಸ್ಯರು, ದೇವಿಗೆ ವಿಶೇಷ ಪೂಜೆ ಸಲ್ಲಿಸಿ ಧ್ರುವನಾರಾಯಣ್ ಅವರಿಗೆ ದೇವರು ಉತ್ತಮ ಆರೋಗ್ಯ, ಆಯಸ್ಸು ಹಾಗೂ ಉನ್ನತ ಅಧಿಕಾರ ನೀಡಲಿ ಎಂದು ಪ್ರಾರ್ಥಿಸಿದರು. ಬಳಿಕ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ಅಲ್ಲಿನ ಒಳರೋಗಿ ಗಳಿಗೆ ಹಣ್ಣು ಹಂಪಲು ವಿತರಿಸಿದರು. ನಂತರ ಪಟ್ಟಣ ಸಮೀಪದ ಬೋಚಿ ಕಟ್ಟೆ ಗ್ರಾಮಕ್ಕೆ ತೆರಳಿದ ಮುಖಂಡರು ಚಿತ್ತಧಾಮದ ಮಾನಸಿಕ ರೋಗಿಗಳಿಗೆ ಹೋಳಿಗೆ ಊಟ ವ್ಯವಸ್ಥೆ ಮಾಡಿದರು.

ಅಂಬೇಡ್ಕರ್ ಭವನದಲ್ಲಿ ಧ್ರುವ ನಾರಾಯಣ್ ಹುಟ್ಟುಹಬ್ಬ: ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಧ್ರುವನಾರಾಯಣ್ ಅಭಿಮಾನಿ ಬಳಗ ಆಯೋಜಿಸಿದ್ದ ಧ್ರುವ ನಾರಾಯಣ್ ಅವರ 61ನೇ ಹುಟ್ಟುಹಬ್ಬ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಶಾಸಕ ಅನಿಲ್ ಚಿಕ್ಕಮಾದು ಉದ್ಘಾಟಿಸಿದರು. ಅಲ್ಲದೇ ಬೃಹತ್ ಕೇಕ್ ಕತ್ತರಿಸುವ ಮೂಲಕ, ಸಿಹಿ ಹಂಚಿ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಧ್ರುವನಾರಾಯಣ್ ಹುಟ್ಟುಹಬ್ಬ ಅಂಗವಾಗಿ ತಾಲೂಕಿನಲ್ಲಿ ಕಿಡ್ನಿ ವೈಫಲ್ಯದಿಂದ ಬಳಲುತ್ತಿರುವ 12 ಮಂದಿ ರೋಗಿಗಳಿಗೆ ಶಾಸಕ ಅನಿಲ್ ಚಿಕ್ಕಮಾದು ತಲಾ 5 ಸಾವಿರ ರೂ. ಧನಸಹಾಯ ವಿತರಿಸಿದರು. ಅಲ್ಲದೇ ಬಡವರಿಗೆ ಆಹಾರ ಕಿಟ್, ರೈತರಿಗೆ 1000 ತೆಂಗಿನ ಸಸಿಗಳನ್ನು ವಿತರಿಸಲಾಯಿತು. ಇದೇ ವೇಳೆ ಸಾರ್ವಜನಿಕರಿಗೆ 500 ಸಂವಿಧಾನ ಓದು ಪುಸ್ತಕ ವಿತರಿಸಲಾಯಿತು. ಮೈಸೂರು ಕೆವಿಸಿ ಆಸ್ಪತ್ರೆ ವತಿಯಿಂದ ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಆರೋಗ್ಯ ತಪಾಸಣಾ ಶಿಬಿರದಲ್ಲಿ ಸುಮಾರು 400 ಮಂದಿ ತಪಾಸಣೆಗೆ ಒಳಪಟ್ಟರು. ರಕ್ತದಾನ ಶಿಬಿರದಲ್ಲಿ 72 ಮಂದಿ ರಕ್ತದಾನ ಮಾಡಿದರು. ಕಾರ್ಯಕ್ರಮದಲ್ಲಿ ಸುಮಾರು 2000ಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು. ಎಲ್ಲರಿಗೂ ಹೋಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಏಜಾಜ್ ಪಾಷ, ಮನಗನಹಳ್ಳಿ ಮಾದಪ್ಪ, ನಂಜನಗೂಡು ಕೆಪಿಸಿಸಿ ಉಸ್ತುವಾರಿ ಹಿರೇಹಳ್ಳಿ ಸೋಮೇಶ್, ಕಾಂಗ್ರೆಸ್ ಮುಖಂಡ ಸತೀಶ್‌ಗೌಡ, ಧ್ರುವನಾರಾಯಣ್ ಅಭಿಮಾನಿ ಬಳಗದ ಅಧ್ಯಕ್ಷ ಹೆಚ್.ಸಿ. ನರಸಿಂಹಮೂರ್ತಿ, ಮೈಸೂರು ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಆನಂದ್, ಮೈಮುಲ್ ನಿರ್ದೇಶಕ ಈರೇಗೌಡ, ಹೊಂಡಾ ನಯಾಜ್, ವಿಶ್ವಕರ್ಮ ರಾಜು, ನಾಗನಹಳ್ಳಿ ಪ್ರದೀಪ, ಜಿಪಂ ಸದಸ್ಯರಾದ ಚಿಕ್ಕವೀರನಾಯಕ, ಪಿ.ರವಿ, ಹೆಚ್.ಸಿ.ಮಂಜುನಾಥ್, ಬಿ.ವಿ.ಬಸವರಾಜು, ಭಾಗ್ಯಲಕ್ಷ್ಮೀ, ಗಣೇಶ್ ಆಚಾರ್, ಗುರುಸ್ವಾಮಿ, ಕ್ಯಾತನಹಳ್ಳಿ ನಾಗರಾಜು, ರಾಜನಾಯಕ, ಪುರಸಭಾ ಸದಸ್ಯರಾದ ಪುಟ್ಟಬಸವ ನಾಯಕ, ಪ್ರೇಮ್ ಸಾಗರ್, ವೆಂಕಟೇಶ್, ಆಸಿಫ್ ಇಕ್ಬಾಲ್, ಸುಹಾಸಿನಿ, ಶಾಂತಮ್ಮ, ನಾಗಮ್ಮ, ಭಾನುಮತಿ, ಮುಖಂಡರಾದ ಜಯರಾಮ್, ರವಿ, ಶಿವಮಲ್ಲಪ್ಪ, ಗುರುಸ್ವಾಮಿ, ಪ್ರಕಾಶ, ಸೌಮ್ಯ, ಭಾಸ್ಕರ್, ಮಲ್ಲೇಶ್, ಮದ್ದುಮಲ್ಲಯ್ಯ, ಮರಿದೇವಯ್ಯ, ಬಾಲಯ್ಯ, ಶಿವಯ್ಯ, ಶ್ರೀಕಂಠ ಇತರರಿದ್ದರು.

ತಾಲೂಕಿನ ಅಭಿವೃದ್ಧಿ ಧ್ರುವನಾರಾಯಣ್ ಕೊಡುಗೆ ಅಪಾರ

ಹೆಚ್.ಡಿ.ಕೋಟೆ: ತಾಲೂಕಿನ ಅಭಿವೃದ್ಧಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅಪಾರ ಕೊಡುಗೆ ನೀಡಿದ್ದಾರೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಧ್ರುವನಾರಾಯಣ್ ಅಭಿಮಾನಿ ಬಳಗ ಆಯೋಜಿಸಿದ್ದ ಧ್ರುವನಾರಾಯಣ್ ಅವರ 61ನೇ ಹುಟ್ಟುಹಬ್ಬ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿಂದುಳಿದ ತಾಲೂಕು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಪಟ್ಟಣದಲ್ಲಿ ತಾಯಿ ಮಕ್ಕಳ ಆಸ್ಪತ್ರೆ, ತಂಬಾಕು ಮಂಡಳಿ ಹರಾಜು ಮಾರುಕಟ್ಟೆ, ಮೊರಾರ್ಜಿ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು, ಪುರಸಭೆ ಕಟ್ಟಡ ನಿರ್ಮಾಣ, ರಾಜೀವ್ ಗಾಂಧಿ ಸೇವಾ ಕೇಂದ್ರಗಳು, ಸಮುದಾಯ ಭವನಗಳ ನಿರ್ಮಾಣ, ಎಸ್‌ಸಿಪಿ, ಟಿಎಸ್‌ಪಿ ಯೋಜನೆ ಸೇರಿದಂತೆ 200 ಕೋಟಿ ವೆಚ್ಚದಲ್ಲಿ ಗ್ರಾಮಗಳಲ್ಲಿ ಕಾಂಕ್ರೀಟ್ ರಸ್ತೆ, ಚರಂಡಿ ನಿರ್ಮಾಣ, ನನ್ನ ತಂದೆ ದಿ.ಚಿಕ್ಕಮಾದು ಅವರ ಜೊತೆಗೂಡಿ ಸಾವಿರ ಕೋಟಿಗೂ ಹೆಚ್ಚು ಕೆಲಸ ಮಾಡಿರುವ ಹೆಗ್ಗಳಿಕೆ ಧ್ರುವನಾರಾಯಣ್ ಅವರಿಗೆ ಸಲ್ಲುತ್ತದೆ ಎಂದರು. ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಸರಗೂರು ತಾಲೂಕು ರಚನೆ, ಹೆಚ್.ಡಿ.ಕೋಟೆ ಪಪಂ ಅನ್ನು ಪುರಸಭೆಗೆ ಮೇಲ್ದರ್ಜೆಯಾಗಿ ಪರಿವರ್ತಿಸಿದ್ದು, ಅನೇಕ ಜನಪರ ಯೋಜನೆಗಳನ್ನು ತಾಲೂಕಿಗೆ ತರಲು ಶ್ರಮಿಸಿದ್ದಾರೆ ಎಂದರು.

ನನ್ನ ತಂದೆ ನಿಧನ ನಂತರ ನಾನು ರಾಜಕೀಯ ಪ್ರವೇಶಿಸಲು, ಶಾಸಕನಾಗಲು ಧ್ರುವನಾರಾಯಣ್ ಮುಖ್ಯ ಕಾರಣ ಎಂದು ಹೆಮ್ಮೆಯಿಂದ ಹೇಳಿದರು.

ಸುರತ್ಕಲ್ ಫಾಜಿಲ್ ಹತ್ಯೆ ಐದು ಆರೋಪಿಗಳ ಬಂಧನ, ಕಾರು ವಶಕ್ಕೆ

ಮಂಗಳೂರು: ದಕ್ಷಿಣ ಕನ್ನಡದ ಸುರತ್ಕಲ್‌ನಲ್ಲಿ ನಡೆದಿದ್ದ ಫಾಜಿಲ್ ಹತ್ಯೆ ಆರೋಪಕ್ಕೆ ಸಂಬಂಧಿಸಿದಂತೆ ಮಂಗಳೂರು ಪೊಲೀಸರು ಐವರು ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ತಿಳಿದುಬಂದಿದೆ.

ಇದೇ ಜುಲೈ 28ರ ರಾತ್ರಿ ಯುವಕ ಫಾಜಿಲ್‌ನ ಕೊಲೆಗೈದಿದ್ದ ಆರೋಪದ ಮೇರೆಗೆ ಐದು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಪ್ರಕರಣದ ಮತ್ತೋರ್ವ ಪ್ರಮುಖ ಆರೋಪಿ ಪರಾರಿಯಾಗಿದ್ದು, ಆತನ ಬಂಧನಕ್ಕೆ ಪೊಲೀಸರು ಶೋಧ ಮುಂದುವರೆಸಿದ್ದಾರೆ. ಕೊಲೆಗೆ ಆರೋಪಿಗಳನ್ನು ಕರೆತಂದಿದ್ದ ಕಾರು ಚಾಲಕನನ್ನೂ ವಶಕ್ಕೆ ಪಡೆದಿರುವ ಪೊಲೀಸರು ತೀವ್ರ ವಿಚಾರಣೆ ನಡೆಸುತ್ತಿದ್ದಾರೆ. ಪೊಲೀಸರು ಮೊದಲು ಘಟನಾ ಸ್ಥಳಕ್ಕೆ ಬಂದಿದ್ದ ಕಾರನ್ನು ಗುರುತಿಸಿದ್ದು, ಈ ವೇಳೆ ಹ್ಯುಂಡೈ ಇಯಾನ್ ಕಾರು ಅನ್ನೋದು ಗೊತ್ತಾಗಿತ್ತು. ನಂತರ ಮಂಗಳೂರಲ್ಲಿದ್ದ ಎಲ್ಲಾ ಇಯಾನ್ ಕಾರುಗಳ ಬಗ್ಗೆ ಮಾಹಿತಿ ಪಡೆದಿದ್ದಾರೆ. ಅದರಲ್ಲಿ ಬಿಳಿ ಬಣ್ಣದ ಕಾರುಗಳ ಮಾಹಿತಿ ಕಲೆ ಹಾಕಲು ಪೊಲೀಸರು ಮುಂದಾಗಿದ್ದರು. ಈ ವೇಳೆ ಇಯಾನ್ ಕಾರು ಮಾಲೀಕರನ್ನು ಕರೆಸಿ ವಿಚಾರಣೆ ನಡೆಸಿದ್ದರು.

ಆರೋಪಿಗಳು ಕೊಲೆ ನಡೆದ 500 ಮೀಟರ್ ದೂರದಲ್ಲಿ ಕಾರು ಪಾರ್ಕ್ ಮಾಡಿದ್ದರು. ಪಾರ್ಕ್ ಮಾಡಿ ಕಾರಿನಲ್ಲಿ ಮಂಕಿ ಕ್ಯಾಪ್ ಧರಿಸಿ ಕುಳಿತಿದ್ದರು. ಈ ಎಲ್ಲಾ ದೃಶ್ಯಗಳು ಸಿಸಿಟಿವಿಯಲ್ಲಿ ಸೆರೆಯಾಗಿದೆ. ಈ ಬಗ್ಗೆ ಮಾಹಿತಿ ನೀಡಿರುವ ಪೊಲೀಸ್ ಆಯುಕ್ತ ಶಶಿಕುಮಾರ್ ಅವರು, ಪ್ರಕರಣ ಸಂಬಂಧ ಈ ವರೆಗೂ 51 ಜನರನ್ನು ವಿಚಾರಣೆ ಮಾಡಿದ್ದೇವೆ. 10–12ಕ್ಕೂ ಹೆಚ್ಚು ಕಾರು ವಶಕ್ಕೆ ಪಡೆದು ತನಿಖೆ ಮಾಡಿದ್ದೇವೆ. ಸುರತ್ಕಲ್ ಹೊರವಲಯದಲ್ಲಿ ಕಾರು ಅಜಿತ್ ಎಂಬಾತನನ್ನು ವಶಕ್ಕೆ ಪಡೆದಿದ್ದೇವೆ. ಅಜಿತ್ ಒಂದಷ್ಟು ಮಾಹಿತಿ ಕೊಟ್ಟಿದ್ದಾನೆ. ಅಜಿತ್ ಜೊತೆ ಓರ್ವ ಆರೋಪಿ ಒಡನಾಟ ಹೊಂದಿದ್ದ ಆರೋಪಿ ಹಲವು ಬಾರಿ ಕಾರು ತೆಗೆದುಕೊಂಡು ಹೋಗುತ್ತಿದ್ದ. ಅದಕ್ಕಾಗಿ 10–12 ಕಾರು ವಶಕ್ಕೆ ಪಡೆದು ಪರಿಶೀಲಿಸಿದ್ದೇವೆ. ಹೀಗಾಗಿ ಪ್ರಕರಣಕ್ಕೆ ಹತ್ತಿರವಾದ ಎಲ್ಲ ಸಾಕ್ಷಿಗಳ ವಿಚಾರಣೆ ಮಾಡಲಾಗುತ್ತದೆ ಎಂದು ತಿಳಿಸಿದ್ದಾರೆ.

ಸರಳ ಜೀವನದಿಂದ ಬದುಕು ಸುಂದರ, ಮತ್ತೊಬ್ಬರಿಗೆ ಮಾದರಿ

ಶರಣು ವಿಶ್ವವಚನ ಫೌಂಡೇಷನ್ ಕೇಂದ್ರಿಯ ಸಂಚಾಲಕಿ ಸುಧಾ ಮೃತ್ಯುಂಜಯ ಸಲಹೆ



ಮೈಸೂರು, ಜು.31(ಎಸ್‌ಪಿಎನ್)–ನಾವು ವೈಭವದ ಜೀವನಕ್ಕೆ ಆಸೆ ಪಡದೇ ಶರಣರ ತತ್ವದಂತೆ ಸರಳ ಜೀವನ ಅಳವಡಿಸಿಕೊಂಡರೆ ನಮ್ಮ ಬದುಕು ಸುಂದರವಾಗಿರುತ್ತದೆ ಹಾಗೂ ಇತರರಿಗೆ ಮಾದರಿಯಾಗಿರುತ್ತದೆ ಎಂದು ಶರಣು ವಿಶ್ವವಚನ ಫೌಂಡೇಷನ್ ಕೇಂದ್ರೀಯ ಸಂಚಾಲಕಿ ಸುಧಾ ಮೃತ್ಯುಂಜಯಪ್ಪ ತಿಳಿಸಿದರು. ಮೈಸೂರು ಜಿಲ್ಲೆ ನಂಜನಗೂಡು ತಾಲೂಕಿನ ಸುತ್ತೂರಿನ ಜೆಎಸ್‌ಎಸ್ ವಿದ್ಯಾಸಂಸ್ಥೆ ಆವರಣದಲ್ಲಿ ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ಡಾ. ಮೃತ್ಯುಂಜಯಪ್ಪ ಅವರ ದತ್ತಿ ಕಾರ್ಯಕ್ರಮ ಅಂಗವಾಗಿ ಆಯೋಜಿಸಿದ್ದ 'ಶಾಲೆಗಳೆಡೆಗೆ ವಚನಗಳ ನಡಿಗೆ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಡಾ.ಮೃತ್ಯುಂಜಯಪ್ಪನವರು ತಮ್ಮ ಮೂರು ಮಕ್ಕಳಿಗೂ ವಚನ ಮಾಂಗಲ್ಯ ಮಾಡಿಸಿ ಸರಳತೆಗೆ ಮುನ್ನುಡಿ ಬರೆದರಲ್ಲದೆ, ತಮ್ಮ ಜೀವಿತಾವಧಿಯಲ್ಲಿ ಶರಣರ ಆದರ್ಶದಂತೆ ಬದುಕಿದರು. ಹಾಗಾಗಿ ಶರಣ ತತ್ವಾದರ್ಶಗಳು ಸರ್ವಕಾಲಿಕ. ಹಾಗಾಗಿ ಇಂದಿನ ಯುವ ಪೀಳಿಗೆ ಎಲ್ಲವೂ ಬೇಕು ಬೇಕು ಎನ್ನುವ ಬದಲು ಬದುಕಿಗೆ ಅಗತ್ಯದಷ್ಟು ಮಾತ್ರ ಪಡೆಯುವ ಮನಸ್ಥಿತಿ ಬೆಳೆಸಿಕೊಳ್ಳುವುದು ಎಂದು ಸಲಹೆ ನೀಡಿದರು.

ಸುತ್ತೂರು ಸಂಸ್ಥೆಯ 40 ವಿದ್ಯಾರ್ಥಿಗಳು ಸಂಗೀತ ವಾದ್ಯಗಳ ಮೂಲಕ ವಚನ ಗಾಯನ ಮಾಡಿದರು. ನಂತರ ವಚನಗಾಯನದಲ್ಲಿ ಭಾಗವಹಿಸಿದ್ದ ಎಲ್ಲಾ ವಿದ್ಯಾರ್ಥಿಗಳಿಗೆ ವಚನ ದೀವಿಗೆ ಪ್ರಮಾಣಪತ್ರ ಹಾಗೂ ಬಹುಮಾನ ವಿತರಿಸಲಾಯಿತು.

ಈ ವೇಳೆ ಸುತ್ತೂರು ಜೆಎಸ್‌ಎಸ್ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಎಸ್.ಪಿ. ಉದಯಶಂಕರ್, ಶರಣು ವಿಶ್ವವಚನ ಫೌಂಡೇಷನ್ ಸಂಚಾಲಕಿ ರೂಪ ಕುಮಾರಸ್ವಾಮಿ, ಮುಖ್ಯಶಿಕ್ಷಕ ಜಿ. ಶಿವಮಲ್ಲು, ಸಂಸ್ಥಾಪಕ ವಚನ ಕುಮಾರಸ್ವಾಮಿ, ಉಪಾಧ್ಯಕ್ಷ ಶಿವಪುರ ಉಮಾಪತಿ, ಸಹ ಕಾರ್ಯದರ್ಶಿ ಶೀಲಾ ನಂದೀಶ್, ಶಿಕ್ಷಕರಾದ ಸಿ.ಪಿ ನಿರ್ಮಲ, ಕಾವ್ಯಶ್ರೀ, ಪಲ್ಲವಿ, ಕೆ.ಎಸ್. ಮಮತ, ಸಂಗೀತ ಶಿಕ್ಷಕ ಹಿರೇಮಠ ಉಪಸ್ಥಿತರಿದ್ದರು.

ಪ್ರವೀಣ್ ಅಂಗಡಿಯಿಂದ 500 ಮೀ. ದೂರದಲ್ಲೇ ಬಾಡಿಗೆ ಮನೆ ಪಡೆದು ಕೊಲೆ ಸಂಚು

ತನಿಖೆಯಲ್ಲಿ ಹೊರಬಿತ್ತು ಅಸಲಿ ಸತ್ಯ

ಮಂಗಳೂರು: ಪ್ರವೀಣ್ ನೆಟ್ಟಾರು ಹತ್ಯೆ ಕೇಸ್ ಬೆನ್ನಟ್ಟಿದ ಪೊಲೀಸರಿಗೆ ಸ್ಫೋಟಕ ಸತ್ಯವೊಂದು ಬಯಲಾಗಿದೆ. ಪೊಲೀಸರ ಒಂದು ಟೀಮ್ ಕರ್ನಾಟಕದಲ್ಲಿ, ಮತ್ತೊಂದು ಟೀಮ್ ಕೇರಳದಲ್ಲಿ, ಮತ್ತೊಂದು ಟೀಮ್ ಟೆಕ್ನಿಕಲ್ ಸಾಕ್ಷ್ಯ ಕಲೆ ಹಾಕ್ತಿದೆ. ಇನ್ನೊಂದು ತಂಡ ಆರೋಪಿಗಳಿಂದ ಸತ್ಯ ಹೊರಹಾಕಿಸುವ ಪ್ರಯತ್ನದಲ್ಲಿದೆ. ಸದ್ಯ ಈಗ ಪೊಲೀಸರ ತನಿಖೆಯಲ್ಲಿ ಪ್ರವೀಣ್ ನೆಟ್ಟಾರು ಹತ್ಯೆ ಪೂರ್ವನಿಯೋಜಿತ ಕೃತ್ಯ ಎನ್ನುವುದು ದೃಢಪಟ್ಟಿದೆ. ಹಾಗೂ ಹತ್ಯೆಗೆ ಯಾವ ರೀತಿ ಸಂಚು ರೂಪಿಸಲಾಗಿತ್ತು ಎಂಬ ಬಗ್ಗೆ ಮಾಹಿತಿ ಸಿಕ್ಕಿದೆ.

ದಕ್ಷಿಣ ಕನ್ನಡ ಜಿಲ್ಲೆ ಸುಳ್ಯ ತಾಲೂಕಿನ ಬೆಳ್ಳಾರೆಯಲ್ಲಿ ಪ್ರವೀಣ್ ಹತ್ಯೆಯಾಗಿತ್ತು. ಪ್ರವೀಣ್ ಹತ್ಯೆಗೂ ಮುನ್ನ ಹಂತಕರು ಬೀದಿ ದೀಪ ಆಫ್ ಮಾಡಿ ಬಳಿಕ ಕೊಲೆ ಮಾಡಿದ್ದಾರೆ ಎಂಬ ಸತ್ಯ ಬಯಲಾಗಿದೆ. ಆರೋಪಿಗಳು ಪ್ರವೀಣ್ ಅಂಗಡಿಯಿಂದ 500 ಮೀಟರ್ ದೂರದಲ್ಲಿ ಬಾಡಿಗೆ ಮನೆಮಾಡಿಕೊಂಡು ವಾಸವಿದ್ದರು ಎಂಬುವುದು ಬಹಿರಂಗವಾಗಿದೆ. ಪ್ರವೀಣ್ ಹತ್ಯೆ ಕೇಸ್‌ನಲ್ಲಿ ಶಫೀಕ್, ಜಾಕೀರ್ ಪಾತ್ರವಿರುವುದು ದೃಢವಾಗಿರುವ ಹಿನ್ನೆಲೆ ಸರ್ಚ್ ವಾರೆಂಟ್ ಪಡೆದು ಶಫೀಕ್ ಮನೆಯಲ್ಲಿ ಪೊಲೀಸರು ಶೋಧಕ್ಕೆ ಮುಂದಾಗಿದ್ದಾರೆ.

ಬೆಳ್ಳಾರೆ ಮುಖ್ಯರಸ್ತೆಯಲ್ಲೇ ಶಫೀಕ್ ಮನೆ ಇದ್ದು ಬಾಡಿಗೆ ಮನೆ ಪಡೆದು ತಂದೆ ತಾಯಿ ಜೊತೆ ಆರೋಪಿ ವಾಸವಿದ್ದ. ಇದೇ ಮನೆಯಲ್ಲಿ ಕುಳಿತು ಪ್ರವೀಣ್ ಹತ್ಯೆಗೆ ಬಲೆ ಹೆಣೆಯಲಾಗಿತ್ತು. ಈ ಮನೆ ಬೆಳ್ಳಾರೆ ಠಾಣೆಯಿಂದ 300 ಮೀಟರ್ ದೂರದಲ್ಲೇ ಇದೆ. ಹಾಗೂ ಪ್ರವೀಣ್ ಅಂಗಡಿಯಿಂದ 500 ಮೀಟರ್ ದೂರದಲ್ಲಿದೆ. ಇದೇ ಮನೆಯಲ್ಲಿ ಕುಳಿತು ಪ್ರವೀಣ್ ಚಲನವಲನ ಗಮನಿಸಿ ಕೊಲೆಗೆ ಹಂತಕರು ಪ್ಲ್ಯಾನ್ ಮಾಡಿಕೊಂಡಿದ್ದಾರೆ. ಪ್ರವೀಣ್ ಹತ್ಯೆಗೂ ಮುನ್ನ ಬೀದಿ ದೀಪ ಆಫ್ ಮಾಡಲಾಗಿದೆ. ಕೊಲೆ ದಿನ ಆ ಏರಿಯಾದಲ್ಲಿ ಕರೆಂಟ್ ಇದ್ದರೂ ಪವರ್ ಕಟ್ ಆಗಿತ್ತು. ಪ್ರವೀಣ್ ಅಂಗಡಿಯ 500 ಮೀಟರ್ ಸುತ್ತಾ ಮುತ್ತಾ ಆರೋಪಿಗಳು ಪವರ್ ಕಟ್ ಮಾಡಿಸಿದ್ದರು. ನಂತರ ಪ್ರವೀಣ್ ಅಂಗಡಿ ಬಳಿ ತೆರಳಿ ಮರ್ಡರ್ ಮಾಡಿದ್ದಾರೆ. ಹಾಗಾಗಿ ಯಾವ ಸಿಸಿಟಿವಿ ಕ್ಯಾಮೆರಾದಲ್ಲೂ ಆರೋಪಿಗಳ ಚಹರೆ ಸಿಕ್ಕಿಲ್ಲ. ಕೊಲೆ ಬಳಿಕ ಕಾದು ಕುಳಿತಿದ್ದ ಶಫೀಕ್ ಜಾಕಿರ್, ಹಂತಕರನ್ನು ಕರೆದೊಯ್ದಿದ್ದಿದ್ದಾರೆ. ಮನೆ ಮಾಲೀಕರನ್ನು ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ. ಒಂದು ವರ್ಷದಿಂದ ಇದೇ ಮನೆಯಲ್ಲಿ ವಾಸವಿರೋದಾಗಿ ಮಾಹಿತಿ ಸಿಕ್ಕಿದೆ.

ಸುತ್ತೂರು ಶಾಖಮಠದಲ್ಲಿ ಶ್ರಾವಣ ಮಾಸ ಆಚರಣೆ

ಪರಕೀಯರು ನಿರಂತರ ದಾಳಿ ನಡೆಸಿದರೂ ನಮ್ಮ ಆಧ್ಯಾತ್ಮಿಕ ಸಂಸ್ಕೃತಿ ನಾಶವಾಗಿಲ್ಲ

ಮೈಸೂರು, ಜು.31(ಎಸ್‌ಪಿಎನ್)–ಅನಾಧಿ ಕಾಲದಿಂದಲೂ ಭಾರತೀಯ ಸಂಸ್ಕೃತಿಯ ಮೇಲೆ ಆಗಿರುವಷ್ಟು ದಾಳಿ ಜಗತ್ತಿನ ಯಾವ ಸಂಸ್ಕೃತಿ ಮೇಲೂ ನಡೆದಿಲ್ಲ ಎಂದು ಮೈಸೂರು ವಿವಿ ಸಂಜೆ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಕೆ.ಅನಂತಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠದಲ್ಲಿ ಶ್ರಾವಣ ಮಾಸದ 2ನೇ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಮ್ಮನ್ನು ಸಂಸ್ಕಾರಕ್ಕೆ ಒಳಗು ಮಾಡಿದ್ದೇ ಸಂಸ್ಕೃತಿ. ನಮ್ಮಲ್ಲಿರುವ ದೋಷಗಳನ್ನು ತೆಗೆದು ಹಾಕಿ, ಗುಣಗಳನ್ನು ಜೋಡಿಸಿದ್ದು, ಸಂಸ್ಕೃತಿ. ಪ್ರತಿ ಹಂತದಲ್ಲೂ ನಮ್ಮ ಸಂಸ್ಕೃತಿ ಮೇಲೆ ಪರಕೀಯರಿಂದ ದಾಳಿ ನಡೆದಿವೆ. ಪದೆ ಪದೇ ದಾಳಿ ನಡೆಸಿದರೂ ನಮ್ಮ ಆಧ್ಯಾತ್ಮಿಕ ಸಂಸ್ಕೃತಿ ನಾಶವಾಗಿಲ್ಲ. ಇದಕ್ಕೆ ಸಾವಿರಾರು ವರ್ಷ ಇತಿಹಾಸವುಳ್ಳ ಸುತ್ತೂರು ಮಠವೇ ಸಾಕ್ಷಿ ಎಂದರು.

ನಮ್ಮ ಸಂಸ್ಕೃತಿ ಇಲ್ಲಿಯವರೆಗೂ ಉಳಿದುಕೊಳ್ಳಲು ಅದರಲ್ಲಿರುವ ತ್ಯಾಗದ ಗುಣ ಕಾರಣ. ನಮ್ಮ ದೇಶದಲ್ಲಿ ಅದೆಷ್ಟು ಅರಮನೆಗಳು ನಾಶವಾಗಿವೆ. ಏಕೆಂದರೆ ಅದು ಭೋಗ ಸಂಸ್ಕೃತಿ. ವ್ಯಾಸರು ಹೀಗೆ ಹೇಳುತ್ತಾರೆ. ಪರೋಪಕಾರ ಮಾಡುವುದೇ ಪುಣ್ಯ, ಇನ್ನೊಬ್ಬರಿಗೆ ನೋವುಂಟು ಮಾಡಿದರೆ ಅದು ಪಾಪ ಎಂದು ಹೇಳಿದ್ದಾರೆ.

ಈ ಪ್ರಕೃತಿ ಪರಮಾತ್ಮನ ಸೃಷ್ಟಿ. ಅದನ್ನು ಸುಂದರವಾಗಿಸಿಕೊಳ್ಳುವುದು ಸಂಸ್ಕೃತಿ. ಅದನ್ನು ಕಲುಷಿತಗೊಳಿಸುವುದು ವಿಕೃತಿ. ಭಗವಂತ ಕೊಟ್ಟ ಸಂಪತ್ತಿನಿಂದ ಆಸೆಗಳನ್ನು ಈಡೇರಿಸಿಕೊಳ್ಳಬಹುದು. ಆದರೆ ಅದನ್ನು ಕಲುಷಿತಗೊಳಿಸುವುದು ವಿಕೃತಿ ಎಂದರು. ಈ ವೇಳೆ ತಿ.ನರಸೀಪುರದ ಸುಂದರಮ್ಮ ಮತ್ತು ಕುಟುಂಬದ ಸದಸ್ಯರು ಕಾರ್ಯಕ್ರಮದ ಸೇವಾರ್ಥ ನೆರವೇರಿಸಿದರು. ಈ ವೇಳೆ ಭಕ್ತಾದಿಗಳು ಹಾಗೂ ಆಧ್ಯಾತ್ಮಿಕ ಜಿಜ್ಞಾಸುಗಳು ಉಪಸ್ಥಿತರಿದ್ದರು.

ಡಾಂಬರು ರಸ್ತೆ ಕೆಸರು ಗದ್ದೆಯಂತಾಯಿತು

ಪಾಲಿಕೆಯ ಅವೈಜ್ಞಾನಿಕ ಕಾಮಗಾರಿಗೆ ಸಾರ್ವಜನಿಕರ ಆಕ್ರೋಶ





ಮೈಸೂರು, ಜು.31(ಜಿಎ)– ಮೈಸೂರು ಮಹಾನಗರ ಪಾಲಿಕೆ ನಗರದ ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗ ಮಾಡಿರುವ ಡಾಂಬರೀಕರಣ ಕಿತ್ತು ಗುಂಡಿ ಬಿದಿರುವುದನ್ನು ದುರಸ್ತಿ ಮಾಡುವ ಬದಲು ಅವೈಜ್ಞಾನಿಕ ಕೆಲಸ ಮಾಡಿ ಸಾರ್ವನಿಕರ ಆಕ್ರೋಶಕ್ಕೆ ಗುರಿಯಾಗುತ್ತಿದೆ. ಮೈಸೂರಿನ ಗಾಮಾಂತರ ಬಸ್ ನಿಲ್ದಾಣದ ಮುಂಭಾಗದ ರಸ್ತೆಯಲ್ಲಿ ಡಾಂಬರ್ ಕಿತ್ತು ಬಂದಿರುವ ಕುರಿತು 'ಮೈಸೂರು ಮಿತ್ರ' ಜು.12ರ ಸಂಚಿಕೆಯಲ್ಲಿ 'ಪ್ರಧಾನಿ ಮೋದಿ ಆಗಮನದಿಂದ ಡಾಂಬರ್ ಭಾಗ್ಯ ಕಂಡಿದ್ದ ರಸ್ತೆ ಇದೀಗ ಗುಂಡಿಮಯ!' ಎಂಬ ಶೀರ್ಷಿಕೆ ಅಡಿ ವರದಿ ಮಾಡಿತ್ತು. ಡಾಂಬರ್ ರಸ್ತೆ ಈಗ ಕೆಸರು ಗದ್ದೆಯಂತೆಯಾಗುತ್ತಿದೆ.

ವರದಿ ಪ್ರಕಟವಾದ ಮರು ದಿನವೇ ಎಚ್ಚೆತ ಪಾಲಿಕೆ ಅಧಿಕಾರಿಗಳು ಮಾಡಿರುವುದು ಮಾತ್ರ ಅವಾಂತರದ ದುರಸ್ತಿ. ಮರು ದಿನವೇ ಸ್ಥಳಕ್ಕೆ ಭೇಟಿ ನೀಡಿ ಸಂಪೂರ್ಣ ಮಣ್ಣಿನಿಂದ ಗುಂಡಿಗಳಿಗೆ ಮುಚ್ಚಿದ್ದಾರೆ. ಅದು ಈಗ ಕೆಸರಿನ ರಸ್ತೆಯಂತಾಗಿದೆ. ಗುಂಡಿಯಲ್ಲಿ ನೀರು ನಿಲ್ಲದಂತೆ ಮಾಡಬೇಕಿತ್ತು. ಅದರ ಬದಲು ನೀರು ಹರಿಯುವಂತೆ ಮಾಡಿ 100 ಮೀಟರ್ ದೂರದಲ್ಲಿ ಪಿಟ್ ಮಾದರಿ ಬೃಹತ್ ಮರದ ಸುತ್ತ ಗುಂಡಿಯನ್ನು ತೆಗೆಯಲಾಗಿದೆ. ರಸ್ತೆಯಲ್ಲಿರುವ ಗುಂಡಿಯಿಂದ ಹರಿದುಬರುವ ನೀರು ನೇರವಾಗಿ ಈ ಮರದ ಸುತ್ತವಿರುವ ಗುಂಡಿಯಲ್ಲಿ ಸಂಗ್ರಹವಾಗುತ್ತಿದ್ದು, ಸಂಜೆಯಾದರೇ ಈ ರಸ್ತೆ ಮೂಲಕ ಹಾದು ಹೋಗುವ ಸಾರ್ವಜನಿಕರು ಸೊಳ್ಳೆ ಕಾಟದಿಂದ ಹೈರಾಣಾಗುತ್ತಿದ್ದಾರೆ. ಈ ರಸ್ತೆ ಡಾಂಬರೀಕರಣ ಮಾಡಿದ್ದಾಗ ಸಂತಸ ವ್ಯಕ್ತಪಡಿಸಿದರು. ಪಾಲಿಕೆಯ ಈ ವೈಜ್ಞಾನಿಕ ದುರಸ್ತಿ ಕಾಮಗಾರಿ ನೋಡಿ ಅಧಿಕಾರಿಗಳ ವಿರುದ್ಧ ಬಾರೀ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಭಾರಿ ಪ್ರಮಾಣದ ಹಣದೊಂದಿಗೆ ಸಿಕ್ಕಿಬಿದ್ದಿದ್ದ ಜಾರ್ಖಂಡ್‌ನ ಮೂವರು ಕಾಂಗ್ರೆಸ್ ನಾಯಕರ ಅಮಾನತು

ನವದೆಹಲಿ: ಶನಿವಾರ ಪಶ್ಚಿಮ ಬಂಗಾಳದಲ್ಲಿ ಪ್ರಯಾಣಿಸುತ್ತಿದ್ದ ವೇಳೆ ತಮ್ಮ ವಾಹನದಲ್ಲಿ ಅಪಾರ ಪ್ರಮಾಣದ ನಗದು ಪತ್ತೆಯಾದ ಬಳಿಕ ಜಾರ್ಖಂಡ್‌ನ ಮೂವರು ಕಾಂಗ್ರೆಸ್ ಶಾಸಕರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಭಾನುವಾರ ಪಕ್ಷದಿಂದ ಅಮಾನತುಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ಯಾವುದೇ ಸಾರ್ವಜನಿಕ ಪ್ರತಿನಿಧಿಯಾಗಲಿ, ಪಕ್ಷದ ಪದಾಧಿಕಾರಿಯಾಗಲಿ, ಕಾರ್ಯಕರ್ತರಾಗಲಿ ಎಲ್ಲರ ಮಾಹಿತಿಯನ್ನು ನಮ್ಮ ಬಳಿ ಇಟ್ಟುಕೊಂಡಿದ್ದೇವೆ. ಈ ಸಂಬಂಧ ಯಾರೇ ಶಾಮೀಲಾಗಿದ್ದರೂ ಅವರ ವಿರುದ್ಧ ಪಕ್ಷ ಕ್ರಮ ಕೈಗೊಳ್ಳಲಿದೆ ಎಂದು ಜಾರ್ಖಂಡ್ ಕಾಂಗ್ರೆಸ್‌ನ ಕಾರ್ಯದರ್ಶಿ ಮತ್ತು ಉಸ್ತುವಾರಿ ಅವಿನಾಶ್ ಪಾಂಡೆ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ನನ್ನ ಕಕ್ಷಿದಾರರು ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದಿಸಿರುವ ಜಮೀನನ್ನು ಅದರ ಮಾಲೀಕರಾದ ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಬದನವಾಳು ಗ್ರಾಮದಲ್ಲಿ ವಾಸವಾಗಿರುವ ಲೇ. ಮಹದೇವಪ್ಪ ರವರ ಧರ್ಮಪತ್ನಿಯಾದ, ಸುಮಾರು 82 ವರ್ಷ ವಯಸ್ಸಿನ, ಬಿ.ಎಸ್. ರತ್ನಮ್ಮ ಹಾಗೂ ಲೇ. ಮಹದೇವಪ್ಪ ರವರ ಮಕ್ಕಳಾದ ಬಿ.ಎಂ. ಮಹದೇವಪ್ರಸಾದ್ ಸುಮಾರು 53 ವರ್ಷ ವಯಸ್ಸು ಮತ್ತು ಬಿ.ಎಂ. ವೀಣಾದೇವಿ ಸುಮಾರು 57 ವರ್ಷ ವಯಸ್ಸು, ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಸದರಿ ಷೆಡ್ಯೂಲ್ ಸ್ವತ್ತು, ಅವರಿಗೆ ದಿನಾಂಕ 24–01–1991 ರಂದು ನೋಂದಾಯಿತ ವಿಭಾಗ ಪತ್ರದ ಮೂಲಕ ಬಂದು ಲೇ. ಮಹೇದೇವಪ್ಪರವರ ಧರ್ಮಪತ್ನಿಯಾದ ಬಿ.ಎಸ್. ರತ್ನಮ್ಮ ರವರ ಹೆಸರಿಗೆ ಖಾತೆಯಾಗಿರುತ್ತದೆ. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಹಕ್ಕು, ತಂಟೆ, ತಕರಾರು ಇದ್ದಲ್ಲಿ, ಈ ಕೆಳಗೆ ನಮೂದಿಸಿರುವ ವಕೀಲರನ್ನು 15 ದಿನಗಳೊಳಗೆ ಸೂಕ್ತ ದಾಖಲಾತಿಗಳೊಂದಿಗೆ ಸಂಪರ್ಕಿಸತಕ್ಕದ್ದು.

ಷೆಡ್ಯೂಲ್

ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಕಸಬಾ ಹೋಬಳಿ, ಬದನವಾಳು ಗ್ರಾಮದ ಸರ್ವೆ ನಂಬರ್ 31 ರ 6 ಎಕರೆ 23 ಗುಂಟೆ ಪೈಕಿ 4 ಎಕರೆ 20 ಗುಂಟೆ ಜಮೀನು, ಸದರಿ ಜಮೀನಿಗೆ ಚಕ್ಕುಬಂದಿ ಈ ಕೆಳಕಂಡಂತಿರುತ್ತದೆ.

ಪೂರ್ವಕ್ಕೆ: 16 ಅಡಿ ರಸ್ತೆ ; ಪಶ್ಚಿಮಕ್ಕೆ: ಕುಂಡಪ್ಪ ರವರ ಸ್ವತ್ತು (ಸ.ನಂ. 32) ; ಉತ್ತರಕ್ಕೆ: ಪ್ರಭುಸ್ವಾಮಿ ರವರ ಸ್ವತ್ತು (ಸ.ನಂ. 25) ; ದಕ್ಷಿಣಕ್ಕೆ: ಸ.ನಂ. 31 ರ ಉಳಿಕೆ ಜಮೀನು.

ಸಹಿ/– ಬಿ.ಎಸ್. ಸಾವಂತ್, ವಕೀಲರು
#1079/ಎ, 1ನೇ ಮಹಡಿ, ರೈಲ್ವೆ ಸ್ಟೇಷನ್ ರಸ್ತೆ,
ಚಾಮರಾಜಪುರಂ, ಮೈಸೂರು–570 005.
ಮೊ: 9740097497

ದಿನಾಂಕ: 30–07–2022

ಅಭಿನಂದನೆಗಳು



ಸೃಷ್ಟಿ.ವಿ

ಎಸ್‌ಎಸ್‌ಎಲ್‌ಸಿ (ಸಿಬಿಎಸ್‌ಸಿ ಬೋರ್ಡ್) ಯಲ್ಲಿ ಶೇ.94 ಅಂಕಗಳಿಸಿ, ಸಿಎಫ್‌ಟಿಆರ್‌ಐ ಶಾಲೆಗೆ ಮೊದಲ ಸ್ಥಾನಗಳಿಸಿರುವಂತಹ ಸೃಷ್ಟಿ.ವಿ ಇವರಿಗೆ ಅಭಿನಂದನೆಗಳು, ಇವರ ಮುಂದಿನ ಭವಿಷ್ಯ ಪ್ರಜ್ವಲವಾಗಿರಲಿ ಎಂದು ಆಶಿಸುವ, ತಂದೆ : ವೆಂಕಟೇಶ್, ತಾಯಿ : ಸುವರ್ಣ, ತಂಗಿ: ಸುಶ್ಮಾ.ವಿ

30ನೇ ವರ್ಷದ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ಶ್ರೀಮತಿ ಮಹಾದೇವಿ & ಶ್ರೀ ಕೃಷ್ಣ

ಶುಭಕೋರುವವರು: ಶ್ರೀಮತಿ ಸಿಂಧೂರಾಣಿ
ಶ್ರೀ ಮಂಜುನಾಥ್, ಶ್ರೀಮತಿ ಅನ್ನಪೂರ್ಣ
ಶ್ರೀ ಮಹೇಶ್ ಕುಮಾರ್, ಚಿ॥ ವೈಭವ್‌ರಾಜ್
ಚಿ॥ ಸಾಕೇತ್ ರಾಜ್, ಕ್ಯಾತಮಾರನಹಳ್ಳಿ, ಮೈಸೂರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಬೋರಯ್ಯ(ಚಿಕ್ಕಕೋಟಿ ಚಿಕ್ಕಣ್ಣ)ನವರು

ದಿ. 01.08.2022 ಸೋಮವಾರ ಬೆಳಿಗ್ಗೆ 11 ಗಂಟೆಗೆ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ಶ್ರೀ ಮರುಳೇಶ್ವರ ಶಾಂತಿ ಧಾಮ, ಆದಿಚುಂಚನಗಿರಿ ರಸ್ತೆ, ಕಾವೇರಿ ಶಾಲೆ ಹತ್ತಿರ ಕುವೆಂಪುನಗರ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ಸಾವಿತ್ರಮ್ಮ ಲೇಟ್ ಬೋರಯ್ಯನವರ ಧರ್ಮಪತ್ನಿ, ಶ್ರೀ ಕುಮಾರ, ಶ್ರೀ ಮಹೇಶ, ಹೆಣ್ಣುಮಕ್ಕಳು, ಅಳಿಯಂದಿರು, ಹಾಗೂ ಕುಟುಂಬವರ್ಗ

